KA / BG-GPO /2515 / WPP-47 / 2009-2011



# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪ || ಬೆಂಗಳೂರು, ಗುರುವಾರ, ಮೇ ೨೮, ೨೦೦೯ ( ಜ್ಯೇಷ್ಠ ೭, ಶಕವರ್ಷ ೧೯೩೧) || ಸಂಚಿಕೆ ೨೨

## ವಿಷಯಸೂಚಿ

# 17.5.2009 ರಿಂದ 22.5.2009 ರವರೆಗೆ ಪ್ರಕಟಣೆಗೊಂಡ ವಿಶೇಷ ರಾಜ್ಯಪತ್ರಗಳ ಪಟ್ಟಿ

| ಸಂಖ್ಯೆ | ದಿನಾಂಕ | ಅಧಿಸೂಚನೆ ಸಂಖ್ಯೆ, ದಿನಾಂಕ ಮತ್ತು ವಿವರ |
|---|---|---|
| 307 | 18.5.2009 | ಸಂಖ್ಯೆ: ಜ-12 /ಪ್ರೌ.ಶಾಶಿ/ನೇಮಕ-01/ 2009-10, ದಿನಾಂಕ: 18ನೇ ಮೇ, 2009 – 2009-10ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ ಮಟ್ಟದಲ್ಲಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಪ್ರೌಢ ಶಾಲಾ ಸಹಾಯಕ ಶಿಕ್ಷಕರು (ಗ್ರೇಡ್-2) ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು (ಗ್ರೇಡ್-1) ವೃಂದದ ಶಿಕ್ಷಕರನ್ನು ನೇರ ನೇಮಕಾತಿ ಮೂಲಕ ಆಯ್ಕೆ ಮಾಡುವ ಕುರಿತು. |
| 308 | 18.5.2009 | ಸಂಖ್ಯೆ: ಎ-10/ಸಂಗೀತ ಶಿಕ್ಷಕರು/ನೇಮಕಾತಿ/01/2009-10, ದಿನಾಂಕ: 18ನೇ ಮೇ, 2009 – 2009-10 ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಮೈಸೂರು ವಿಭಾಗದಲ್ಲಿನ ಸರ್ಕಾರಿ ಪ್ರೌಢ ಶಾಲೆ/ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲೆ ವಿಭಾಗ) ಗಳಲ್ಲಿರುವ ಸಂಗೀತ ಶಿಕ್ಷಕರು ಗ್ರೇಡ್-2 (ಹಾಡುಗಾರಿಕೆ ಮಾತ್ರ) ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಆಯ್ಕೆ ಮಾಡುವ ಕುರಿತು. |
| 309 | 18.5.2009 | ಸಂಖ್ಯೆ: ಇ-3/ಪ್ರೌಶಾನೇ/27/2009-10, ದಿನಾಂಕ: 18ನೇ ಮೇ, 2009 – 2009-10ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ ವಿಭಾಗ ಮಟ್ಟದಲ್ಲಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಪ್ರೌಢ ಶಾಲಾ ಸಹಾಯಕ ಶಿಕ್ಷಕರು (ಗ್ರೇಡ್-2) ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು (ಗ್ರೇಡ್-1) ವೃಂದದ ಶಿಕ್ಷಕರನ್ನು ನೇರ ನೇಮಕಾತಿ ಮೂಲಕ ಆಯ್ಕೆ ಮಾಡುವ ಕುರಿತು. |
| 310 | 18.5.2009 | ಸಂಖ್ಯೆ: ಇ-4/ವಿಶಿನೇ (ಸಂಗೀತ)/2009-10, ದಿನಾಂಕ: 18ನೇ ಮೇ, 2009 – 2009-10 ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ ವಿಭಾಗದಲ್ಲಿನ ಸರ್ಕಾರಿ ಪ್ರೌಢ ಶಾಲೆ/ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲೆ ವಿಭಾಗ) ಗಳಲ್ಲಿರುವ ಸಂಗೀತ ಶಿಕ್ಷಕರು ಗ್ರೇಡ್-2 (ಹಾಡುಗಾರಿಕೆ ಮಾತ್ರ) ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಆಯ್ಕೆ ಮಾಡುವ ಕುರಿತು. |
| 311 | 18.5.2009 | ಸಂಖ್ಯೆ: ಇ-1(ಎ)/ಆಡಳಿತ/ಪ್ರೌಶಾಶಿ/ಆಯ್ಕೆ/99/2009-10, ದಿನಾಂಕ: 18ನೇ ಮೇ, 2009 – 2009-10ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ವಿಭಾಗ ಮಟ್ಟದಲ್ಲಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಪ್ರೌಢ ಶಾಲಾ ಸಹಾಯಕ ಶಿಕ್ಷಕರು (ಗ್ರೇಡ್-2) ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು (ಗ್ರೇಡ್-1) ವೃಂದದ ಶಿಕ್ಷಕರನ್ನು ನೇರ ನೇಮಕಾತಿ ಮೂಲಕ ಆಯ್ಕೆ ಮಾಡುವ ಕುರಿತು. |
| 312 | 18.5.2009 | ಸಂಖ್ಯೆ: ಇ-(1)ಎ ಆಡಳಿತ/ಸಂಗೀತ ಶಿಕ್ಷಕರ/ಆಯ್ಕೆ/100/2009-10, ದಿನಾಂಕ: 18ನೇ ಮೇ, 2009 – 2009-10 ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಗುಲ್ಬರ್ಗಾ ವಿಭಾಗದಲ್ಲಿನ ಸರ್ಕಾರಿ ಪ್ರೌಢ ಶಾಲೆ/ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲೆ ವಿಭಾಗ) ಗಳಲ್ಲಿರುವ ಸಂಗೀತ ಶಿಕ್ಷಕರು ಗ್ರೇಡ್-2 (ಹಾಡುಗಾರಿಕೆ ಮಾತ್ರ) ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಆಯ್ಕೆ ಮಾಡುವ ಕುರಿತು. |
| 313 | 18.5.2009 | ಸಂಖ್ಯೆ: ಆ-1/ಪ್ರೌ.ಶಾಶಿ/ನೇಮಕ-01/2009-10, ದಿನಾಂಕ: 18ನೇ ಮೇ, 2009 – 2009-10ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ವಿಭಾಗ ಮಟ್ಟದಲ್ಲಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಪ್ರೌಢ ಶಾಲಾ ಸಹಾಯಕ ಶಿಕ್ಷಕರು (ಗ್ರೇಡ್-2) ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು (ಗ್ರೇಡ್-1) ವೃಂದದ ಶಿಕ್ಷಕರನ್ನು ನೇರ ನೇಮಕಾತಿ ಮೂಲಕ ಆಯ್ಕೆ ಮಾಡುವ ಕುರಿತು. |
| 314 | 18.5.2009 | ಸಂಖ್ಯೆ: ಅ5/ಪ್ರೌ.ಶಾ. ಸಂಗೀತ ಶಿಕ್ಷಕರ ನೇ/01/2009-10, ದಿನಾಂಕ: 18ನೇ ಮೇ, 2009 – 2009-10 ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಬೆಂಗಳೂರು ವಿಭಾಗದಲ್ಲಿನ ಸರ್ಕಾರಿ ಪ್ರೌಢ ಶಾಲೆ/ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲೆ ವಿಭಾಗ) ಗಳಲ್ಲಿರುವ ಸಂಗೀತ ಶಿಕ್ಷಕರು ಗ್ರೇಡ್-2 (ಹಾಡುಗಾರಿಕೆ ಮಾತ್ರ) ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಆಯ್ಕೆ ಮಾಡುವ ಕುರಿತು. |
| 315 | 18.5.2009 | ಸಂ. ಸಿಆಸುಇ 01 ಚುವಿಸ 2009, ದಿ. 18.5.2009 – 1951ರ ಪ್ರ.ಪ್ರಾ.ಅ.ದ ಪ್ರಕರಣದ 66ರ ಅಡಿ ಚುನಾವಣಾ ಫಲಿತಾಂಶ ಘೋಷಣೆ – 50 – ಬೀದರ್ ವಿಧಾನ ಸಭಾ ಕ್ಷೇತ್ರ. |
| 316 | 18.5.2009 | ಸಂ. ಸಂವ್ಯಶಾಇ 15 ಶಾಸನ 2008 (ಭಾ), ದಿ. 15.5.2009 – ಕರ್ನಾಟಕ ಧನ ವಿನಿಯೋಗ (ಸಂಖ್ಯೆ 1) ಅಧಿನಿಯಮ, 2008 – ತಿದ್ದೋಲೆ. |
| 317 | 18.5.2009 | ಸಂ. ಇಡಿ 303 ಎಸ್‌ಇಪಿ 2007, ದಿ. 20.3.2009 – ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ಕ್ಷೇತ್ರ ಇಲಾಖೆಗಳ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಪ್ರತಿವಾದಿಗಳಾಗಿರುವ ನ್ಯಾಯಾಲಯ ಪ್ರಕರಣಗಳಲ್ಲಿ ಆಕ್ಷೇಪಣಾ ಹೇಳಿಕೆಗಳನ್ನು ತಯಾರಿಸಿ ಕೊಡುವ ಕೆಲಸವನ್ನು ನಿವೃತ್ತ ನ್ಯಾಯಾಧೀಶರುಗಳಿಗೆ ವಹಿಸುವ ಬಗ್ಗೆ. |
| 318 | 19.5.2009 | No. HD 23 POP 2009, Dt. 6.5.2009 – Jurisdiction of Police Station – Hassan District Arsikere Sub-Division. |
| 319 | 19.5.2009 | ಸಂ. ಸಿಆಸುಇ 42 ಶಿಸನೇ 2009, ದಿ. 5.5.2009 – ಡಾ.ಎಸ್.ಸಿ.ಶಂಕರಲಿಂಗಯ್ಯ ಇವರನ್ನು ಮುಖ್ಯಮಂತ್ರಿಯವರ ಆಪ್ತ ವೈದ್ಯರನ್ನಾಗಿ ಕೂಡಲೇ ಜಾರಿಗೆ ಬರುವಂತೆ ನೇಮಿಸುವ ಬಗ್ಗೆ. |
| 320 | 20.5.2009 | No. BWSSB/CAO-S/23-02-08/495/09-10, Dt. 20.5.2009 – Absorption of the Service of Sri S.Sudhir, AE, KPCL in BWSSB. |
| 321 | 20.5.2009 | No. TRD 107 SAEPA 2009, Dt. 5.5.2009 – Exempt from payment of Road Tax to Consul Consulate of Japan. |
| 322 | 21.5.2009 | No. FD 20 PES 2005, Dt. 21.5.2009 – Draft Rules – Karnataka Excise (Lease of Right of retail vend of Wine) (Amendment) Rules, 2009. |
| 323 | 21.5.2009 | No. FD 31 EDC 2008, Dt. 21.05.2009 – Draft Rules – Karnataka Excise (Tapping of Trees) (Amendment) Rules, 2009. |
| 324 | 21.5.2009 | No. HD 216 SST 2009, Dt. 21.5.2009 – Licensing of Controlling of Assemblies & Processions (Bangalore City) Order, 2009. |
| 325 | 22.5.2009 | ಸಂ. ಆಇ 439 ವೆಚ್ಚ-12/09, ದಿ. 6.5.2009 – ನಗರಾಭಿವೃದ್ಧಿ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಡಿ ವಿನಾಯಿತಿ ನೀಡುವ ಬಗ್ಗೆ. |

ವಾರದ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು

**http//www.Kar.nic.in/gazette.**

## ಕರ್ನಾಟಕ ರಾಜ್ಯಪತ್ರವನ್ನು ಅಂತರಜಾಲದಲ್ಲಿ ವೀಕ್ಷಿಸಬಹುದು
## http//www.Kar.nic.in/gazette.

### ೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪರಿಷ್ಕೃತ ಚಂದಾ ದರ

| ಕ್ರಮ ಸಂಖ್ಯೆ | ರಾಜ್ಯಪತ್ರದ ಭಾಗಗಳು | ಪ್ರತಿ ಒಂದಕ್ಕೆ ರೂ. ಪೈ. | ವಾರ್ಷಿಕ ಚಂದಾ ದರ ರೂ. ಪೈ. |
|---|---|---|---|
| 1. | ಭಾಗ - 1 ........................................ | 12-00 | 700-00 |
| 2. | ಭಾಗ - 2 ........................................ | 4-00 | 208-00 |
| 3. | ಭಾಗ - 3 ........................................ | 30-00 | 1075-00 |
| 4. | ಭಾಗ - 4 ........................................ | 3-00 | 240-00 |
| 5. | ಭಾಗ - 4ಎ ........................................ | 8-00 | 285-00 |
| 6. | ಭಾಗ - 5 ........................................ | 13-00 | 528-00 |
| 7. | ಭಾಗ - 6 (ಬೆಂಗಳೂರು)................................ | 7-00 | 325-00 |
| 8. | ಭಾಗ - 6ಎ (ಮೈಸೂರು)................................ | 50-00 | 1111-00 |
| 9. | ಭಾಗ - 6ಬಿ (ಧಾರವಾಡ)................................ | 25-00 | 1637-00 |
| 10. | ಭಾಗ - 6ಸಿ (ಗುಲ್ಬರ್ಗ)................................ | 29-00 | 1469-00 |
| 11. | ಸಂಪೂರ್ಣ ಕರ್ನಾಟಕ ರಾಜ್ಯಪತ್ರ ಕ್ರ. ಸ. 1 ರಿಂದ 7 (ಭಾಗ-1 ರಿಂದ 6) ವಿಶೇಷ ರಾಜ್ಯಪತ್ರವನ್ನು ಹೊರತುಪಡಿಸಿ | 77-00 | 3360-00 |
| 12. | ವಿಶೇಷ ರಾಜ್ಯಪತ್ರಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಪಡೆಯಿರಿ ಮತ್ತು ಸರ್ಕಾರಿ ಪುಸ್ತಕ ಮಳಿಗೆಗಳಲ್ಲಿ ಮಾರಾಟಕ್ಕೆ ಲಭ್ಯವಿರುತ್ತವೆ. | | |

### ೨೦೦೯-೨೦೧೦ನೇ ಇಸವಿಯ ಕರ್ನಾಟಕ ರಾಜ್ಯಪತ್ರದ ಪ್ರಕಟಣೆ ದರ

| ಕ್ರಮ ಸಂಖ್ಯೆ | ಪ್ರಕಟಣೆ ದರಗಳು | | ಮೊತ್ತ ರೂ. ಪೈ. |
|---|---|---|---|
| 1. | ಸ್ಥಳೀಯ / ಸ್ಥಾನಿಕ ಸಂಸ್ಥೆ ಮತ್ತು ಸರ್ಕಾರದ ಇಲಾಖೆ ಎ4 ಅಳತೆಯ ಪ್ರತಿ ಪುಟಕ್ಕೆ | ... | 500-00 |
| 2. | ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್ | ... | 7-00 |
| 3. | ಖಾಸಗಿ ಸಂಸ್ಥೆ ಮತ್ತು ವಾಣಿಜ್ಯಕ್ಕೆ ಸಂಬಂಧಿಸಿದಂತೆ (ಕೆಪಿಟಿಸಿಎಲ್, ಕೆಎಸ್‌ಆರ್‌ಟಿಸಿ ತರಹ ಇತ್ಯಾದಿ ಪ್ರತಿ ಪುಟಕ್ಕೆ) | ... | 750-00 |
| 4. | ಪ್ರತಿ ಸಾಲಿನ 43 ಎಮ್ಸ್ ಅಥವಾ 2 ಸಾಲಿನ 21 ಎಮ್ಸ್ | ... | 11-00 |
| 5. | ಅರ್ಧ ಪುಟಕ್ಕೆ ಅಥವಾ ಕಾಲು ಪುಟಕ್ಕೆ ಬರುವ ವಿಷಯ | ... | ½ ಅಥವಾ ¼ ಪುಟಕ್ಕೆ ದರ ನಿಗಧಿ |
| 6. | ಕಾಲು ಪುಟಕ್ಕಿಂತ ಕಡಿಮೆ ಇರುವ ವಿಷಯಕ್ಕೆ | ... | ಕ್ರಮ ಸಂಖ್ಯೆ 1 ಮತ್ತು 3 ಕ್ರಮ ಸಂಖ್ಯೆ 2 ಮತ್ತು 4 ರಲ್ಲಿ ನಮೂದಿಸಿರುವಂತೆ ಪ್ರತಿ ಸಾಲಿಗೆ ದರ ನಿಗಧಿಪಡಿಸಿರುವುದು. |
| 7. | ಹೆಚ್ಚಾಗಿ ಬೇಕಾಗಿರುವ ಪ್ರತಿ ಹಾಳೆಯ ಬೆಲೆ (ಮುದ್ರಿಸಿರುವ ಹಾಳೆಯ ಅಳತೆಯನ್ನು ನಿರೂಪಿಸಿ) | ... | 1-00 |

ಸೂಚನೆ :-
1. ಚಂದಾಹಣದ / ಪ್ರಕಟಣಾ ವೆಚ್ಚದ ಮೊತ್ತವನ್ನು "0058 ಲೇಖನ ಸಾಮಗ್ರಿ ಮತ್ತು ಮುದ್ರಣ (1) ರಾಜ್ಯಪತ್ರ ಮತ್ತು ಇತರ ಪ್ರಕಟಣಾ ವೆಚ್ಚಗಳು" ಖಜಾನೆಗೆ ಸಲ್ಲಿಸಿ, ಮೂಲ ಚಲನನ್ನು ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ಕಳುಹಿಸಬೇಕು.
2. ಭಾಗ VI-ಎ, VI-ಬಿ, VI-ಸಿ ಗಳನ್ನು ಅನುಕ್ರಮವಾಗಿ ಮೈಸೂರು, ಧಾರವಾಡ ಮತ್ತು ಗುಲ್ಬರ್ಗಾದ ಶಾಖಾ ಮುದ್ರಣಾಲಯಗಳಿಂದ ಪಡೆಯಬಹುದು.
3. ಕರ್ನಾಟಕ ರಾಜ್ಯ ಪತ್ರಕ್ಕಾಗಿ ಈ ಕೆಳಕಂಡ ವಿಳಾಸದಲ್ಲಿ ಪತ್ರ ವ್ಯವಹರಿಸತಕ್ಕದ್ದು.

ಸಂಕಲನಾಧಿಕಾರಿಗಳು,
ಕರ್ನಾಟಕ ರಾಜ್ಯಪತ್ರ,
ಸರ್ಕಾರಿ ಹೊರವಲಯ ಮುದ್ರಣಾಲಯ,
ಮೈಸೂರು ರಸ್ತೆ, ಬೆಂಗಳೂರು-59.

ಮುದ್ರಕರು :- ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು-59

KA / BG-GPO / 2515 / WPP-47 / 2009-2011

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು



| ಸಂಪುಟ ೧೪೪ | ಬೆಂಗಳೂರು, ಗುರುವಾರ, ಮೇ ೨೮, ೨೦೦೯ (ಜ್ಯೇಷ್ಠ ೭, ಶಕ ವರ್ಷ ೧೯೩೧) | ಸಂಚಿಕೆ ೨೨ |
|---|---|---|



## ಭಾಗ – ೧

## ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

### ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

**ವಿಷಯ:** ಶ್ರೀ ನಾಗರಾಜ, ಕೆಎಎಸ್ (ಕಿರಿಯ ಶ್ರೇಣಿ) ಅಧಿಕಾರಿ ಇವರ ವಿರುದ್ಧ ಇಲಾಖಾ ವಿಚಾರಣೆ – ಪರಿಷ್ಕೃತ ಅಂತಿಮ ಆದೇಶ.

**ಓದಲಾಗಿದೆ:**
1. ದಿನಾಂಕ: 23.02.08ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 070 ಕೆಇವಿ 07
2. ದಿನಾಂಕ: 13.10.08ರ ತಿದ್ದುಪಡಿ ಸಂಖ್ಯೆ: ಸಿಆಸುಇ 070 ಕೆಇವಿ 07
3. ದಿನಾಂಕ: 13.10.08ರ ಹಿಂಬರಹ ಸಂಖ್ಯೆ: ಸಿಆಸುಇ 045 ಕೆಇವಿ 08
4. ಶ್ರೀ ನಾಗರಾಜ, ಕೆಎಎಸ್ (ಕಿರಿಯ ಶ್ರೇಣಿ) ಅಧಿಕಾರಿ ಇವರು ಮುಖ್ಯ ಕಾರ್ಯದರ್ಶಿ ಯವರಿಗೆ ಸಲ್ಲಿಸಿದ ಮೇಲ್ಮನವಿ ದಿನಾಂಕ: 18.09.08.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ, ಶ್ರೀ ನಾಗರಾಜ, ಕೆಎಎಸ್ (ಕಿರಿಯ ಶ್ರೇಣಿ) ಅಧಿಕಾರಿ ಇವರನ್ನು ದಿನಾಂಕ: 20.06.06ರ ಅಧಿಸೂಚನೆ ಸಂಖ್ಯೆ: ಸಿಆಸುಇ 097 ಆಸೇವ 06 ರ ಪ್ರಕಾರ ಉಪ ವಿಭಾಗಾಧಿಕಾರಿ, ರಾಯಚೂರು ಉಪ ವಿಭಾಗ, ರಾಯಚೂರು ಹುದ್ದೆಗೆ ವರ್ಗಾಯಿಸಿದ್ದು, ಇವರು ಸದರಿ ಹುದ್ದೆಗೆ ಹಾಜರಾಗದೆ ಅನಧಿಕೃತ ಗೈರುಹಾಜರಾದ ಆರೋಪದ ಸತ್ಯಾಸತ್ಯತೆಯನ್ನು ವಿಚಾರಣೆಯ ಮೂಲಕ ತಿಳಿಯಲು ಇವರ ವಿರುದ್ಧ ನಿಯಮಾನುಸಾರ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಿ, ಸಲ್ಲಿಸಲಾದ ವಿಚಾರಣಾ ವರದಿಯ ಆಧಾರದ ಮೇಲೆ ಇವರ ಮುಂದಿನ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮ ಬೀರದಂತೆ ತಡೆ ಹಿಡಿಯಲು ಮತ್ತು ಗೈರುಹಾಜರಾದ ದಿನಾಂಕ: 20.06.06 ರಿಂದ 15.12.06 ರವರೆಗಿನ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ, 1958ರ ನಿಯಮ 106–A ರ ಪ್ರಕಾರ dies-non ಅವಧಿಯೆಂದು ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಗೈರು ಹಾಜರಿ ಅವಧಿಯನ್ನು ದಿನಾಂಕ: 22.06.06 ರಿಂದ 15.12.06 ರವರೆಗೆ ಎಂದು ತಿದ್ದುಪಡಿ ಮಾಡಿ, ಈ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ, 1958ರ ರ ಪ್ರಕಾರ ಕರ್ತವ್ಯ ರಹಿತ (dies-non) ಅವಧಿಯೆಂದು ತಿದ್ದುಪಡಿ ಆದೇಶ ಹೊರಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ದಿನಾಂಕ: 23.02.08 ರ ಸರ್ಕಾರಿ ಆದೇಶದ ವಿರುದ್ಧ ಅಧಿಕಾರಿಯು ಸಲ್ಲಿಸಿದ ಮೇಲ್ಮನವಿಗಳನ್ನು ಸರ್ಕಾರವು ತಿರಸ್ಕರಿಸಿ ಹಿಂಬರಹ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ, ಅಧಿಕಾರಿಯು, ತಾನು ವೈರಲ್ ಜ್ವರಕ್ಕೆ ತುತ್ತಾಗಿ ಇದು ಉಲ್ಬಣಗೊಂಡು ಜಾಂಡೀಸ್ ರೋಗವಾಗಿ ಪರಿಣಮಿಸಿದ್ದರಿಂದ ವೈದ್ಯಕೀಯ ಉಪಚಾರದಲ್ಲಿ ವಿಶ್ರಾಂತಿ ಅನಿವಾರ್ಯವಿದ್ದ ಕಾರಣ, ವರ್ಗಾಯಿಸಲಾದ ಹುದ್ದೆಗೆ ಹಾಜರಾಗಲು ಸಾಧ್ಯವಾಗಲಿಲ್ಲವೆಂದು ಈ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ಸಹ

ಸಲ್ಲಿಸಲಾಗಿತ್ತೆಂದು ತಿಳಿಸುತ್ತಾ, ದಂಡನಾದೇಶವನ್ನು ರದ್ದುಪಡಿಸುವಂತೆ ಮನವಿ ಮಾಡಿರುತ್ತಾರೆ. ಸರ್ಕಾರವು ಇವರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸುತ್ತದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 045 ಕೆಇವಿ 08, ಬೆಂಗಳೂರು, ದಿನಾಂಕ: 30ನೇ ಮಾರ್ಚ್ 2009**

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟಿರುವ ಹಿನ್ನೆಲೆ ಹಾಗೂ ದಾಖಲೆಗಳ ಪರಿಶೀಲನೆಯಿಂದ, ಶ್ರೀ ನಾಗರಾಜ, ಕೆಎಎಸ್ (ಕಿರಿಯ ಶ್ರೇಣಿ) ಅಧಿಕಾರಿಯು ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ಸಲ್ಲಿಸಿದ ವೈದ್ಯಕೀಯ ರಜಾ ಅರ್ಜಿಯನ್ನು ಪರಿಗಣಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 27 ರಡಿ ಪ್ರಕರಣವನ್ನು ಪುನರ್‌ಪರಿಶೀಲಿಸಿ, ದಿನಾಂಕ: 23.02.08 ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 070 ಕೆಇವಿ 07 ಮತ್ತು ದಿನಾಂಕ: 13.10.08ರ ತಿದ್ದುಪಡಿ ಸಂಖ್ಯೆ: ಸಿಆಸುಇ 070 ಕೆಇವಿ 07 ಅನ್ನು ರದ್ದುಪಡಿಸಿದೆ ಮತ್ತು ದಿನಾಂಕ: 22.06.06 ರಿಂದ 15.12.06 ರವರೆಗಿನ ಅನಧಿಕೃತ ಗೈರುಹಾಜರಿ ಅವಧಿಯನ್ನು ವೈದ್ಯಕೀಯ ಕಾರಣದ ಮೇಲೆ ಅಧಿಕಾರಿಯ ಲೆಕ್ಕದಲ್ಲಿರುವ ರಜೆಯೆಂದು ನಿಯಮಾನುಸಾರ ಮಂಜೂರು ಮಾಡಿದೆ. ಇನ್ನು ಮುಂದೆ ಇಂತಹ ಪ್ರಕರಣಗಳಿಗೆ ಅವಕಾಶ ನೀಡದಂತೆ ನಡೆದುಕೊಳ್ಳಲು ಇವರಿಗೆ ಎಚ್ಚರಿಕೆ ನೀಡುತ್ತಾ, ಇವರನ್ನು ದೋಷಮುಕ್ತಗೊಳಿಸಿದೆ.

ಈ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಶ್ರೀಯುತರು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್.ಆರ್. ನಾಗೇಂದ್ರ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–2).

ಪಿ.ಆರ್. 1044

**ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ**

ವಿಷಯ: ಬೆಂಗಳೂರು ವಿದುನ್ಮಾನ ನಗರದಲ್ಲಿ ಜೈವಿಕ ತಂತ್ರಜ್ಞಾನ ಉದ್ಯಾನ [Biotech Park] ಯೋಜನೆಯ ಭಾಗ 'ಎ' ಹಂತ–2ರ ಕಾಮಗಾರಿಗಳ ಅನುಷ್ಠಾನಕ್ಕಾಗಿ 2008–09ನೇ ಸಾಲಿಗೆ ಸಂಬಂಧಿಸಿದ ಅನುದಾನ ಬಿಡುಗಡೆ ಮಾಡುವಬಗ್ಗೆ.

ಓದಲಾಗಿದೆ: ಪ್ರಧಾನ ವ್ಯವಸ್ಥಾಪಕರು, ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು ಇವರ ಪತ್ರ ಸಂ: ಕೆಬಿಟ್ಸ್/ಬಿಟಿಪಿ/ಭಾಗ–ಎ ಹಂತ–2/ಕ–9/08--09, ದಿನಾಂಕ: 24.2.2009.

**ಪ್ರಸ್ತಾವನೆ:**

ಮೇಲೆ ಓದಲಾದ ಪ್ರಧಾನ ವ್ಯವಸ್ಥಾಪಕರು ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು ಇವರ ಪತ್ರದಲ್ಲಿ ಬಯೋಟೆಕ್ ಪಾರ್ಕ್ ಯೋಜನೆಯ ಭಾಗ ಎ–2ನೇ ಹಂತದ ಕಾಮಗಾರಿಗಳಾದ ಸಿಹೆಚ್‌ಜಿ ಕಟ್ಟಡದ 1ನೇ ಮಹಡಿ ಮತ್ತು ಹಾಸ್ಟೆಲ್ ಕಟ್ಟಡದ 2ನೇ ಮಹಡಿ ನಿರ್ಮಾಣ ಕಾರ್ಯಕ್ಕಾಗಿ ರೂ. 222.66 ಲಕ್ಷಗಳ ಅಂದಾಜು ಪಟ್ಟಿಗೆ ತಾಂತ್ರಿಕ ಪರಿಶೀಲನೆಯನ್ನು ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು [ದಕ್ಷಿಣ] ಬೆಂಗಳೂರು ಇವರಿಂದ ದಿನಾಂಕ: 29.1.2008ರಲ್ಲಿ ಅನುಮೋದನೆಯನ್ನು ಪಡೆಯಲಾಗಿದ್ದು 2008–0ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ರೂ. 200.00 ಲಕ್ಷಗಳನ್ನು ಬಿಡುಗಡೆಗೊಳಿಸಿದ ಕೂಡಲೇ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸುತ್ತಾ, ಸದರಿ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ ಮಾತಂಇ 36 ಅಚವಿ 2008, ಬೆಂಗಳೂರು, ದಿನಾಂಕ: 30ನೇ ಮಾರ್ಚ್ 2009**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಬಯೋಟೆಕ್ ಪಾರ್ಕ್ ಯೋಜನೆಯ ಭಾಗ–ಎ 2ನೇ ಹಂತದ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು 2008–09ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ರೂ. 200.00 ಲಕ್ಷಗಳ [ರೂ. ಎರಡುನೂರು ಲಕ್ಷಗಳು ಮಾತ್ರ] ಅನುದಾನವನ್ನು ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು ಸಂಸ್ಥೆಗೆ ವಿತರಿಸುವ ಸಂಬಂಧ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾದ ನೀಡಿದೆ.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಮೇಲು ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಡ್ರಾ ಮಾಡಿ ನಿರ್ದೇಶಕರು, ಕೆಬಿಟ್ಸ್ ಸಂಸ್ಥೆ ಇವರಿಗೆ ವಿತರಿಸತಕ್ಕದ್ದು.

ಈ ವೆಚ್ಚವನ್ನು 2008–09ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ '5465–01–190–1–09 ಬಯೋಟೆಕ್ ಪಾರ್ಕ್–059–ಇತರೆ ಖರ್ಚುಗಳು (ಯೋಜನೆ)' ಇದರ ಅಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರು ಅನುದಾನದ ಬಳಕೆಯ ಬಗ್ಗೆ ನಿರ್ವಾಹಕರು ಕೆಬಿಟ್ಸ್ ಸಂಸ್ಥೆ ಇವರಿಂದ ಉಪಯೋಗಿತಾ ದೃಢೀಕರಣ ಪತ್ರವನ್ನು ವೆಚ್ಚ ಮಾಡಿದ ಅನುದಾನದ ವಿವರಗಳ ಜೊತೆಗೆ ಪಡೆದು ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಎಫ್‌ಡಿ 93 ವೆಚ್ಚ-2/2009, ದಿನಾಂಕ: 28.03.2009 ರಲ್ಲಿನ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎಂ.ವಿ. ಕೃಷ್ಣಮೂರ್ತಿ**

ಪಿ.ಆರ್. 1045 ಸರ್ಕಾರದ ಅಧೀನ ಕಾರ್ಯದರ್ಶಿ,

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

**ವಿಷಯ:** ಗ್ರಾಮೀಣ ಬಿಪಿಓ ಕೇಂದ್ರಗಳನ್ನು ತೆರೆಯಲು ಸಹಾಯಧನ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರಿ ಆದೇಶ ಸಂಖ್ಯೆ ಮಾತಂಇ 39 ಅಚವಿ 2008, ದಿನಾಂಕ: 19.01.2009.
2. ಸರ್ಕಾರಿ ಆದೇಶ ಸಂಖ್ಯೆ ಮಾತಂಇ 39 ಅಚವಿ 2008 [1], ದಿನಾಂಕ: 4.2.2009.
3. ಸರ್ಕಾರಿ ಆದೇಶ ಸಂಖ್ಯೆ ಮಾತಂಇ 39 ಅಚವಿ 2008 [2], ದಿನಾಂಕ: 4.2.2009.

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಸರ್ಕಾರವು 1 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ತಾಲ್ಲೂಕು / ಹೋಬಳಿ ಕೇಂದ್ರ ಸ್ಥಳಗಳಲ್ಲಿ ಗ್ರಾಮಾಂತರ ಬಿ.ಪಿ.ಓ. ಕೇಂದ್ರಗಳನ್ನು ಸ್ಥಾಪಿಸುವ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ಹಾಗೂ 100 ವ್ಯಕ್ತಿಗಳಿಗೆ ಕಡಿಮೆ ಇಲ್ಲದಂತೆ ನೇರ ಉದ್ಯೋಗವನ್ನು ನೀಡುವ ಗ್ರಾಮೀಣ ಬಿ.ಪಿ.ಓ. ಕೇಂದ್ರವು ರಾಜ್ಯ ಸರ್ಕಾರದಿಂದ ಈ ಕೆಳಕಂಡ ಆರ್ಥಿಕ ಬೆಂಬಲ ನೀಡಲು ಆದೇಶ ಹೊರಡಿಸಲಾಗಿದೆ:-

**ಅನಾವರ್ತ ಆರ್ಥಿಕ ಬೆಂಬಲ [Non-recurring Financial Support]**

1] ಪ್ರತಿ 100 ಆಸನದ ಬಿಪಿಓ ಘಟಕಗಳಿಗೆ ರೂ. 20.00 ಲಕ್ಷದವರೆಗೆ ಬಂಡವಾಳ ಹೂಡಿಕೆ ಸಹಾಯಧನ.

2] ಮಾನವಶಕ್ತಿ ತರಬೇತಿಗಾಗಿ ಪ್ರತಿ ಉದ್ಯೋಗಿಗೆ ರೂ. 10000 ಆರ್ಥಿಕ ಬೆಂಬಲ.

**ಆವರ್ತ ಆರ್ಥಿಕ ಬೆಂಬಲ [Recurring Financial Support]**

1] ಕಟ್ಟಡದ ಬಾಡಿಗೆಗಳು ಮತ್ತು ಅಂತರ್ಜಾಲ ಜೋಡಣೆಯ ವೆಚ್ಚವನ್ನು ಭರಿಸಲು ಪ್ರತಿ ಉದ್ಯೋಗಿಗೆ ಸಹಾಯಧನವಾಗಿ ರೂ. 5000 ಆರ್ಥಿಕ ಬೆಂಬಲ.

ಮೇಲೆ [2]ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ ಹಾಗೂ ಅರ್ಜಿಯ ನಮೂನೆಯನ್ನು ನಿಗದಿಪಡಿಸಲಾಗಿದೆ.

ಮೇಲೆ [3]ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಸಂಬಂಧ ಸ್ವೀಕರಿಸಿದ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅರ್ಜಿಗಳನ್ನು ಸರ್ಕಾರದ ಅನುಮೋದನೆಗಾಗಿ ಶಿಫಾರಸ್ಸು ಮಾಡಲು ಸ್ಕ್ರೀನಿಂಗ್ ಕಮಿಟಿಯನ್ನು ರಚಿಸಲಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶಕ್ಕಾಗಿ 2008-09ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ "5465-01-190-1-14 ಗ್ರಾಮೀಣ ಬಿಪಿಓಗಳು 059 ಇತರೆ ಖರ್ಚು [ಯೋಜನೆ]" ಇದರಡಿಯಲ್ಲಿ ಒದಗಿಸಲಾದ ರೂ. 500 ಲಕ್ಷಗಳ ಅನುದಾನದಲ್ಲಿ ರೂ. 100 ಲಕ್ಷಗಳನ್ನು ಬಿಡುಗಡೆ ಮಾಡಲು ಆರ್ಥಿಕ ಇಲಾಖೆ ಅನುಮೋದಿಸಿದ್ದು, ಅದರಂತೆ ಈ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 39 ಎಂಡಿಎ 2008, ಬೆಂಗಳೂರು, ದಿನಾಂಕ: 30ನೇ ಮಾರ್ಚ್ 2009**

ಪ್ರಸ್ತಾವನೆಯಲ್ಲಿ ಹೇಳಿರುವ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಉದ್ದೇಶಕ್ಕಾಗಿ 2008-09ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ **"5465-01-190-1-14 ಗ್ರಾಮೀಣ ಬಿಪಿಓಗಳು 059 ಇತರೆ ಖರ್ಚು [ಯೋಜನೆ]"** ಇದರಡಿಯಲ್ಲಿ ಒದಗಿಸಲಾದ ರೂ. 500 ಲಕ್ಷಗಳಲ್ಲಿ ರೂ. 100 ಲಕ್ಷಗಳನ್ನು [ರೂ. ನೂರು ಲಕ್ಷಗಳು ಮಾತ್ರ] ಕೆಬಿಟ್ಸ್ ಸಂಸ್ಥೆಗೆ ಬಿಡುಗಡೆ ಮಾಡಲು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಇವರಿಗೆ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ನಿರ್ದೇಶಕರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಮೇಲು ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಡ್ರಾ ಮಾಡಿ ಪ್ರಧಾನ ವ್ಯವಸ್ಥಾಪಕರು, ಕೆಬಿಟ್ಸ್ ಇವರಿಗೆ ವಿತರಿಸತಕ್ಕದ್ದು.

ಈ ವೆಚ್ಚವನ್ನು 2007–08ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ **"5465–01–190–1–14 ಗ್ರಾಮೀಣ ಬಿಪಿಓಗಳು 059 ಇತರೆ ಖರ್ಚು [ಯೋಜನೆ]"** ಅಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರು ಅನುದಾನದ ಬಳಕೆಯ ಬಗ್ಗೆ ಪ್ರಧಾನ ವ್ಯವಸ್ಥಾಪಕರು, ಕೆಬಿಟ್ಸ್ ಸಂಸ್ಥೆ ಇವರಿಂದ [ಸಂಬಂಧಪಟ್ಟ ಗ್ರಾಮೀಣ ಬಿಪಿಓ ಕೇಂದ್ರಗಳಿಂದ ಉಪಯೋಗಿತಾ ದೃಢೀಕರಣ ಪತ್ರಗಳನ್ನು ವೆಚ್ಚ ಮಾಡಿದ ಅನುದಾನದ ವಿವರಗಳೊಂದಿಗೆ ಪಡೆದು] ಉಪಯೋಗಿತಾ ದೃಢೀಕರಣ ಪತ್ರವನ್ನು ವೆಚ್ಚ ಮಾಡಿದ ಅನುದಾನದ ವಿವರಗಳ ಜೊತೆಗೆ ಪಡೆದು ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಆಇ 119 ವೆಚ್ಚ–2/2009, ದಿನಾಂಕ: 28.03.2009 ಇದರನ್ವಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
**ಎಂ.ವಿ. ಕೃಷ್ಣಮೂರ್ತಿ**
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಪಿ.ಆರ್. 1046

## HEALTH & FAMILY WELFARE SECRETARIAT

**Sub:** Providing consultancy services for internal audit of Karnataka Health System Development & Reform Project (IDA Credit 4229-IN) for 2008-09 – reg

**Preamble:**

The Project agreed to get an internal audit done for Project accounts through a Chartered Accountants firm; as suggested by the World Bank Mission during its review in February 2008. The Terms of Reference were prepared in consultation with the Bank and a notification inviting Expression of Interest (EoI) was issued the Karnataka Prabha on 04.07.2008 and Times of India on 05.07.2008 responded to the notification and submitted EOIs. An evaluation of the EOIs was carried out based on the qualifications criteria stipulated in the notification, the profile/experience of the firms, etc. A panel of eligible firms was shortlisted to whom request for Proposal (RFP) was issued seeking submission of Technical and Financial bids. A pre proposal conference was arranged for these shortlisted firms on 26.09.2008 to give additional details about the Project and clarified doubts if any posed by the shortlisted firms. In response to the RFP, technical and financial bids were received from seven CA firms. After evaluation of the technical and financial bids, the L1 bid submitted by Roy Ghosh & Associates, Chartered Accountants, Howrah at Rs. 2,55,600.00 (inclusive of all expenses) + applicable service tax, was acepted. Concurrence of the Bank has been obtained for appointment of Roy Ghosh & Associates, Chartered Accountants, Howrah, as the Project Internal Auditors vide e-mail dated 29th December 2008.

Hence the following order.

**Govt. Order No. HFW (PR) 43 WBA 2009, Bangalore, Dated: 28th February 2009**

In the circumstaces mentioned in the preamble, Government are pleased to appoint Roy Ghosh & Associates, Chartered Accountants, 545, GT Road, South, 4th Floor, Room No. 10, Howrah-711101 as Project Internal Auditors for the year 2008-09, for a remueration of Rs. 2,55,600.00 (Rupees two lakhs fiftyfive thousand six hundred only) (Inclusive of all expenses) + Service Tax, as applicable.

The firm shall enter into an agreement that will include the To Rs, with the Project.

Expenditure on this account is debitable to Head of acount 2210-06-800-0-84 KHSDRP Project Management and Evaluation – EAP – 051.

By Order and in the name of Governor of Karnataka,
**SUSHAMA GODBOLE**
Deputy Secretary to Government, KHSDRP
Health & Family Welfare Department.

P.R. 1051

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ: ಕರ್ನಾಟಕ ಆರೋಗ್ಯ ವ್ಯವಸ್ಥೆ ಮತ್ತು ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯಡಿ ಅಂತರ್ಜಾಲ ಆಧಾರಿತ ಯೋಜನಾ ನಿರ್ವಹಣಾ ವ್ಯವಸ್ಥೆಯನ್ನು (WBPMS) ಅಳವಡಿಸುವ ಬಗ್ಗೆ.

ಓದಲಾಗಿದೆ:
1. ಯೋಜನಾ ಕಚೇರಿಯಿಂದ ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತ, ಬೆಂಗಳೂರು ಇವರಿಗೆ ಬರೆಯಲಾದ ಪತ್ರ ಸಂ: ಹೆಚ್‌ಎಫ್‌ಡಬ್ಲ್ಯೂ/ಕೆಹೆಚ್‌ಎಸ್‌ಡಿಆರ್‌ಪಿ/ಪಿಎ/ಇ-ಟೆಂಡರಿಂಗ್/2008-09/01, ದಿ: 28.04.2008.
2. ಕಾರ್ಯಕ್ರಮ ಚಾಲನಾ ಸಮಿತಿಯ 10ನೇ ಸಭೆಯ ನಡವಳಿಗಳು ದಿ: 05.11.2008.
3. ವಿಶ್ವಬ್ಯಾಂಕ್ ಇವರಿಂದ ಸ್ವೀಕೃತವಾದ ಇ-ಮೇಲ್ ದಿನಾಂಕ: 24.11.08.
4. ಅಧೀಕ್ಷಕ ಅಭಿಯಂತರರು, ಕೆಎಚ್‌ಎಸ್‌ಡಿಆರ್‌ಪಿ, ಬೆಂಗಳೂರು ಮತ್ತು ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತ, ಬೆಂಗಳೂರು ಇವರ ಒಪ್ಪಂದ ಸಂಖ್ಯೆ 86/21.01.2009.

**ಪ್ರಸ್ತಾವನೆ:**

ವಿಶ್ವಬ್ಯಾಂಕ್ ಮಿಶನ್‌ನೊಂದಿಗೆ ಫೆಬ್ರವರಿ-2008ರಲ್ಲಿ ನಡೆದ ವಿಮರ್ಶಾ ಸಭೆಯಲ್ಲಿ ಒಪ್ಪಲಾದಂತೆ, ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯಡಿಯಲ್ಲಿ ಕೈಗೊಳ್ಳುವ ಸಿವಿಲ್ ಕಾಮಗಾರಿಗಳ ಪ್ರಗತಿಯ ಮೌಲ್ಯಾಂಕನ ಮತ್ತು ಪರಿಶೀಲನೆ ನಡೆಸಲು ಅಂತರ್ಜಾಲ ಆಧಾರಿತ ಯೋಜನಾ ನಿರ್ವಹಣಾ ವ್ಯವಸ್ಥೆಯನ್ನು ಅಳವಡಿಸುವ ಸಲುವಾಗಿ ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತವನ್ನು ಕೋರಲಾಗಿರುತ್ತದೆ. ಈ ಬಗ್ಗೆ ಯೋಜನಾ ಚಾಲನಾ ಸಮಿತಿಯ 10ನೇ ಸಭೆಯಲ್ಲಿ ಚರ್ಚಿಸಲಾಗಿದೆ. ಯೋಜನಾ ಚಾಲನಾ ಸಮಿತಿಯು ವಿಶ್ವಬ್ಯಾಂಕ್ ಸಹಮತಿಗೆ ಒಳಪಟ್ಟು ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತ ಇವರಿಂದ ಸೇವೆಯನ್ನು ಪಡೆದುಕೊಳ್ಳಲು ಅಗತ್ಯವಾದ ಒಪ್ಪಂದವನ್ನು ಮಾಡಿಕೊಳ್ಳಲು ಮೇಲೆ (2)ರಲ್ಲಿ ಓದಲಾದ ಸಭೆ ನಡವಳಿಗಳಲ್ಲಿ ಅನುಮೋದನೆ ನೀಡಿರುತ್ತದೆ. ಈ ಬಗ್ಗೆ ವಿಶ್ವಬ್ಯಾಂಕ್ ಸಹ ತನ್ನ ಸಹಮತಿಯನ್ನು ಮೇಲೆ (3) ರಲ್ಲಿ ಓದಲಾದ ಇ-ಮೇಲ್ ಮೂಲಕ ತಿಳಿಸಿರುತ್ತದೆ. ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತದ ಕಾರ್ಯಪಾಲಕ ಅಭಿಯಂತರರು ಇವರೊಂದಿಗೆ ಯೋಜನಾ ಕಚೇರಿಯ ಅಧೀಕ್ಷಕ ಅಭಿಯಂತರರು ಮೇಲೆ (4)ರಲ್ಲಿ ಓದಲಾದ ಒಪಂದಕ್ಕೆ ಸಹಿ ಹಾಕಿರುತ್ತಾರೆ. ಸದರಿ ಒಪ್ಪಂದವು ಅಂತರ್ಜಾಲ ಆಧಾರಿತ ಯೋಜನಾ ನಿರ್ವಹಣಾ ವ್ಯವಸ್ಥೆಯನ್ನು ಅಳವಡಿಸುವ ಬಗ್ಗೆ ಎರಡೂ ಪಕ್ಷಗಳು ಪರಸ್ಪರ ಒಪ್ಪಿಕೊಂಡಿರುವ ಕರಾರು ಮತ್ತು ಷರತ್ತುಗಳನ್ನು ಒಳಗೊಂಡಿರುತ್ತದೆ. ಒಪ್ಪಂದದನ್ವಯ ಈ ಕೆಳಕಂಡ ಷರತ್ತುಗಳ ಮೇರೆಗೆ ಯೋಜನಾ ಕಚೇರಿಯು ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತಕ್ಕೆ ಹಣ ಪಾವತಿಸಬೇಕಾಗಿರುತ್ತದೆ.

1) ಯೋಜನಾ ನಿರ್ವಹಣಾ ವ್ಯವಸ್ಥೆಯನ್ನು ಅಳವಡಿಸಲು ಮೂರು ಸರ್ವರ್‌ಗಳನ್ನು ಸ್ಥಾಪಿಸಲು ತಗಲುವ ವಾಸ್ತವಿಕ ವೆಚ್ಚವನ್ನು ಪಾವತಿಸಬೇಕಾಗುವುದು. ಒಪ್ಪಂದದ ಅವಧಿ ಮುಗಿದ ನಂತರ ಇವುಗಳನ್ನು ಯೋಜನಾ ಕಚೇರಿಗೆ ವರ್ಗಾಯಿಸಲಾಗುವುದು.
2) ಒಂದು ಸಾರಿ ಅಳವಡಿಸುವಿಕೆ, ಕಸ್ಟಮೈಸೇಷನ್ ಮತ್ತು ಗರಿಷ್ಟ 25 ಬಳಕೆದಾರರ ತಂಡಕ್ಕೆ ಒಂದು ಬಾರಿ ತರಬೇತಿ ನೀಡುವುದಕ್ಕೆ ರೂ. 5.00 ಲಕ್ಷಗಳನ್ನು ಪಾವತಿಸಬೇಕು. ಈ ಪೈಕಿ ಒಪ್ಪಂದಕ್ಕೆ ಸಹಿ ಹಾಕದ ಕೂಡಲೇ ಶೇಕಡ 50 ರಷ್ಟು ಮತ್ತು ಉಳಿದ ಶೇಕಡ 50 ರಷ್ಟು ಹಣವನ್ನು ಕಸ್ಟಮೈಸೇಷನ್ ಮತ್ತು ಸಾಫ್ಟ್‌ವೇರ್ ಅಳವಡಿಸಿ ಪ್ರಾರಂಭಿಕ ತರಬೇತಿ ನೀಡಿದ ನಂತರ ಪಾವತಿಸಬೇಕು.
3) ಹೆಚ್ಚುವರಿ ತರಬೇತಿಗೆ ತಗಲುವ ವಾಸ್ತವಿಕ ವೆಚ್ಚವನ್ನು ಪಾವತಿಸಬೇಕು.
4) ಒಪ್ಪಂದದ ಅವಧಿಯಲ್ಲಿ ಪ್ರತಿ ತ್ರೈಮಾಸಿಕಕ್ಕೆ ರೂ. 1.20 ಲಕ್ಷಗಳನ್ನು ಮುಂಗಡವಾಗಿ ಇಂಟರ್‌ನೆಟ್ ಬ್ಯಾಂಡ್ ವಿಡ್ತ್ ಶುಲ್ಕವಾಗಿ ಪಾವತಿಸತಕ್ಕದ್ದು. ಮೊದಲನೇ ತ್ರೈಮಾಸಿಕದ ಶುಲ್ಕವನ್ನು ಒಪ್ಪಂದಕ್ಕೆ ಸಹಿ ಹಾಕಿದ ಕೂಡಲೇ ಪಾವತಿಸಬೇಕು.
5) ಯೋಜನಾ ಕಚೇರಿಗೆ ಸರ್ವರ್‌ಗಳು/ಡಾಟಾಬೇಸ್ ವರ್ಗಾಯಿಸಿದ ನಂತರ ಸಾಫ್ಟ್‌ವೇರ್/ಹಾರ್ಡ್‌ವೇರ್ ಕ್ರಾಷ್ ಆದಲ್ಲಿ ಅವುಗಳನ್ನು ಪುನರ್ ಸ್ಥಾಪಿಸಲು ತಗಲುವ ವಾಸ್ತವಿಕ ವೆಚ್ಚವನ್ನು ನಿಗಮಕ್ಕೆ ಪಾವತಿಸಬೇಕು.
6) ಯೋಜನೆಯ ಮುಖ್ಯ ಕಚೇರಿಯಲ್ಲಿ ಮತ್ತು ನಿಗಮದ ಕಚೇರಿಯಲ್ಲಿ ಅಗತ್ಯ ಸಿಬ್ಬಂದಿ ನೇಮಿಸಿ ಯೋಜನಾ ನಿರ್ವಹಣಾ ವ್ಯವಸ್ಥೆಯನ್ನು ನಿರ್ವಹಿಸಲು ಮಾಸಿಕ ರೂ. 80,000-00 ಗಳ ಶುಲ್ಕ ಪಾವತಿಸಬೇಕು ಮತ್ತು ಮಾಸಿಕ ರೂ. 50,000-00 ಗಳ ಹೋಸ್ಟಿಂಗ್ ವೆಚ್ಚವನ್ನು ಪಾವತಿಸಬೇಕು.

ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣ ಯೋಜನೆಯಡಿಯಲ್ಲಿ ಅಂತರ್ಜಾಲ ಯೋಜನಾ ನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸಲು ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತದೊಂದಿಗೆ ಮೇಲಿನ ಷರತ್ತುಗಳ

ಮೇರೆಗೆ ಒಪ್ಪಂದ ಮಾಡಿಕೊಂಡಿರುವುದಕ್ಕೆ ಮತ್ತು ಹಣಕಾಸಿನ ವೆಚ್ಚಕ್ಕೆ ಸರ್ಕಾರದ ಮಂಜೂರಾತಿ ನೀಡುವ ಬಗ್ಗೆ ಪರಿಶೀಲಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ (ಪಿಆರ್) 58 ಡಬ್ಲ್ಯೂಬಿಎ 2009, ಬೆಂಗಳೂರು,**
**ದಿನಾಂಕ: 23ನೇ ಮಾರ್ಚ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯಡಿಯಲ್ಲಿ ಅಂತರ್ಜಾಲ ಯೋಜನಾ ನಿರ್ವಹಣಾ ವ್ಯವಸ್ಥೆಯನ್ನು ಸ್ಥಾಪಿಸಲು ಕರ್ನಾಟಕ ರಾಜ್ಯ ಪೊಲೀಸ್ ವಸತಿ ನಿಗಮ ನಿಯಮಿತದೊಂದಿಗೆ ಒಪ್ಪಂದ ಮಾಡಿಕೊಂಡಿರುವುದಕ್ಕೆ ಮತ್ತು ಈ ಕೆಳಕಂಡ ವೆಚ್ಚಗಳನ್ನು ಭರಿಸಲು ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ. ಈ ಆದೇಶವು ಒಪ್ಪಂದಕ್ಕೆ ಸಹಿ ಹಾಕಿದ ದಿನಾಂಕ ಅಂದರೆ 21.01.2009ರಿಂದ ಪೂರ್ವಾನ್ವಯವಾಗುತ್ತದೆ.

1) ಅಂತರ್ಜಾಲ ಯೋಜನಾ ನಿರ್ವಹಣಾ ವ್ಯವಸ್ಥೆಯನ್ನು ಅಳವಡಿಸಲು ಮೂರು ಸರ್ವರ್‌ಗಳನ್ನು ಸ್ಥಾಪಿಸಲು ತಗಲುವ ವಾಸ್ತವಿಕ ವೆಚ್ಚವನ್ನು ಪಾವತಿಸುವುದಕ್ಕೆ.
2) ಒಂದು ಸಾರಿ ಅಳವಡಿಸುವಿಕೆ, ಕಸ್ಟಮೈಸೇಷನ್ ಮತ್ತು ಗರಿಷ್ಟ 25 ಬಳಕೆದಾರರ ತಂಡಕ್ಕೆ ಒಂದು ಬಾರಿ ತರಬೇತಿ ನೀಡುವುದಕ್ಕೆ ರೂ. 5.00 ಲಕ್ಷಗಳನ್ನು ಪಾವತಿಸುವುದಕ್ಕೆ.
3) ಹೆಚ್ಚುವರಿ ತರಬೇತಿ ನೀಡಿದಲ್ಲಿ ತಗಲುವ ವಾಸ್ತವಿಕ ವೆಚ್ಚವನ್ನು ಪಾವತಿಸುವುದಕ್ಕೆ.
4) ಒಪ್ಪಂದದ ಅವಧಿಯಲ್ಲಿ ಪ್ರತಿ ತ್ರೈಮಾಸಿಕಕ್ಕೆ ರೂ. 1.20 ಲಕ್ಷಗಳನ್ನು ಮುಂಗಡವಾಗಿ ಇಂಟರ್‌ನೆಟ್ ಬ್ಯಾಂಡ್ ವಿಡ್ತ್ ಶುಲ್ಕವಾಗಿ ಪಾವತಿಸುವುದಕ್ಕೆ.
5) ಯೋಜನೆಯ ಮುಖ್ಯ ಕಚೇರಿಯಲ್ಲಿ ಮತ್ತು ನಿಗಮದ ಕಚೇರಿಯಲ್ಲಿ ಅಗತ್ಯ ಸಿಬ್ಬಂದಿ ನೇಮಿಸಿ ಯೋಜನಾ ನಿರ್ವಹಣಾ ವ್ಯವಸ್ಥೆಯನ್ನು ನಿರ್ವಹಿಸಲು ಮಾಸಿಕ ರೂ. 80,000–00 ಗಳ ಶುಲ್ಕ ಪಾವತಿಸಬೇಕು ಮತ್ತು ಮಾಸಿಕ ರೂ. 50,000–00 ಗಳ ಹೋಸ್ಟಿಂಗ್ ವೆಚ್ಚವನ್ನು ಪಾವತಿಸುವುದಕ್ಕೆ.

ಮೂರು ಸರ್ವರ್‌ಗಳನ್ನು ಸ್ಥಾಪಿಸಲು ತಗಲುವ ವಾಸ್ತವಿಕ ವೆಚ್ಚ, ಒಂದು ಸಾರಿ ಅಳವಡಿಸುವಿಕೆ, ಕಸ್ಟಮೈಸೇಷನ್ ಮತ್ತು ಗರಿಷ್ಠ 25 ಬಳಕೆದಾರರ ತಂಡಕ್ಕೆ ಒಂದು ಬಾರಿ ತರಬೇತಿ ನೀಡುವುದಕ್ಕೆ ಪಾವತಿಸಬೇಕಾಗಿರುವ ಹಣವನ್ನು ಲೆಕ್ಕಶೀರ್ಷಿಕೆ "4210–01–110–1–86 (ಯೋ) ಪ್ರಾಜೆಕ್ಟ್ ನಿರ್ವಹಣೆ ಮತ್ತು ಮೌಲ್ಯಮಾಪನದಡಿ" ಮತ್ತು ಇಂಟರ್‌ನೆಟ್ ಬ್ಯಾಂಡ್ ವಿಡ್ತ್ ಶುಲ್ಕ ಹಾಗೂ ಮಾಸಿಕ ನಿರ್ವಹಣಾ ವೆಚ್ಚಗಳನ್ನು ಲೆಕ್ಕ ಶೀರ್ಷಿಕೆ "2210–06–800–0–84 (ಯೋ) 051 (ಸಾಮಾನ್ಯ ವೆಚ್ಚ)" ಅಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
**ಸುಷಮಾ ಗೋಡಬೋಲೆ**
ಸರ್ಕಾರದ ಉಪ ಕಾರ್ಯದರ್ಶಿ, ಕೆಹೆಚ್‌ಎಸ್‌ಡಿಆರ್‌ಪಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿ.ಆರ್. 1052

**ವಿಷಯ:** ಕರ್ನಾಟಕ ಆರೋಗ್ಯ ವ್ಯವಸ್ಥೆ ಸುಧಾರಣಾ ಯೋಜನೆಯಡಿಯಲ್ಲಿ ಕಾರ್ಯ ಪ್ರವೃತ್ತರಾಗಿರುವ ಅಧೀಕ್ಷಕ ಅಭಿಯಂತರರ ವಿಭಾಗೀಯ, ಉಪ ವಿಭಾಗೀಯ ಶಾಖೆಗಳಲ್ಲಿನ ಅಧಿಕಾರಿಗಳಿಗೆ/ ಸಿಬ್ಬಂದಿಯವರಿಗೆ ಭಾರತ ಸಂಚಾರ ನಿಗಮ ನಿಯಮಿತ, ಬೆಂಗಳೂರು ಇವರಿಂದ ಸಿಯುಜಿ ನೆಟ್‌ವರ್ಕ್ ಯೋಜನೆಯಡಿಯಲ್ಲಿ ಸ್ವೀಕರಿಸಲಾದ–ಬಳಸಲಾಗುತ್ತಿರುವ ಸಿಮ್ ಕಾರ್ಡ್‌ಗಳ ನಿಗದಿತ ದರಗಳ ವೆಚ್ಚವನ್ನು ಭರಿಸಲು ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರಿ ಆದೇಶ ಸಂಖ್ಯೆ:ಆಕುಕ/ಕಆವ್ಯಸುಯೋ/ಎಸ್.ಇ.ಸಿ.ಟಿ/01/–59/2007 ಬೆಂಗಳೂರು, ದಿನಾಂಕ; 18.12.2007.
2. ಸರ್ಕಾರಿ ಆದೇಶ ಸಂಖ್ಯೆ: HFW/KHSDRP/02/2007-08, ದಿನಾಂಕ: 07.08.2008.
3. ಸರ್ಕಾರಿ ಆದೇಶ ಸಂಖ್ಯೆ: HFW/KHSDRP/02/2007-08, ದಿನಾಂಕ: 22.10.2008.

**ಪ್ರಸ್ತಾವನೆ:**

ಉಲ್ಲೇಖಿತ ಸರ್ಕಾರದ ಆದೇಶದನ್ವಯ ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆಯಡಿಯಲ್ಲಿ, ಯೋಜನೆಯ ಎಲ್ಲಾ ಕಛೇರಿಗಳಲ್ಲಿರುವ ಹಾಗೂ ಇಲಾಖಾ ಅಧಿಕಾರಿ/ಸಿಬ್ಬಂದಿ/ಸಲಹೆಗಾರರಿಗೆ ಭಾರತ ಸಂಚಾರನಿಗಮ ನಿಯಮಿತ ಬೆಂಗಳೂರು ಇವರಿಂದ 325/– ಸಿಯುಜಿ ನೆಟ್‌ವರ್ಕ್ ಯೋಜನೆಯಡಿ ಮೊಬೈಲ್ ದೂರವಾಣಿ ಸಿಮ್ ಕಾರ್ಡ್‌ಗಳನ್ನು ಒದಗಿಸಲಾಗಿತ್ತು. ಓದು (1) ಮತ್ತು (2)ರ ಆದೇಶಗಳಲ್ಲಿ ಈ ಹಿಂದೆ ನೀಡಿರುವ ಮೊಬೈಲ್ ಸಿಮ್ ಕಾರ್ಡ್‌ಗಳ ಮಾಹೆಯಾನ ವೆಚ್ಚದ ಮಿತಿಯ ಬಗ್ಗೆ ಅಧಿಕಾರಿಗಳಿಗೆ ಸೂಕ್ತ ಆದೇಶಗಳನ್ನು ನೀಡಲಾಗಿತ್ತು. ಕೆಹೆಚ್‌ಎಸ್‌ಡಿಆರ್‌ಪಿ

ಹಾಗೂ ಎನ್‌ಆರ್‌ಹೆಚ್‌ಎಮ್ ಇವೆರಡೂ ವಿಲೀನಗೊಂಡಿದ್ದು, ಹೊಸ ಇಂಜಿನೀಯರಿಂಗ್ (ವಿಭಾಗೀಯ ಹಾಗೂ ಉಪವಿಭಾಗೀಯ ಕಛೇರಿಗಳು ಸೃಜಿಸಲಾಗಿದ್ದು, ಇನ್ನು ಕೆಲವು ಅಧಿಕಾರಿ/ಸಿಬ್ಬಂದಿಯವರಿಗೆ ಸಿಮ್ ಕಾರ್ಡ್‌ಗಳನ್ನು ನೀಡುವ ಬಗ್ಗೆ ಪ್ರಸ್ತಾಪಿಸಿದೆ. ಹಾಗೂ ಈ ಸಂಬಂಧ ಮಾಸಿಕ ದೂರವಾಣಿ ವೆಚ್ಚವನ್ನು ಯೋಜನೆಯ ವೆಚ್ಚದಿಂದ ಭರಿಸಲು ಪ್ರಸ್ತಾಪಿಸಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಕುಕ/ಕಆವ್ಯಸುಯೋ/ಎಸ್‌ಇಸಿಟಿ-59/2007, ಬೆಂಗಳೂರು, ದಿನಾಂಕ: 17ನೇ ಮಾರ್ಚ್ 2009**

ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆ/ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಕೆಳಕಂಡ ಅಧಿಕಾರಿಗಳು/ಸಲಹೆಗಾರರು/ಸಿಬ್ಬಂದಿ ಇವರುಗಳಿಗೆ ಭಾರತ ಸಂಚಾರ ನಿಗಮ ನಿಯಮಿತ, ಸಿಯುಜಿ ನೆಟ್‌ವರ್ಕ್ (ಕ್ಲೋಸ್ಡ್ ಯೂಸರ್ ಗ್ರೂಪ್) ಯೋಜನೆಯಡಿಯಲ್ಲಿ ಲಗತ್ತಿಸಿರುವ ಅನುಬಂಧದಂತೆ-68 ಸಿಮ್‌ಕಾರ್ಡ್‌ಗಳನ್ನು ಒದಗಿಸಿದೆ. ಸಿಮ್‌ಕಾರ್ಡ್‌ನ ಬಳಕೆ ಮಾಹೆಯಾನ ರೂ. 525/- (ಐದು ನೂರ ಇಪ್ಪತ್ತೈದು) ಗಳಿಗೆ ಮಾತ್ರ ಸೀಮಿತಗೊಳಿಸಿದೆ. ಹಾಗೂ ದೂರವಾಣಿಗಳ ಮಾಸಿಕ ವೆಚ್ಚವನ್ನು ಪಾವತಿಸಲು ಸಹ ಸರ್ಕಾರ ಮಂಜೂರಾತಿ ನೀಡಿದೆ.

**ಅನುಬಂಧ**

**ಕ್ಲೋಸ್ಡ್ ಯೂಸರ್ ಗ್ರೂಪ್ (ಸಿ.ಯುಜಿ) ಪ್ಲಾನ್ - 525**

| ಕ್ರ ಸಂ. | ಕಛೇರಿಯ ಹೆಸರು | ಬಳಕೆಗೆ ನಿಗಧಿ ಪಡಿಸುವ ಗರಿಷ್ಠ ಮೊತ್ತ | ಅಧಿಕಾರಿಗಳ ಪದನಾಮ | ಅಧಿಕಾರಿಗಳಿಗೆ ನೀಡಲಾಗಿರುವ ಸಂಖ್ಯೆ | ವಿತರಿಸಿದ ಸಿಮ್‌ಗಳ ಒಟ್ಟು ಸಂಖ್ಯೆ |
|---|---|---|---|---|---|
| 1 | ಅಧೀಕ್ಷಕ ಅಭಿಯಂತರರ ಕಾರ್ಯಲಯ, ಕೆಹೆಚ್‌ಎಸ್‌ಡಿಆರ್‌ಪಿ, ಬೆಂಗಳೂರು ಅಭಿಯಂತರರು/ಸಿಬ್ಬಂದಿ | ರೂ.525 | ಸಹಾಯಕ ಅಭಿಯಂತರರು-1 | 9449843288 | 4 |
| | | | ಸಹಾಯಕ ಅಭಿಯಂತರರು-2 | 9449843289 | |
| | | | ಸಹಾಯಕ ಅಭಿಯಂತರರು-3 | 9449843290 | |
| | | | ಸಹಾಯಕ ಅಭಿಯಂತರರು-4 | 9449843291 | |
| | | | ಕಿರಿಯ ವಿದ್ಯುತ್ ಅಭಿಯಂತರರು | 9449843292 | 1 |
| | | | ಕಿರಿಯ ಅಭಿಯಂತರರು-1 | 9449843293 | 2 |
| | | | ಕಿರಿಯ ಅಭಿಯಂತರರು-2 | 9449843294 | |
| | | | ಕಚೇರಿ ಅಧೀಕ್ಷಕರು | 9449843295 | 1 |
| | | | ನಕ್ಷೆಗಾರ | 9449843356 | 1 |
| | | | ಒಟ್ಟು | | 9 |
| 2 | ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ ವಿಭಾಗ, ಕೆಹೆಚ್‌ಎಸ್‌ಡಿಆರ್‌ಪಿ, ಬೆಂಗಳೂರು ಅಭಿಯಂತರರು/ಸಿಬ್ಬಂದಿ | ರೂ.525 | ಸಹಾಯಕ ಅಭಿಯಂತರರು-1 | 9449843296 | 2 |
| | | | ಸಹಾಯಕ ಅಭಿಯಂತರರು-2 | 9449843297 | |
| | | | ಸಲಕರಣಾ ಅಭಿಯಂತರರು | 9449843298 | 1 |
| | | | ಪರಿಸರ ಅಭಿಯಂತರರು | 9449843299 | 1 |
| | | | ಲೆಕ್ಕಧೀಕ್ಷಕರು | 9449843300 | 1 |
| | | | ಒಟ್ಟು | | 5 |
| 3 | ಸಹಾಯಕ ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ ಕೆಹೆಚ್‌ಎಸ್‌ಡಿಆರ್‌ಪಿ, ಬೆಂಗಳೂರು, ಉಪವಿಭಾಗ- ಅಭಿಯಂತರರು/ಸಿಬ್ಬಂದಿ | ರೂ.525 | ಸಹಾಯಕ ಅಭಿಯಂತರರು-1 | 9449843301 | 4 |
| | | | ಸಹಾಯಕ ಅಭಿಯಂತರರು-2 | 9449843302 | |
| | | | ಸಹಾಯಕ ಅಭಿಯಂತರರು-3 | 9449843303 | |
| | | | ಸಹಾಯಕ ಅಭಿಯಂತರರು-4 | 9449843304 | |
| | | | ಕಿರಿಯ ಅಭಿಯಂತರರು | 9449843305 | 1 |
| | | | ಒಟ್ಟು | | 5 |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ ಕೆಹೆಚ್‌ಎಸ್‌ಡಿಆರ್‌ಪಿ, ಉಪವಿಭಾಗ-ಶಿವಮೊಗ್ಗ | ರೂ.525 | ಸಹಾಯಕ ಅಭಿಯಂತರರು-1 | 9449843306 | 4 |
| | | | ಸಹಾಯಕ ಅಭಿಯಂತರರು-2 | 9449843307 | |
| | | | ಸಹಾಯಕ ಅಭಿಯಂತರರು-3 | 9449843308 | |
| | | | ಸಹಾಯಕ ಅಭಿಯಂತರರು-4 | 9449843309 | |
| | | | ಒಟ್ಟು | | 4 |

| ಕ್ರ ಸಂ. | ಕಛೇರಿಯ ಹೆಸರು | ಬಳಕೆಗೆ ನಿಗಧಿ ಪಡಿಸುವ ಗರಿಷ್ಠ ಮೊತ್ತ | ಅಧಿಕಾರಿಗಳ ಪದನಾಮ | ಅಧಿಕಾರಿಗಳಿಗೆ ನೀಡಲಾಗಿರುವ ಸಂಖ್ಯೆ | ವಿತರಿಸಿದ ಸಿಮ್‌ಗಳ ಒಟ್ಟು ಸಂಖ್ಯೆ |
|---|---|---|---|---|---|
| 5 | ಸಹಾಯಕ ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ ಕೆಹೆಚ್‌ಎಸ್‌ಡಿಆರ್‌ಪಿ, ವಿಭಾಗ – ಎನ್.ಪಿ.ಸಿ. ಆಸ್ಪತ್ರೆ ಆವರಣ ನಜರ್‌ಬಾದ್ ಮೈಸೂರು ಅಭಿಯಂತರರು/ಸಿಬ್ಬಂದಿ | ರೂ.525 | ಸಹಾಯಕ ಅಭಿಯಂತರರು-1 | 9449843310 | 1 |
| | | | ಸಲಕರಣಾ ಅಭಿಯಂತರರು | 9449843311 | 1 |
| | | | ಪರಿಸರ ಅಭಿಯಂತರರು | 9449843312 | 1 |
| | | | ಕಿರಿಯ ಅಭಿಯಂತರರು-1 | 9449843313 | 1 |
| | | | ಲೆಕ್ಕಧೀಕ್ಷಕರು | 9449843314 | 1 |
| | | | ಒಟ್ಟು | | 5 |
| 6 | ಸಹಾಯಕ ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ ಕೆಹೆಚ್‌ಎಸ್‌ಡಿಆರ್‌ಪಿ, ಉಪವಿಭಾಗ – ಎನ್.ಪಿ.ಸಿ. ಆಸ್ಪತ್ರೆ ಆವರಣ ನಜರ್‌ಬಾದ್ ಮೈಸೂರು ಅಭಿಯಂತರರು/ ಸಿಬ್ಬಂದಿ | ರೂ.525 | ಸಹಾಯಕ ಅಭಿಯಂತರರು-1 | 9449843315 | 2 |
| | | | ಸಹಾಯಕ ಅಭಿಯಂತರರು-2 | 9449843316 | |
| | | | ಕಿರಿಯ ಅಭಿಯಂತರರು-1 | 9449843317 | 2 |
| | | | ಕಿರಿಯ ಅಭಿಯಂತರರು-2 | 9449843318 | |
| | | | ಒಟ್ಟು | | 4 |
| 7 | ಸಹಾಯಕ ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ ಕೆಹೆಚ್‌ಎಸ್‌ಡಿಆರ್‌ಪಿ, ಉಪವಿಭಾಗ-ಹಾಸನ ಅಭಿಯಂತರರು /ಸಿಬ್ಬಂದಿ | ರೂ.525 | ಸಹಾಯಕ ಅಭಿಯಂತರರು-1 | 9449843319 | 5 |
| | | | ಸಹಾಯಕ ಅಭಿಯಂತರರು-2 | 9449843320 | |
| | | | ಸಹಾಯಕ ಅಭಿಯಂತರರು-3 | 9449843321 | |
| | | | ಸಹಾಯಕ ಅಭಿಯಂತರರು-4 | 9449843322 | |
| | | | ಸಹಾಯಕ ಅಭಿಯಂತರರು-5 | 9449843323 | |
| | | | ಒಟ್ಟು | | 5 |
| 8 | ಕಾರ್ಯಪಾಲಕ ಅಭಿಯಂತರರ ಕಾರ್ಯಲಯ ಕೆಹೆಚ್‌ಎಸ್‌ಡಿಆರ್‌ಪಿ, ವಿಭಾಗ-(ಶ್ರೀನಲಾರ್) ಧಾರವಾಡ ಅಭಿಯಂತರರು /ಸಿಬ್ಬಂದಿ | ರೂ.525 | ಸಲಕರಣಾ ಅಭಿಯಂತರರು | 9449843324 | 1 |
| | | | ಪರಿಸರ ಅಭಿಯಂತರರು | 9449843325 | 1 |
| | | | ಕಿರಿಯ ಅಭಿಯಂತರರು-1 | 9449843326 | 2 |
| | | | ಕಿರಿಯ ಅಭಿಯಂತರರು-2 | 9449843327 | |
| | | | ಲೆಕ್ಕಧೀಕ್ಷಕರು | 9449843328 | 1 |
| | | | ಒಟ್ಟು | | 5 |
| 9 | ಸಹಾಯಕ ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ ಕೆಹೆಚ್‌ಎಸ್‌ಡಿಆರ್‌ಪಿ, ಬೆಂಗಳೂರು ಉಪವಿಭಾಗ- (ಎ.ಎನ್.ಎಂ. ತರಬೇತಿ ಕೇಂದ್ರ) ಧಾರವಾಡ ಅಭಿಯಂತರರು/ಸಿಬ್ಬಂದಿ | ರೂ.525 | ಕಿರಿಯ ಅಭಿಯಂತರರು-1 | 9449843329 | 4 |
| | | | ಕಿರಿಯ ಅಭಿಯಂತರರು-2 | 9449843330 | |
| | | | ಕಿರಿಯ ಅಭಿಯಂತರರು-3 | 9449843331 | |
| | | | ಕಿರಿಯ ಅಭಿಯಂತರರು-4 | 9449843332 | |
| | | | ಒಟ್ಟು | | 4 |
| 10 | ಸಹಾಯಕ ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ ಕೆಹೆಚ್‌ಎಸ್‌ಡಿಆರ್‌ಪಿ, ಬೆಂಗಳೂರು ಉಪವಿಭಾಗ- ಬೆಳಗಾಂ, ಅಭಿಯಂತರರು /ಸಿಬ್ಬಂದಿ | ರೂ.525 | ಕಿರಿಯ ಅಭಿಯಂತರರು-1 | 9449843333 | 4 |
| | | | ಕಿರಿಯ ಅಭಿಯಂತರರು-2 | 9449843334 | |
| | | | ಕಿರಿಯ ಅಭಿಯಂತರರು-3 | 9449843335 | |
| | | | ಕಿರಿಯ ಅಭಿಯಂತರರು-4 | 9449843336 | |
| | | | ಒಟ್ಟು | | 4 |

| ಕ್ರ. ಸಂ. | ಕಛೇರಿಯ ಹೆಸರು | ಬಳಕೆಗೆ ನಿಗಧಿ ಪಡಿಸುವ ಗರಿಷ್ಠ ಮೊತ್ತ | ಅಧಿಕಾರಿಗಳ ಪದನಾಮ | ಅಧಿಕಾರಿಗಳಿಗೆ ನೀಡಲಾಗಿರುವ ಸಂಖ್ಯೆ | ವಿತರಿಸಿದ ಸಿಮ್‌ಗಳ ಒಟ್ಟು ಸಂಖ್ಯೆ |
|---|---|---|---|---|---|
| 11 | ಕಾರ್ಯಪಾಲಕ ಅಭಿಯಂತರರ ಕಾರ್ಯಲಯ, ಕೆಹೆಚ್‌ಎಸ್‌ಡಿಆರ್‌ಪಿ, ವಿಭಾಗ ಸರ್ಕಾರಿ ಆಸ್ಪತ್ರೆ ಆವರಣ, ಗುಲ್ಬರ್ಗಾ, ಅಭಿಯಂತರರು/ಸಿಬ್ಬಂದಿ | ರೂ.525 | ಸಹಾಯಕ ಅಭಿಯಂತರರು–1 | 9449843337 | 2 |
| | | | ಸಹಾಯಕ ಅಭಿಯಂತರರು–2 | 9449843338 | |
| | | | ಸಲಕರಣಾ ಅಭಿಯಂತರರು | 9449843339 | 1 |
| | | | ಪರಿಸರ ಅಭಿಯಂತರರು | 9449843340 | 1 |
| | | | ಲೆಕ್ಕಧೀಕ್ಷಕರು | 9449843341 | 1 |
| | | | ಒಟ್ಟು | | 5 |
| 12 | ಸಹಾಯಕ ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ ಕೆಹೆಚ್‌ಎಸ್‌ಡಿಆರ್‌ಪಿ, ವಿಭಾಗ ಸರ್ಕಾರಿ ಆಸ್ಪತ್ರೆ ಆರಣ, ಗುಲ್ಬರ್ಗಾ ಅಭಿಯಂತರರು/ಸಿಬ್ಬಂದಿ | ರೂ.525 | ಸಹಾಯಕ ಅಭಿಯಂತರರು–1 | 9449843342 | 4 |
| | | | ಸಹಾಯಕ ಅಭಿಯಂತರರು–2 | 9449843343 | |
| | | | ಸಹಾಯಕ ಅಭಿಯಂತರರು–3 | 9449843344 | |
| | | | ಸಹಾಯಕ ಅಭಿಯಂತರರು–4 | 9449843345 | |
| | | | ಒಟ್ಟು | | 4 |
| 13 | ಸಹಾಯಕ ಕಾರ್ಯಪಾಲಕ ಅಭಿಯಂತರರ ಕಾರ್ಯಾಲಯ ಕೆಹೆಚ್‌ಎಸ್‌ಡಿಆರ್‌ಪಿ, ಉಪವಿಭಾಗ ಒಫೆಕ್ ಆಸ್ಪತ್ರೆ ಆವರಣ, ರಾಯಚೂರು. | ರೂ.525 | ಸಹಾಯಕ ಅಭಿಯಂತರರು–1 | 9449843346 | 2 |
| | | | ಸಹಾಯಕ ಅಭಿಯಂತರರು–2 | 9449843347 | |
| | | | ಕಿರಿಯ ಅಭಿಯಂತರರು–1 | 9449843348 | 1 |
| | | | ಒಟ್ಟು | | 3 |
| 14 | ರಾಜ್ಯ ಯೋಜನಾ ನಿರ್ವಹಣ ಘಟಕದ ಕಾರ್ಯಲಯ (ಆ.ಕು.ಕ ನಿರ್ದೇಶನಾಲಯ ಆವರಣ ಆನಂದರಾವ್ ವೃತ್ತ ಬೆಂಗಳೂರು ಅಧಿಕಾರಿಗಳು/ಸಲಹೆಗಾರರು | ರೂ.525 | ಉಪ ನಿರ್ದೇಶಕರು (ಡೆಮೋಗ್ರಾಫರ್) | 9449843357 | 1 |
| | | | ಉಪನಿರ್ದೇಶಕರು (ಐಇಸಿ) | 9449843358 | 1 |
| | | | ರಾಜ್ಯ ಲೆಕ್ಕ ಪತ್ರ ವ್ಯವಸ್ಥಾಪಕರು | 9449843352 | 1 |
| | | | ಸಲಹೆಗಾರರು (ಆರ್‌ಸಿಎಚ್) | 9449843353 | 1 |
| | | | ಸಲಹೆಗಾರರು (ಮಕ್ಕಳ ಆರೋಗ್ಯ)(NRHM) | 9449843354 | 1 |
| | | | ಕಾನೂನು ಸಲಹೆಗಾರರು (NRHM) | 9449843355 | 1 |
| | | | ಒಟ್ಟು | | 6 |
| | | | | ಒಟ್ಟು ಸಂಖ್ಯೆ | 68 |

ಈ ವೆಚ್ಚವನ್ನು ಲೆಕ್ಕಶೀರ್ಷಿಕೆ "2210–06–800–0–80–051" (ಸಾಮಾನ್ಯ ವೆಚ್ಚ) ಯಡಿಯಲ್ಲಿ 2007–08ನೇ ಸಾಲಿನಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
**ಸುಷಮಾ ಗೋಡಬೋಲೆ**
ಸರ್ಕಾರದ ಉಪ ಕಾರ್ಯದರ್ಶಿ, ಕೆಹೆಚ್‌ಎಸ್‌ಡಿಆರ್‌ಪಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಪಿ.ಆರ್. 1053

**ವಿಷಯ:** ಡಾ: ಉಮಾಪಾರ್ವತಿ ಜಿ.ಜುಗನೂರ್, ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೆರೂರ, ಬಾಗಲಕೋಟೆ ಜಿಲ್ಲೆ ಇವರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.

**ಓದಲಾಗಿದೆ:** ಆಯುಕ್ತರು, ಆಕುಕ ಸೇವೆಗಳು, ಬೆಂಗಳೂರು, ಇವರ ಪತ್ರ ಸಂಖ್ಯೆ: ಜೆಆರ್‌ಒ (3) 36/ 2008–09 ದಿನಾಂಕ: 23.05.2008 ಮತ್ತು 02.01.2009

**ಪ್ರಸ್ತಾವನೆ:**

ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು, ಇವರು ಮೇಲೆ ಓದಲಾದ ಪತ್ರದಲ್ಲಿ ಡಾ: ಉಮಾಪಾರ್ವತಿ ಜಿ.ಜುಗನೂರ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೆರೂರ, ಬಾಗಲಕೋಟೆ ಜಿಲ್ಲೆ ಇವರು ದಿನಾಂಕ: 12.09.2002 ರಂದು ಸರ್ಕಾರಿ ಸೇವೆಗೆ ಸೇರಿದ್ದು, ದಿನಾಂಕ: 17/05/2004 ರಿಂದ ಕರ್ತವ್ಯಕ್ಕೆ ಗೈರುಹಾಜರಿಯಾಗಿ ತಮ್ಮ ಮನವಿ ದಿನಾಂಕ:23.06.2004 ರಲ್ಲಿ ಹುದ್ದೆಗೆ ರಾಜೀನಾಮೆ ಸಲ್ಲಿಸಿದ್ದು, ಸದರಿಯವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲ. ಹಾಗೂ ಸರ್ಕಾರಕ್ಕೆ ಯಾವುದೇ ಬಾಕಿ ಬರಬೇಕಾಗಿರುವುದಿಲ್ಲವಾದ್ದರಿಂದ ಸದರಿ ವೈದ್ಯರ ರಾಜೀನಾಮೆಯನ್ನು ಅಂಗೀಕರಿಸಲು ಕೋರಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಆಕುಕ 82 ಹೆಚ್‌ಎಸ್‌ಹೆಚ್ 2009, ಬೆಂಗಳೂರು, ದಿನಾಂಕ: 23ನೇ ಮಾರ್ಚ್ 2009**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಡಾ: ಉಮಾಪಾರ್ವತಿ ಜಿ.ಜುಗನೂರ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ, ಕೆರೂರ, ಬಾಗಲಕೋಟೆ ಜಿಲ್ಲೆ ಇವರು ತಮ್ಮ ಹುದ್ದೆಗೆ ಸಲ್ಲಿಸಿರುವ ರಾಜೀನಾಮೆಯನ್ನು ದಿನಾಂಕ: 23.06.2004 ರಿಂದ ಅನ್ವಯವಾಗುವಂತೆ ಸರ್ಕಾರವು ಅಂಗೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಐ. ಹೇಮನಾಥ್**

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು–1).

ಪಿ.ಆರ್. 1054

## ವಸತಿ ಸಚಿವಾಲಯ

**ವಿಷಯ:** 2008–09ನೇ ಸಾಲಿನಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ನಾಲ್ಕನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ವಇ 22 ಕೊಮಂಲೆ 2008, ಬೆಂಗಳೂರು, ದಿನಾಂಕ: 23.06.2008.
2. ಸರ್ಕಾರದ ಆದೇಶ ಸಂಖ್ಯೆ:ವಇ 22 ಕೊಮಂಲೆ 2008, ಬೆಂಗಳೂರು, ದಿನಾಂಕ: 25.09.2008.
3. ಸರ್ಕಾರದ ಆದೇಶ ಸಂಖ್ಯೆ:ವಇ 22 ಕೊಮಂಲೆ 2008, ಬೆಂಗಳೂರು, ದಿನಾಂಕ: 22.12.2008.
4. ಆಯುಕ್ತರು, ಕಕೊನಿಮ, ಬೆಂಗಳೂರು ಇವರ ಪತ್ರ ಸಂಖ್ಯೆ:ಕಕೊನಿಮ/ಲೆಪಶಾ/ಅನುದಾನ: 2008–2009, ದಿನಾಂಕ: 04.02.2009.

**ಪ್ರಸಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಯೋಜನೆಯಡಿಯಲ್ಲಿ ರೂ.62.50 ಲಕ್ಷಗಳು ಹಾಗೂ ಯೋಜನೇತರಡಿಯಲ್ಲಿ ರೂ. 784.735 ಲಕ್ಷಗಳು ಒಟ್ಟು ರೂ.847.235 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಕ್ರಮ ಸಂಖ್ಯೆ (2)ರಲ್ಲಿ ಎರಡನೇ ತ್ರೈಮಾಸಿಕ ಕಂತಿನ ಅನುದಾನ ಯೋಜನೆಯಡಿಯಲ್ಲಿ ರೂ.62.50 ಲಕ್ಷಗಳು ಹಾಗೂ ಯೋಜನೇತರಡಿಯಲ್ಲಿ ರೂ.775.385 ಲಕ್ಷಗಳು ಒಟ್ಟು ರೂ. 837.885 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಕ್ರಮ ಸಂಖ್ಯೆ (3)ರಲ್ಲಿ ಮೂರನೇ ತ್ರೈಮಾಸಿಕ ಕಂತಿನ ಅನುದಾನ ಯೋಜನೆಯಡಿಯಲ್ಲಿ ರೂ.62.50 ಲಕ್ಷಗಳು ಹಾಗೂ ಯೋಜನೇತರಡಿಯಲ್ಲಿ ರೂ.781.16449 ಲಕ್ಷಗಳು ಒಟ್ಟು ರೂ. 843.66449 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಕ್ರಮ ಸಂಖ್ಯೆ (3)ರಲ್ಲಿ ಆಯುಕ್ತರು, ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ರವರ ಪತ್ರದಲ್ಲಿ 2008–09ನೇ ಸಾಲಿನಲ್ಲಿ 4ನೇ ತ್ರೈಮಾಸಿಕ ಕಂತಿನ ಅನುದಾನ ಸಿಬ್ಬಂದಿ ವೆಚ್ಚಕ್ಕೆ ಕ್ರಮವಾಗಿ (ಯೋಜನೆ ಮತ್ತು ಯೋಜನೆತರಡಿ) ಒಟ್ಟು 128.125 ಲಕ್ಷಗಳು, ಹಾಗೂ ಹುಡ್ಕೋ ಸಾಲಗಳ ಮೇಲು ಉಸ್ತುವಾರಿ ರೂ.698.28 ಲಕ್ಷಗಳು ಒಟ್ಟು ಯೋಜನೆಯಡಿ ರೂ.62.50 ಲಕ್ಷಗಳು ಹಾಗೂ ಯೋಜನೇತರಡಿಯಲ್ಲಿ ರೂ.763.905 ಲಕ್ಷಗಳು ಒಟ್ಟು ರೂ.826.405 ಲಕ್ಷಗಳನ್ನು ಮಂಡಳಿಗೆ ಬಿಡುಗಡೆ ಮಾಡಲು ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ವಿವಿಧ ಲೆಕ್ಕಶೀರ್ಷಿಕೆಗಳಡಿ ನಾಲ್ಕನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ವಇ 22 ಕೊಮಂಲೆ 2008, ಬೆಂಗಳೂರು, ದಿನಾಂಕ: 24ನೇ ಮಾರ್ಚ್ 2009**

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ 2008–09ನೇ ಸಾಲಿಗೆ ನಾಲ್ಕನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಾದ ಸಿಬ್ಬಂದಿ ವೆಚ್ಚ ಯೋಜನೆ ಮತ್ತು ಯೋಜನೇತರ ಹಾಗೂ ಹುಡ್ಕೋ ಸಾಲದ ಮೇಲು ಉಸ್ತುವಾರಿ (ಯೋಜನೇತರ)ಗಾಗಿ ರೂ.826.39755 ಲಕ್ಷ (ಎಂಟು ನೂರ ಇಪ್ಪತ್ತಾರು ಲಕ್ಷದ ಮತ್ತು ಮೂವತ್ತೊಂಬತ್ತು ಸಾವಿರದ ಏಳು ನೂರ ಐವತ್ತೈದು ರೂಪಾಯಿಗಳು ಮಾತ್ರ) ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಬಿಡುಗಡೆ ಮಾಡಿ ಸರ್ಕಾರ ಆದೇಶಿಸಿದೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ಲೆಕ್ಕ ಶೀರ್ಷಿಕೆ | ನಾಲ್ಕನೇ ತ್ರೈಮಾಸಿಕ | |
|---|---|---|---|
| | | ಯೋಜನೆ | ಯೋಜನೇತರ |
| 1 | ಸಿಬ್ಬಂದಿ ವೆಚ್ಚ<br>2217-04-191-2-01 | 62.50 | 65.62500 |
| 2 | ಹುಡ್ಕೋ ಸಾಲಗಳ ಮೇಲು ಉಸ್ತುವಾರಿ<br>4217-60-800-3-01 | - | 698.27255 |
| | **ಒಟ್ಟು** | **62.50** | **763.89755** |
| | **ಒಟ್ಟು ಮೊತ್ತ (ಯೋ + ಯೋಜನೇತರ)** | **826.39755** | |

ಈ ಹಣಕಾಸಿನ ಬಗ್ಗೆ ಈ ಕೆಳಕಂಡ ನಿಬಂಧನೆಗಳನ್ನು ವಿಧಿಸಿದೆ.

1. ಸರ್ಕಾರದ ಉಪ ಕಾರ್ಯದರ್ಶಿ, ವಸತಿ ಇಲಾಖೆ, ಬೆಂಗಳೂರು ಇವರು ಹಣ ಬಿಡುಗಡೆ ಮಾಡುವ ಬಿಲ್ಲಿಗೆ ಮೇಲು ರುಜು ಮಾಡಲು ಅಧಿಕೃತವಾಗಿರುತ್ತದೆ.
2. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದ ಬಗ್ಗೆ ಪ್ರತ್ಯೇಕ ಲೆಕ್ಕವನ್ನು ಇಡತಕ್ಕದ್ದು.
3. ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆ ಮಾಡಿದೆಯೋ ಅದೇ ಉದ್ದೇಶಕ್ಕಾಗಿ ಬಳಸತಕ್ಕದ್ದು.
4. ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣಕಾಸಿನ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಮಹಾಲೇಖಪಾಲರು, ಕರ್ನಾಟ, ಬೆಂಗಳೂರು ಇವರಿಗೆ ಕಳುಹಿಸಿ ಅದರ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಎಫ್‌ಡಿ 83 ವೆಚ್ಚ-9/2009, ದಿನಾಂಕ: 13.03.2009ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1070 **ಜಿ.ಆರ್. ನಾಗರಾಜ**

ಪೀಠಾಧಿಕಾರಿ-4, ವಸತಿ ಇಲಾಖೆ.

## ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

### ತಿದ್ದುಪಡಿ

**ಸಂಖ್ಯೆ: ಲಾ 47 ಎಲ್‌ಸಿಇ 2004 (P), ಬೆಂಗಳೂರು, ದಿನಾಂಕ: 8ನೇ ಏಪ್ರಿಲ್ 2009**

ಸರ್ಕಾರಿ ಆದೇಶದ ಸಂಖ್ಯೆ: ಲಾ 47 ಎಲ್‌ಸಿಇ 2004, ದಿನಾಂಕ: 23.06.2005ರಲ್ಲಿನ ಕ್ರಮ ಸಂಖ್ಯೆ: 5ರಲ್ಲಿ ನಮೂದಿಸಲಾಗಿರುವ "ಬೆಂಗಳೂರಿನಲ್ಲಿ 3 ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ (ಸಂಚಾರಿ) ನ್ಯಾಯಾಲಯಗಳು ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ನ್ಯಾಯಾಲಯ" ಎಂದು ನಮೂದಿಸಲಾಗಿರುವುದರ ಬದಲಾಗಿ "ಬೆಂಗಳೂರಿನಲ್ಲಿ 3 ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ (ಸಂಚಾರಿ) ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ನ್ಯಾಯಾಲಯ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಇ. ಶಿವಾನಂದ**

ಪಿ.ಆರ್. 501 ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-1),

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

### ತಿದ್ದುಪಡಿ

**ಸಂಖ್ಯೆ: ಗ್ರಾಅಪ 6 ಎಸ್‌ಜಿವೈ ಡಿಆರ್‌ಡಿಎ 2007, ಬೆಂಗಳೂರು, ದಿನಾಂಕ: 21ನೇ ಮಾರ್ಚ್ 2009**

ಸರ್ಕಾರದ ಆದೇಶಗಳ ಸಮಸಂಖ್ಯೆ ದಿನಾಂಕ: 24.01.2009 ರಲ್ಲಿ ಬೆಂಗಳೂರು ಗ್ರಾಮಾಂತರ, ಬಿಜಾಪುರ ಹಾಗೂ 28.02.2009 ಗುಲ್ಬರ್ಗಾ ಮತ್ತು ಕೊಪ್ಪಳ ಜಿಲ್ಲಾ ಪಂಚಾಯತಿಗಳಿಗೆ ಡಿಆರ್‌ಡಿಎ ಆಡಳಿತ ಯೋಜನೆಯಡಿ ರಾಜ್ಯದ ಪಾಲಿನ ಅನುದಾನ ಬಿಡುಗಡೆ ಮಾಡಿದ್ದ ಆದೇಶದ ಷರತ್ತಿನಲ್ಲಿರುವ ಲೆಕ್ಕ ಶೀರ್ಷಿಕೆ ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕ ಶೀರ್ಷಿಕೆ : "2515 ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು 00-196-ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ-06 ಜಿಲ್ಲಾ ಪಂಚಾಯತ್-06-ಡಿಆರ್‌ಡಿಎ ಆಡಳಿತಾತ್ಮಕ ವೆಚ್ಚ-(ಕೇಂದ್ರ ಪುರಸ್ಕೃತ ಯೋಜನೆ) 2008-2009 (2515-00-196-6-06)" ರಲ್ಲಿ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 7 ಜಡ್‌ಪಿಎ 2003 ದಿನಾಂಕ: 08.09.2004 ಮತ್ತು 14.07.2005 ರನ್ವಯ ಜಿಲ್ಲಾ ಪಂಚಾಯತ್ ನಿಧಿಗೆ ಜಮೆ ಮಾಡಿಕೊಂಡು ಭರಿಸತಕ್ಕದ್ದು ಎಂಬುದರ ಬದಲಿಗೆ –

ಯೋಜನೆಯ ವೆಚ್ಚವನ್ನು ಲೆಕ್ಕಶಿರ್ಷಿಕೆ : "2515 ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ 00-196-ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ-6-ಜಿಲ್ಲಾ ಪಂಚಾಯತ್-06-ಡಿಆರ್‌ಡಿಎ ಆಡಳಿತಾತ್ಮಕ ವೆಚ್ಚ-(ಕೇಂದ್ರ ಪುರಸ್ಕೃತ ಯೋಜನೆ) 2008-2009 (2515-00-196-6-06)" ರಡಿ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ ಎಫ್‌ಡಿ 1 ಜಡ್‌ಪಿಎ 2007 (ಪಿ2) ದಿನಾಂಕ: 26.04.2007 ರನ್ವಯ ಜಿಲ್ಲಾ ಪಂಚಾಯತ್ ನಿಧಿ-1ಕ್ಕೆ ಜಮೆ ಮಾಡಿಕೊಂಡು ಪೇಯಿಸ್ ರಸೀದಿಯ ಮೂಲಕ ಜಿಲ್ಲಾ ಪಂಚಾಯತಿ ನಿಧಿಯಿಂದ ಅನುದಾನವನ್ನು ಖಜಾನೆಯಿಂದ ಪಡೆದುಕೊಂಡು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿಕೊಂಡು ವೆಚ್ಚವನ್ನು ಭರಿಸತಕ್ಕದ್ದು ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಾ: ಶಮ್ಲಾ ಇಕ್ಬಾಲ್**

ಪಿ.ಆರ್. 1071

ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ವಿಷಯ:** 2008-09ನೇ ಸಾಲಿಗೆ ಎಸ್‌ಜಿಎಸ್‌ವೈ ಎರಡನೇ ಕಂತಿನ ರಾಜ್ಯದ ಪಾಲಿನ ಅನುದಾನವನ್ನು ರಾಜ್ಯದ 3 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**
1. ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ: ಜೆ 12022/1/2008 ಎಸ್‌ಜಿಎಸ್‌ವೈ-I (12) ದಿನಾಂಕ: 02.04.08, (39) ದಿನಾಂಕ: 22.05.08 ಮತ್ತು (63) ದಿನಾಂಕ: 26.06.08.
2. ರಾಜ್ಯ ಸರ್ಕಾರದ ಆದೇಶ ಸಮ ಸಂಖ್ಯೆ ದಿನಾಂಕ: 12.05.08 ಮತ್ತು 29.07.08.
3. ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ:ಜೆ 12022/1/2008 ಎಸ್‌ಜಿಎಸ್‌ವೈ-I (126) ದಿನಾಂಕ: 18.12.08, (146) ದಿನಾಂಕ 14.01.09, (171) ದಿನಾಂಕ: 28.01.09, (183) ದಿನಾಂಕ:09.02.09 ಮತ್ತು (198) ದಿನಾಂಕ: 18.02.09.
4. ರಾಜ್ಯ ಸರ್ಕಾರದ ಆದೇಶ ಸಮ ಸಂಖ್ಯೆ ದಿನಾಂಕ: 30.01.09, 16.02.09 ಮತ್ತು 02.03.09.
5. ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ:ಜೆ 12022 / 1 / 2008 ಎಸ್‌ಜಿಎಸ್‌ವೈ-I (226) ದಿನಾಂಕ: 12.03.09 ಮತ್ತು (227) ದಿನಾಂಕ: 12.03.09.
6. ಸರ್ಕಾರದ ಆದೇಶದ ಸಂಖ್ಯೆ ಗ್ರಾಅಪ 65 ಎಸ್‌ಜೆವೈ 2008 ದಿನಾಂಕ: 11.03.09.
7. ಸರ್ಕಾರದ ಆದೇಶದ ಸಂಖ್ಯೆ ಗ್ರಾಅಪ 65 ಎಸ್‌ಜೆವೈ 2008 ದಿನಾಂಕ: 19.03.09.

**ಪ್ರಸ್ತಾವನೆ:**

2008-09ನೇ ಸಾಲಿನಲ್ಲಿ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ಕೇಂದ್ರ ಸರ್ಕಾರವು ಓದಲಾಗಿದೆ (1) ರಲ್ಲಿ ಒಂದನೇ ಕಂತಿನ ಅನುದಾನವಾಗಿ ಒಟ್ಟು ರೂ.40,08,44,000 ಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಿದ್ದು, ಇದರನ್ವಯ ಓದಲಾಗಿದೆ (2) ರನ್ವಯ ರಾಜ್ಯ ಸರ್ಕಾರವು ಆಯವ್ಯದಲ್ಲಿ ಜಿಲ್ಲೆಗಳಿಗೆ ಲಭ್ಯವಿರುವ ಅನುದಾನದಂತೆ ತನ್ನ ಪಾಲಿನ ಮೊದಲನೇ ಕಂತಿನ ಅನುದಾನ ರೂ.13,21,59,000 ಬಿಡುಗಡೆ ಮಾಡಲಾಗಿದೆ. ಓದಲಾಗಿದೆ (3) ರಲ್ಲಿನ ದಿನಾಂಕಗಳಲ್ಲಿ ಕೇಂದ್ರ ಸರ್ಕಾರ ಈ ಯೋಜನೆಗೆ ರಾಜ್ಯದ 26 ಜಿಲ್ಲೆಗಳಿಗೆ ಎರಡನೇ ಕಂತಿನ ಅನುದಾನವಾಗಿ ಒಟ್ಟು ರೂ.27,96,44,000 ಗಳನ್ನು ಬಿಡುಗಡೆ ಮಾಡಿದೆ. ಇದರನ್ವಯ ರಾಜ್ಯ ಸರ್ಕಾರವು ಆಯವ್ಯಯದಲ್ಲಿ ಜಿಲ್ಲೆಗೆ ಲಭ್ಯವಿರುವ ಅನುದಾನದ ಆಧಾರದ ಮೇಲೆ ಓದಲಾಗಿದೆ (4) ರ ಆದೇಶದಲ್ಲಿ ತನ್ನ ಪಾಲಿನ ಎರಡನೇ ಕಂತಿನ ಅನುದಾನ ರೂ.8,86,39,000 ಗಳನ್ನು ಬಿಡುಗಡೆ ಮಾಡಿದೆ.

ಓದಲಾಗಿದೆ (5)ರ ಪತ್ರಗಳಲ್ಲಿ ಕೇಂದ್ರ ಸರ್ಕಾರ ಎಸ್‌ಜಿಎಸ್‌ವೈಯಡಿ ರಾಜ್ಯದ ಕೋಲಾರ ಮತ್ತು ರಾಮನಗರ ಜಿಲ್ಲಾ ಪಂಚಾಯತಿಗಳಿಗೆ ಎರಡನೇ ಕಂತಿನ ಅನುದಾನವಾಗಿ ಒಟ್ಟು ರೂ.1,26,93,000 ಗಳನ್ನು ಹಾಗೂ ಉತ್ತರ ಕನ್ನಡ ಜಿಲ್ಲಾ ಪಂಚಾಯತಿಗೆ ಕಡಿತಗೊಳಿಸಿದ್ದ ಅನುದಾನವನ್ನು ಪೂರ್ವಸ್ಥಿತಿಗೆ ತಂದು ರೂ.23,38,000 ಗಳನ್ನು ಬಿಡುಗಡೆ ಮಾಡಿದೆ. ಇದಕ್ಕನುಗುಣವಾಗಿ ಕೋಲಾರ, ರಾಮನಗರ ಮತ್ತು ಉತ್ತರ ಕನ್ನಡ ಜಿಲ್ಲಾ ಪಂಚಾಯತಿಗಳಿಗೆ ರಾಜ್ಯ ಸರ್ಕಾರವು ರೂ.50,10,000 ನೀಡಬೇಕಾಗಿದ್ದು, ರಾಜ್ಯದ ಆಯವ್ಯಯದಲ್ಲಿ ಕೋಲಾರ ಜಿಲ್ಲಾ ಪಂಚಾಯತಿಗೆ ರೂ.6,79,000 ಮಾತ್ರ ಲಭ್ಯವಿದ್ದು, ರಾಮನಗರ ಜಿಲ್ಲಾ ಪಂಚಾಯತಿಗೆ ಯಾವುದೇ ಅನುದಾನ ಲಭ್ಯವಿರುವುದಿಲ್ಲ. ಆದ ಕಾರಣ ಈ ಜಿಲ್ಲೆಗಳಿಗೆ ಓದಲಾಗಿದೆ (7) ರ ಆದೇಶದಲ್ಲಿ ಪುನರ್ವಿನಿಯೋಗದ ಮೂಲಕ ಅನುದಾನವನ್ನು ಭರಿಸಲಾಗಿದೆ. ಕೋಲಾರ, ರಾಮನಗರ ಮತ್ತು ಉತ್ತರ ಕನ್ನಡ ಜಿಲ್ಲಾ ಪಂಚಾಯತಿಗಳಿಗೆ ರಾಜ್ಯ ಸರ್ಕಾರವು ರೂ.50,10,000ನ್ನು ಬಿಡುಗಡೆ ಮಾಡಬೇಕಾದ ಕಾರಣ ಈ ಆದೇಶ:

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 32 ಎಸ್‌ಜಿವೈ 2008, ಬೆಂಗಳೂರು, ದಿನಾಂಕ: 21ನೇ ಮಾರ್ಚ್ 2009**

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ರಾಜ್ಯ ಸರ್ಕಾರವು ತನ್ನ ಪಾಲಿನ ಎರಡನೇ ಕಂತಿನ ಅನುದಾನವನ್ನು ಈ ಕೆಳಗೆ ತೋರಿಸಿರುವಂತೆ ಕೋಲಾರ, ರಾಮನಗರ ಮತ್ತು ಉತ್ತರ ಕನ್ನಡ ಜಿಲ್ಲಾ ಪಂಚಾಯತಿಗಳಿಗೆ ಒಟ್ಟು ರೂ.50,10,000 ಗಳನ್ನು (ರೂ.ಐವತ್ತು ಲಕ್ಷದ ಹತ್ತು ಸಾವಿರ ಮಾತ್ರ) ಷರತ್ತುಗಳಿಗೆ ಒಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

| ಕ್ರ. ಸಂ. | ಜಿ.ಪಂ. ಹೆಸರು | ಜಿ.ಪಂ. ಕೋಡ್ | ಡಿ.ಡಿ.ಓ ಕೋಡ್ | ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಎರಡನೇ ಕಂತಿನ ಅನುದಾನ | ರಾಜ್ಯ ಸರ್ಕಾರವು ಬಿಡುಗಡೆ ಮಾಡಬೇಕಾದ ಎರಡನೇ ಕಂತಿನ ಅನುದಾನ |
|---|---|---|---|---|---|
| 1 | ಕೋಲಾರ | 404 | 0700ZZ8002 | 33,46,000 | 11,15,000 |
| 2 | ರಾಮನಗರ | 452 | 0400ZZ0001 | 93,47,000 | 31,16,000 |
| 3 | ಉತ್ತರ ಕನ್ನಡ | 416 | 3000ZZ0080 | 23,38,000 | 7,79,000 |
| | | ಒಟ್ಟು | | **1,50,31,000** | **50,10,000** |

**ಷರತ್ತುಗಳು:**

1999 ಮೇ ತಿಂಗಳ ಎಸ್‌ಜಿಎಸ್‌ವೈ ಕೈಪಿಡಿಯ ಮಾರ್ಗಸೂಚಿಯಂತೆ ಹಣವನ್ನು ಉಪಯೋಗಿಸುವುದು. ಅನುಷ್ಠಾನ ಏಜೆನ್ಸಿಗಳಿಗೆ ಸರ್ಕಾರಿ ಆದೇಶ ತಲುಪಿದ 15 ದಿವಸದೊಳಗೆ ಬಿಡುಗಡೆ ಮಾಡತಕ್ಕದ್ದು.

ನಿಧಿಯ ಮಾದರಿ ಕೇಂದ್ರ ಮತ್ತು ರಾಜ್ಯದ ನಡುವೆ 75 : 25 ರ ಅನುಪಾತದಲ್ಲಿ ನೀಡಲಾಗುವುದು.

ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕ ಶೀರ್ಷಿಕೆ 2501 – ಗ್ರಾಮೀಣಾಭಿವೃದ್ಧಿ ವಿಶೇಷ ಕಾರ್ಯಕ್ರಮಗಳ–01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು–198–ಗ್ರಾಮ ಪಂಚಾಯತ್‌ಗಳಿಗೆ ಸಹಾಯ–6–ಗ್ರಾಮ ಪಂಚಾಯತ್‌ಗಳು–01–ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ (ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ) 2008–09 (2501–01–198–6–01) ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 7 ಜೆಡಿಪಿಎ 2003 ದಿನಾಂಕ: 14.07.2005 ರನ್ವಯ ಖಜಾನೆಯಿಂದ ಪಡೆಯುವುದು.

ಕೋಲಾರ, ರಾಮನಗರ ಮತ್ತು ಉತ್ತರ ಕನ್ನಡ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ ಹಣ ತೆಗೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ. ಈ ಯೋಜನೆಯಡಿ ಕೇಂದ್ರ ಸರ್ಕಾರವು ನೇರವಾಗಿ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿರುವ ಅನುದಾನ ಮತ್ತು ರಾಜ್ಯದ ಪಾಲಿನ ಅನುದಾನವೂ ಸೇರಿದಂತೆ ಒಟ್ಟು ಅನುದಾನವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 14 ಎಸ್ ಜೆ ವೈ 2007 ದಿನಾಂಕ: 18.04.2007 ರ ಸೂಚನೆಯಂತೆ ಕ್ರಮ ಕೈಗೊಳ್ಳುವುದು.

ಬಿಡುಗಡೆ ಮಾಡುವ ಹಣದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.

2008–09ನೇ ಸಾಲಿನ ಅನುಮೋದಿತ ವಾರ್ಷಿಕ ಯೋಜನೆಯನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಇವರು ಸರ್ಕಾರಕ್ಕೆ ಸಲ್ಲಿಸುವುದು.

ಆರ್ಥಿಕ ಮತ್ತು ಭೌತಿಕ ಸಾಧನೆಯ ಮಾಸಿಕ ಪ್ರಗತಿ ವರದಿಯನ್ನು ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಕೇಂದ್ರ ಸರ್ಕಾರದ onlineಗೆ upload ಮಾಡಿ ಪ್ರತಿಯನ್ನು ಸ್ವ ಉದ್ಯೋಗ ಕಾರ್ಯಕ್ರಮಗಳ ಶಾಖೆಗೆ ತಪ್ಪದೇ ಕಳುಹಿಸುವುದು.

ಕೋಲಾರ, ರಾಮನಗರ ಮತ್ತು ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಆಡಿಟ್ ಮಾಡಿದ ಲೆಕ್ಕಗಳನ್ನು ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ: ಗ್ರಾಅಪ 105 ಪಿಬಿಎಸ್ 2009 ದಿನಾಂಕ: 19.03.2009 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಡಾ: ಶಮ್ಲಾ ಇಕ್ಬಾಲ್**

ಪಿ.ಆರ್. 1072 ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ವಿಷಯ:** ಡಿಆರ್‌ಡಿಎ ಆಡಳಿತ ಲೆಕ್ಕ ಶೀರ್ಷಿಕೆ 2515–00–196–6–06 ಯಡಿ ಅನುದಾನವನ್ನು ಪುನರ್ವಿನಿಯೋಗದ ಮೂಲಕ ಭರಿಸುವ ಬಗ್ಗೆ.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 9 ಟಿಎಫ್‌ಪಿ 2005 ದಿನಾಂಕ: 07.04.2005.

2. ಸರ್ಕಾರದ ಆದೇಶದ ಸಮ ಸಂಖ್ಯೆ ದಿನಾಂಕ : 07.03.2009 ಮತ್ತು ತಿದ್ದುಪಡಿ ಆದೇಶ ಸಮ ಸಂಖ್ಯೆ ದಿನಾಂಕ: 09.03.2009.
3. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 7 ಎಸ್‌ಜೆವೈ (ಡಿಆರ್‌ಡಿಎ) 2008, ಬೆಂಗಳೂರು ದಿನಾಂಕ: 18.12.2008.
4. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 6 ಎಸ್‌ಜೆವೈ (ಡಿಆರ್‌ಡಿಎ) 2007, ಬೆಂಗಳೂರು ದಿನಾಂಕ: 24.03.2008.
5. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 6 ಎಸ್‌ಜೆವೈ (ಡಿಆರ್‌ಡಿಎ) 2007, ಬೆಂಗಳೂರು ದಿನಾಂಕ: 28.2.2009.
6. ಸರ್ಕಾರದ ಕಾರ್ಯದರ್ಶಿಗಳು, ಗ್ರಾಅಪಂರಾ ಇಲಾಖೆ ಇವರ ಅ.ಸ. ಪತ್ರ ಸಂಖ್ಯೆ ಗ್ರಾಅಪ 51 ಎಸ್‌ಜೆವೈ 2008 ದಿನಾಂಕ: 18.03.2009.

**ಪ್ರಸ್ತಾವನೆ:**

ಡಿಆರ್‌ಡಿಎ (ಆಡಳಿತ) ಯೋಜನೆಯ ಲೆಕ್ಕ ಶೀರ್ಷಿಕೆ 2515-00-196-6-06 ಯಡಿ 2008-2009ನೇ ಸಾಲಿಗೆ ರಾಜ್ಯದ ಆಯವ್ಯಯದಲ್ಲಿ ರಾಜ್ಯದ ಪಾಲಿನ ಅನುದಾನ ರೂ.559.76 ಲಕ್ಷಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಹಂಚಿಕೆ ಮಾಡಿದೆ. ಡಿಆರ್‌ಡಿಎ ಆಡಳಿತ ಯೋಜನೆ ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಜಿಲ್ಲೆಯ ಆಡಳಿತಾತ್ಮಕ ವೆಚ್ಚ ಭರಿಸಲು ಯೋಜನೆಯ ಮಾರ್ಗ ಸೂಚಿ ಕಂಡಿಕೆ 3.5 ರನ್ವಯ ಜಿಲ್ಲೆಗಳಲ್ಲಿನ ತಾಲ್ಲೂಕುಗಳ ಆಧಾರದ ಮೇಲೆ ಕೇಂದ್ರ ಸರ್ಕಾರ ಅನುದಾನವನ್ನು ಬಿಡುಗಡೆ ಮಾಡುತ್ತದೆ. ಇದಕ್ಕನುಗುಣವಾಗಿ ರಾಜ್ಯದ ಪಾಲಿನ ಅನುದಾನ ಬಿಡುಗಡೆ ಮಾಡಬೇಕಾಗಿದೆ. ಜಿಲ್ಲಾ ಪಂಚಾಯತಿಗಳಿಗೆ ಕೇಂದ್ರ ಸರ್ಕಾರದ ನಿಗದಿತ ಅನುದಾನಕ್ಕಿಂತ ಹೆಚ್ಚುವರಿ ಅನುದಾನ ಅವಶ್ಯವಿದ್ದಲ್ಲಿ, ಮಾರ್ಗಸೂಚಿ ಕಂಡಿಕೆ 3.3 ರನ್ವಯ ಹೆಚ್ಚುವರಿ ಅನುದಾನವನ್ನು ರಾಜ್ಯ ಸರ್ಕಾರವೇ ಭರಿಸಬೇಕಾಗುತ್ತದೆ. ಈ ಕಾರಣದಿಂದ, ಕೆಲವೊಂದು ಜಿಲ್ಲಾ ಪಂಚಾಯತಿಗಳಲ್ಲಿ ಆಡಳಿತಾತ್ಮಕ ವೆಚ್ಚ ಭರಿಸಲು ಅನುದಾನದ ಕೊರತೆ ಉಂಟಾಗಿದ್ದು, ಇದನ್ನು ರಾಜ್ಯ ಸರ್ಕಾರ ಭರಿಸಬೇಕಾದುದರಿಂದ, ಓದಲಾಗಿದೆ (2) ರನ್ವಯ ಪುನರ್ವಿನಿಯೋಗದ ಮೂಲಕ ಭರಿಸಲು ಆದೇಶ ಹೊರಡಿಸಲಾಗಿದೆ. ಓದಲಾಗಿದೆ (3) ರಲ್ಲಿ ಗದಗ್ ಜಿಲ್ಲಾ ಪಂಚಾಯತಿಗೆ ರಾಜ್ಯದ ಆಯವ್ಯಯದಲ್ಲಿ ಅನುದಾನದ ಲಭ್ಯತೆ ಆಧಾರದ ಮೇಲೆ ರೂ.8,30,000 ರ ಬದಲು ರೂ.7,69,000 ಬಿಡುಗಡೆ ಮಾಡಲಾಗಿತ್ತು. ಉಳಿದ ಅನುದಾನ ರೂ.61,000 ಬಿಡುಗಡೆ ಮಾಡಬೇಕಾಗಿದೆ. ಗುಲ್ಬರ್ಗಾ ಜಿಲ್ಲಾ ಪಂಚಾಯತಿಗೆ ಕೇಂದ್ರ ಸರ್ಕಾರ 2008-09ನೇ ಸಾಲಿನ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವಾಗ 2007-08ನೇ ಸಾಲಿನ ರಾಜ್ಯದ ಪಾಲಿನ ಅನುದಾನವನ್ನು ಓದಲಾಗಿದೆ (4)ರ ಆದೇಶದಲ್ಲಿ ಬಿಡುಗಡೆ ಮಾಡಿದ್ದ ಅನುದಾನವನ್ನು ಖಜಾನೆಯಿಂದ ಸೆಳೆಯದ ಕಾರಣ ಕಡಿತಗೊಳಿಸಿ ಬಿಡುಗಡೆ ಮಾಡಿದೆ. ಆದ ಕಾರಣ, ಗುಲ್ಬರ್ಗಾ ಜಿಲ್ಲಾ ಪಂಚಾಯತಿಗೆ ರೂ. 11,12,000 ಗಳನ್ನು ಓದಲಾಗಿದೆ (5) ರಲ್ಲಿ ಬಿಡುಗಡೆ ಮಾಡಲಾಗಿದ್ದು, ಉಳಿಕೆ ಅನುದಾನ ರೂ. 12,88,000 ಗಳನ್ನು ಈಗ ಬಿಡುಗಡೆ ಮಾಡಬೇಕಾಗಿದೆ. 2007-08ನೇ ಸಾಲಿನಲ್ಲಿ ರಾಯಚೂರು ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿದ್ದ ರಾಜ್ಯದ ಪಾಲಿನ ಅನುದಾನ ರೂ.4,87,000 ಖಜಾನೆಯಿಂದ ಸೆಳೆಯದಿದ್ದ ಕಾರಣ, ಸದರಿ ಸಾಲಿನಲ್ಲಿ ಬಿಡುಗಡೆ ಮಾಡುತ್ತಿರುವ ರೂ. 18,02,000 ಗಳಲ್ಲಿ ರೂ.4,87,000 ಗಳನ್ನು ಒಳಗೊಂಡಂತೆ ಬಿಡುಗಡೆ ಮಾಡಬೇಕಾಗಿದೆ. ಈ ಎಲ್ಲಾ ಕಾರಣಗಳಿಂದ, ಬಾಗಲಕೋಟೆ, ಬೆಂಗಳೂರು ನಗರ, ಬೀದರ್, ಚಿತ್ರದುರ್ಗ, ಧಾರವಾಡ, ಹಾವೇರಿ, ಚಾಮರಾಜನಗರ, ಚಿಕ್ಕಮಗಳೂರು ಮತ್ತು ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ಗಳಲ್ಲಿ ಉಳಿತಾಯ ಮಾಡಬಹುದಾದ ಅನುದಾನವನ್ನು ಪುನರ್ವಿನಿಯೋಗದ ಮೂಲಕ ಬಿಜಾಪುರ, ಬಳ್ಳಾರಿ, ದಾವಣಗೆರೆ, ದಕ್ಷಿಣ ಕನ್ನಡ, ಗುಲ್ಬರ್ಗಾ, ಗದಗ್, ಮಂಡ್ಯ, ಮೈಸೂರು, ರಾಯಚೂರು, ಶಿವಮೊಗ್ಗ ಮತ್ತು ತುಮಕೂರು ಜಿಲ್ಲಾ ಪಂಚಾಯತಿಗಳಿಗೆ ನೀಡಲು ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಓದಲಾಗಿದೆ (2)ರ ಆದೇಶದಲ್ಲಿ ಒಪ್ಪಿರುತ್ತಾರೆ. ಇದಲ್ಲದೆ ಈ 11 ಜಿಲ್ಲೆಗಳಿಗೆ ಡಿಆರ್‌ಡಿಎ ಮಾರ್ಗಸೂಚಿಯನ್ವಯ ಅರ್ಹತೆಯಿರುವಷ್ಟು ಅನುದಾನವನ್ನು ನೀಡುವಂತೆ ಓದಲಾಗಿದೆ (6) ರಲ್ಲಿ ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಈ ಅನುದಾನದ ನಿರೀಕ್ಷೆಯ ಮೇರೆಗೆ ರಾಜ್ಯದ ಪಾಲಿನ ಅನುದಾನ ರೂ.1,10,43,000 ಗಳನ್ನು ಬಿಡುಗಡೆ ಮಾಡಬೇಕಾದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 1 ಎಸ್‌ಜೆವೈ (ಡಿಆರ್‌ಡಿಎ) 2008(ಪಿ) ಬೆಂಗಳೂರು, ದಿನಾಂಕ: 21ನೇ ಮಾರ್ಚ್ 2009**

ಡಿಆರ್‌ಡಿಎ (ಆಡಳಿತ) ಯೋಜನೆಯ ಲೆಕ್ಕ ಶೀರ್ಷಿಕೆ 2515-00-196-6-06 ಯಡಿ 2008-2009ನೇ ಸಾಲಿಗೆ ರಾಜ್ಯ ಸರ್ಕಾರವು ಪುನರ್ವಿನಿಯೋಗದ ಮೂಲಕ ಬಿಜಾಪುರ, ಬಳ್ಳಾರಿ, ದಾವಣಗೆರೆ, ದಕ್ಷಿಣ ಕನ್ನಡ, ಗುಲ್ಬರ್ಗಾ, ಗದಗ್, ಮಂಡ್ಯ, ಮೈಸೂರು, ರಾಯಚೂರು, ಶಿವಮೊಗ್ಗ ಮತ್ತು ತುಮಕೂರು ಜಿಲ್ಲಾ ಪಂಚಾಯತಿಗಳಿಗೆ ರೂ. 1,10,43,000 ಗಳನ್ನು (ರೂ.ಒಂದು ಕೋಟಿ ಹತ್ತು ಲಕ್ಷದ ನಲವತ್ತು ಮೂರು ಸಾವಿರ ಮಾತ್ರ) ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

| ಕ್ರ. ಸಂ. | ಜಿಲ್ಲಾ ಪಂಚಾಯತ್ ಹೆಸರು | ಜಿ. ಪಂ ಕೋಡ್ | ಡಿ.ಡಿ.ಓ ಕೋಡ್ | ಪುನರ್ವಿನಿಯೋಗದ ನಂತರ ಬಿಡುಗಡೆ ಮಾಡಿದ ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | ಬಳ್ಳಾರಿ | 418 | 3400ZZ0001 | 11,33,000 |
| 2 | ಬಿಜಾಪುರ | 414 | 2800ZZ9152 | 10,00,000 |
| 3 | ದಕ್ಷಿಣ ಕನ್ನಡ | 409 | 1900zz0047 | 3,12,000 |
| 4 | ದಾವಣಗೆರೆ | 451 | 1700ZZ0002 | 7,63,000 |
| 5 | ಗದಗ್ | 462 | 2600ZZ0001 | 61,000 |
| 6 | ಗುಲ್ಬರ್ಗಾ | 417 | 3200ZZ0003 | 12,88,000 |
| 7. | ಮಂಡ್ಯ | 412 | 1100ZZ0001 | 11,00,000 |
| 8. | ಮೈಸೂರು | 407 | 0900ZZ0001 | 16,82,000 |
| 9. | ರಾಯಚೂರು | 420 | 3600ZZ0001 | 18,02,000 |
| 10. | ಶಿವಮೊಗ್ಗ | 405 | 1400ZZ0002 | 4,00,000 |
| 11. | ತುಮಕೂರು | 406 | 0800ZZ0001 | 15,02,000 |
| | | | ಒಟ್ಟು ರೂ. | **1,10,43,000** |

**ಷರತ್ತುಗಳು:**

ಡಿಆರ್‌ಡಿಎ ಆಡಳಿತ ಯೋಜನೆಯ ಕೈಪಿಡಿಯ ಮಾರ್ಗಸೂಚಿಯಂತೆ ಹಣವನ್ನು ಜಿಲ್ಲಾ ಪಂಚಾಯತ್‌ಗಳ ವೇತನ ಹಾಗೂ ಸಾದಿಲ್ವಾರು ವೆಚ್ಚಗಳಿಗೆ ಮಾತ್ರ ಉಪಯೋಗಿಸುವುದು. ಇನ್ಯಾವುದೇ ಉದ್ದೇಶಗಳಿಗೆ ಉಪಯೋಗಿಸತಕ್ಕದ್ದಲ್ಲ.

ಅನುದಾನದ ಮಾದರಿಯು ಕೇಂದ್ರ ಮತ್ತು ರಾಜ್ಯಗಳ ನಡುವೆ 75:25 ರ ಅನುಪಾತದಲ್ಲಿರುತ್ತದೆ.

ಯೋಜನೆಯ ವೆಚ್ಚವನ್ನು ಲೆಕ್ಕ ಶೀರ್ಷಿಕೆ : "2515 ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು 00-196-ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ-6-ಜಿಲ್ಲಾ ಪಂಚಾಯತ್-06-ಡಿಆರ್‌ಡಿಎ ಆಡಳಿತಾತ್ಮಕ ವೆಚ್ಚ- (ಕೇಂದ್ರ ಪುರಸ್ಕೃತ ಯೋಜನೆ) 2008-2009 (2515-00-196-6-06)" ರಡಿ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ ಎಫ್‌ಡಿ 1 ಜಡ್‌ಪಿಎ 2007 (ಪಿ2) ದಿನಾಂಕ 26.04.2007 ರನ್ವಯ ಜಿಲ್ಲಾ ಪಂಚಾಯತ್ ನಿಧಿ-1ಕ್ಕೆ ಜಮೆ ಮಾಡಿಕೊಂಡು ಪೇಯಿಸ್ ರಸೀದಿಯ ಮೂಲಕ ಜಿಲ್ಲಾ ಪಂಚಾಯತಿ ನಿಧಿಯಿಂದ ಅನುದಾನವನ್ನು ಖಜಾನೆಯಿಂದ ಪಡೆದುಕೊಂಡು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿಕೊಂಡು ವೆಚ್ಚವನ್ನು ಭರಿಸತಕ್ಕದ್ದು.

ಬಿಡುಗಡೆ ಮಾಡುವ ಹಣದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.

ಬಳ್ಳಾರಿ, ಬಿಜಾಪುರ, ದಕ್ಷಿಣ ಕನ್ನಡ, ದಾವಣಗೆರೆ, ಗದಗ್, ಗುಲ್ಬರ್ಗಾ, ಮಂಡ್ಯ, ಮೈಸೂರು, ರಾಯಚೂರು, ಶಿವಮೊಗ್ಗ ಮತ್ತು ತುಮಕೂರು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ ಹಣ ತೆಗೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ.

ಬಳ್ಳಾರಿ, ಬಿಜಾಪುರ, ದಕ್ಷಿಣ ಕನ್ನಡ, ದಾವಣಗೆರೆ, ಗದಗ್, ಗುಲ್ಬರ್ಗಾ, ಮಂಡ್ಯ, ಮೈಸೂರು, ರಾಯಚೂರು, ಶಿವಮೊಗ್ಗ ಮತ್ತು ತುಮಕೂರು ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳು ಆಯಾ ಮಾಹೆಯ ಪ್ರಗತಿ ವರದಿ ಹಾಗೂ ಹುದ್ದೆವಾರು ವಿವರಗಳನ್ನು ಮುಂದಿನ ತಿಂಗಳ 5ನೇ ತಾರೀಖಿನೊಳಗೆ ನಿರ್ದೇಶಕರು {ಸ್ವಉಕಾ}, ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಬಳ್ಳಾರಿ, ಬಿಜಾಪುರ, ದಕ್ಷಿಣ ಕನ್ನಡ, ದಾವಣಗೆರೆ, ಗದಗ್, ಗುಲ್ಬರ್ಗಾ, ಮಂಡ್ಯ, ಮೈಸೂರು, ರಾಯಚೂರು, ಶಿವಮೊಗ್ಗ ಮತ್ತು ತುಮಕೂರು ಜಿಲ್ಲಾ ಪಂಚಾಯತ್‌ಗಳ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಣ ಪತ್ರ ಹಾಗೂ ಲೆಕ್ಕ ಪರಿಶೋಧನಾ ವರದಿಗಳನ್ನು, ನಿರ್ದೇಶಕರು {ಸ್ವಉಕಾ} ಹಾಗೂ ಪ.ನಿ. ಸರ್ಕಾರದ ಉಪ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.


ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ವ್ಯಾಪ್ತಿಗೆ ಬರುವ ಅಡಕಗೊಳಿಸಿರುವ ಅನುಬಂಧದಲ್ಲಿ ತಿಳಿಸಿರುವ ಒಟ್ಟು ರೂ. 450.00 ಲಕ್ಷ (ನಾಲ್ಕು ನೂರ ಐವತ್ತು ಲಕ್ಷ ರೂ.) ಮೊತ್ತದ 5 ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1) ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
2) ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
3) ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
4) ಕಾಮಗಾರಿಯ ಅಂದಾಜು ಪಟ್ಟಿಗೆ ಸಂಬಂಧಿಸಿದಂತೆ ತಾಂತ್ರಿಕ ಮೌಲ್ಯನಿರ್ಣಯ ಸಮಿತಿ/ ತಾಂತ್ರಿಕ ಸಮಿತಿಯು ಸಭೆಯಲ್ಲಿ ನೀಡಿರುವ ಸೂಚನೆಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.
5) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ, 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.
6) ಕಾಮಗಾರಿ ಪೂರ್ಣಗೊಂಡ ಕೂಡಲೇ ಪಿ.ಸಿ.ಆರ್ ವರದಿಯನ್ನು ಸಲ್ಲಿಸತಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯಾರಿಸಿ ಟಿ.ಎ.ಸಿ. ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.
7) ಕಾಮಗಾರಿಗೆ ಅಗತ್ಯವಿರುವ ಜಮೀನಿನ ಸ್ವಾಧೀನಕ್ಕಾಗಿ ನಿಯಮಾನುಸಾರ ತಕ್ಷಣ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ಕೈಗೊಳ್ಳತಕ್ಕದ್ದು.
8) ಇ.ಐ.ಆರ್.ಎಲ್/ ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
9) ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
10) ನೇರ ಅಚ್ಚುಕಟ್ಟು ಹೊಂದಿರುವ ಯೋಜನೆಗಳಿಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ: 16.05.2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಕೆ. ಸುಧಾಕರ ಶೆಟ್ಟಿ**

ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ ಸನೀಇ 15 ಮಸಾವಿ 2009 ಭಾಗ-1(7) ದಿನಾಂಕ: 28.02.2009

(ಮೊತ್ತ ಲಕ್ಷ ರೂ.ಗಳಲ್ಲಿ) ಹಾಗೂ (ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ)

| ಕ್ರ. ಸಂ. | ಕಾಮಗಾರಿ ಹೆಸರು | ಸ್ವೀಕೃತವಾಗಿರುವ ಅಂದಾಜು ಮೊತ್ತ | ಅನುಬಂಧ-ಇ ವಿವರಗಳು | | ನದಿ ಕೊಳ್ಳ | ಕಾಮಗಾರಿ ಸ್ವರೂಪ | ಹೊಸ ಅಚ್ಚುಕಟ್ಟು | ಪುನರ್ ಸ್ಥಾಪಿಸಲಾಗುವ ಸ್ಥಿರೀಕರಿಸುವ ಅಚ್ಚುಕಟ್ಟು | ಕಾಮಗಾರಿಯ ಸಂಕ್ಷಿಪ್ತ ವಿವರಗಳು |
|---|---|---|---|---|---|---|---|---|---|
| | | | ಅಂದಾಜು ಮೊತ್ತ | ಅನುದಾನ | | | | | |
| 1 | 2 | 3 | 4 | 5 | 6 | 7 | 8 | 9 | 10 |
| | **ಲೆಕ್ಕ ಶೀರ್ಷಿಕೆ 4702-00-101-5-01-139 ಅಣೆಕಟ್ಟು ಮತ್ತು ಪಿಕಪ್ – ಪ್ರಧಾನ ಕಾಮಗಾರಿಗಳು** | | | | | | | | |
| 1 | ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೂಕಿನ ದರೂರು ಹತ್ತಿರ ಚೆಕ್ ಡ್ಯಾಂ ನಿರ್ಮಾಣ. | 50.00 | 30.00 | 9.00 | ಕೃಷ್ಣಾ | ಹೊಸ ಕಾಮಗಾರಿ | 101 | | ಹೊಸ ಚೆಕ್ ಡ್ಯಾಂ ನಿರ್ಮಾಣ ಉದ್ದ – 70.00 ಮೀ. ಎತ್ತರ – 1.80 ಮೀ. ಶೇಖರಣಾ ಸಾಮರ್ಥ್ಯ-1.4538Mcft ಶೇ.10ರ ಬಡ್ಡಿದರದಲ್ಲಿ ಲಾಭ ವೆಚ್ಚದ ಅನುಪಾತ 3.32 |
| | ಆದೇಶ ಸಂಖ್ಯೆ ಸನೀಇ 1 ಆವಿಸಂ 2009 ದಿನಾಂಕ: 24.02.2009 ರಲ್ಲಿ ಅನುಮೋದಿಸಿರುವ ಮರು ಹೊಂದಾಣಿಕೆ ಅನುದಾನ | | | 6.00 | | | | | |
| | ಒಟ್ಟು | **50.00** | **30.00** | **15.00** | | | | | |
| 2 | ಉತ್ತರಕನ್ನಡ ಜಿಲ್ಲೆ ಕುಮಟಾ ತಾಲ್ಲೂಕಿನ ಮಣಿಕಟ್ಟಾ ಖಾರ್‌ಲ್ಯಾಂಡ್ ಯೋಜನೆ ಲುಕ್ಕೇರಿ ಸ್ಲೂಯೀಸ್ ಕಂ ಬ್ರಿಡ್ಜ್ ಪುನರ್ನಿರ್ಮಾಣ. | 130.00 | 130.00 | 46.00 | ಪಶ್ಚಿಮ ವಾಹಿನಿ | ಹೊಸ ಕಾಮಗಾರಿ | | 530 | 59.70ಮೀ. ಉದ್ದದ ಸ್ಲೂಯೀಸ್ ಕಂ ಬ್ರಿಡ್ಜ್ ಪುನರ್ನಿರ್ಮಾಣ. |
| | **ಒಟ್ಟು ಲೆಕ್ಕ ಶೀರ್ಷಿಕೆ 4702-00-101-5-01-139** | **180.00** | **160.00** | **61.00** | | | | | |
| | **ಲೆಕ್ಕ ಶೀರ್ಷಿಕೆ 4702-00-101-3-01-139 ಏ.ನೀ.ಯೋಜನೆ ನಿರ್ಮಾಣ (ಪ್ರಧಾನ ಕಾಮಗಾರಿಗಳು)** | | | | | | | | |
| 3 | ಬಳ್ಳಾರಿ ಜಿಲ್ಲೆ ಸಿರಗುಪ್ಪ ತಾಲ್ಲೂಕಿನ ಹಾಗಲೂರು ಹತ್ತಿರ ಏತ ನೀರಾವರಿ ಯೋಜನೆ ನಿರ್ಮಾಣ. | 180.00 | 150.00 | 45.00 | ಕೃಷ್ಣಾ | ಹೊಸ ಕಾಮಗಾರಿ | 223 | | ಹೊಸ ಏ.ನೀ.ಯೋ ನಿರ್ಮಾಣ ನೀರಿನ ಮೂಲ – ಹೀರೇಹಳ್ಳ Centrifugal pumps of 70HP-2Nos working & 1 standby ಬಳಸಿ 2300.00ಮೀ. ಉದ್ದದ ಹಾಗೂ 700ಮೀ.ಮೀ. ವ್ಯಾಸದ ಪಿ ಎಸ್ ಸಿ ಏರುಕೊಳವೆ ಮೂಲಕ ನೀರೊದಗಿಸುವುದು. ಶೇ.10ರ ಬಡ್ಡಿದರದಲ್ಲಿ ಲಾಭ ವೆಚ್ಚದ ಅನುಪಾತ 1.59 ಆಗಿರುತ್ತದೆ. |
| | ಆದೇಶ ಸಂಖ್ಯೆ 1 ಆವಿಸಂ 2009 ದಿನಾಂಕ: 24.02.2009 ರಲ್ಲಿ ಅನುಮೋದಿಸಿರುವ ಮರು ಹೊಂದಾಣಿಕೆ ಅನುದಾನ | | | 9.00 | | | | | |
| | ಒಟ್ಟು | **180.00** | **150.00** | **54.00** | | | | | |

## ಅನುಬಂಧ

**ಸರ್ಕಾರದ ಆದೇಶ ಸಂಖ್ಯೆ ಸನೀಇ 15 ಮಸಾವಿ 2009 ಭಾಗ-1(8) ದಿನಾಂಕ: 28.02.2009**

(ಮೊತ್ತ ಲಕ್ಷ ರೂ.ಗಳಲ್ಲಿ) ಹಾಗೂ (ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ)

| ಕ್ರ. ಸಂ. | ಕಾಮಗಾರಿ ಹೆಸರು | ಸ್ವೀಕೃತ ವಾಗಿರುವ ಅಂದಾಜು ಮೊತ್ತ | ಅನುಬಂಧ–ಇ ವಿವರಗಳು | | ನದಿ ಕೊಳ್ಳ | ಕಾಮಗಾರಿ ಸ್ವರೂಪ | ಹೊಸ ಅಚ್ಚುಕಟ್ಟು | ಪುನರ್ ಸ್ಥಾಪಿಸಲಾಗುವ ಸ್ಥಿರೀಕರಿಸುವ ಅಚ್ಚುಕಟ್ಟು | ಕಾಮಗಾರಿಯ ಸಂಕ್ಷಿಪ್ತ ವಿವರಗಳು |
|---|---|---|---|---|---|---|---|---|---|
| | | | ಅಂದಾಜು ಮೊತ್ತ | ಅನುದಾನ | | | | | |
| 1 | 2 | 3 | 4 | 5 | 6 | 7 | 8 | 9 | 10 |
| | **ಲೆಕ್ಕ ಶೀರ್ಷಿಕೆ 4702-00-101-1-02-139 ಹೊಸಕೆರೆಗಳ ನಿರ್ಮಾಣ (ಪ್ರಧಾನ ಕಾಮಗಾರಿಗಳು)** | | | | | | | | |
| 1 | ಗುಲಬರ್ಗಾ ಜಿಲ್ಲೆ ಹಾಗೂ ತಾಲ್ಲೂಕಿನ ಮೇಲಕುಂದಾ ಗ್ರಾಮದ ಸಿಡ್ಲಗುಂಡ ನಾಲೆಗೆ ಜಿನುಗು ಕೆರೆ ನಿರ್ಮಾಣ | 59.00 | 60.00 | 18.00 | ಕೃಷ್ಣಾ | ಹೊಸ ಕಾಮಗಾರಿ | | ಪರೋಕ್ಷ ನೀರಾವರಿ | ಹೊಸ ಜಿನುಗು ಕೆರೆ ನಿರ್ಮಾಣ ಏರಿಯ ಉದ್ದ – 65.00ಮೀ. ಎತ್ತರ–9.00ಮೀ. FOF ಮಾದರಿಯ ಕೋಡಿಯ ಉದ್ದ–5.00ಮೀ, ಶೇಖರಣಾ ಸಾಮರ್ಥ್ಯ–0.03Mcum |
| | **ಲೆಕ್ಕ ಶೀರ್ಷಿಕೆ 4702-00-101-1-07-139 ಕೆರೆಗಳ ಆಧುನೀಕರಣ (ಪ್ರಧಾನ ಕಾಮಗಾರಿಗಳು)** | | | | | | | | |
| 2 | ಹಾವೇರಿ ಜಿಲ್ಲೆ ಕಡಕೋಳ ಕೆರೆಯ ಕೊಚ್ಚಿಹೋಗಿರುವ ಏರಿಯ ಭಾಗದ ಪುನರ್ನಿರ್ಮಾಣ | 40.00 | 40.00 | 12.00 | ಕೃಷ್ಣಾ | ಪುನರುಜ್ಜೀವನ ಕಾಮಗಾರಿ | | 145 | ಭಾರೀ ಮಳೆಯಿಂದಾಗಿ ಕೊಚ್ಚಿಹೋಗಿರುವ ಏರಿಯ ಪುರ್ನನಿರ್ಮಾಣ. |
| 3 | ಹಾವೇರಿ ಜಿಲ್ಲೆ ಹಿರೇಕೆರೂರ ತಾಲ್ಲೂಕಿನ ಹಿರೇಕೆರೂರ ಕೆರೆ ಹೊಳೆತ್ತುವುದು | 40.00 | 40.00 | 12.00 | ಕೃಷ್ಣಾ | ಪುನರುಜ್ಜೀವನ ಕಾಮಗಾರಿ | | 215 | ಕೆರೆಯ ಏರಿ, ವಿತರಣಾ ಕಾಲುವೆ ದುರಸ್ತಿ ಮತ್ತು ಹೊಳೆತ್ತುವುದು. ಹಳೆ ತೂಬುಗಳ ಪುನರ್ ನಿರ್ಮಾಣ ಇತ್ಯಾದಿ. |
| 4 | ಹಾವೇರಿ ಜಿಲ್ಲೆ ಹಿರೇಕೆರೂರ ತಾಲ್ಲೂಕಿನ ಚಿಕ್ಕೇರೂರ ಕೆರೆ ಹೂಳೆತ್ತುವುದು | 40.00 | 40.00 | 12.00 | ಕೃಷ್ಣಾ | ಪುನರುಜ್ಜೀವನ ಕಾಮಗಾರಿ | | 142 | ಕೆರೆಯ ಏರಿ, ವಿತರಣಾ ಕಾಲುವೆ ದುರಸ್ತಿ ಮತ್ತು ಹೊಳೆತ್ತುವುದು. ಹಳೆ ತೂಬುಗಳ ಪುನರ್ ನಿರ್ಮಾಣ ಇತ್ಯಾದಿ. |
| | ಲೆಕ್ಕ ಶೀರ್ಷಿಕೆ 4702-00-101-1-07-139 ಒಟ್ಟು | 120.00 | 120.00 | 36.00 | | | | | |
| | **ಒಟ್ಟು** | **179.00** | **180.00** | **54.00** | | | | | |

**ಕೆ. ಸುಧಾಕರ ಶೆಟ್ಟಿ**
ಸರ್ಕಾರದ ಅಧೀನ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್. 1092

## ಒಳಾಡಳಿತ ಸಚಿವಾಲಯ

**ವಿಷಯ:** ಶ್ರೀ ಎ.ಜಿ. ಮುಳ್ಳೂರ, ನಿವೃತ್ತ ಸರ್ಕಾರಿ ಅಭಿಯೋಜಕರು, ಬಿಜಾಪುರ, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ)(1)ರ ಪ್ರಕಾರ ನಿವೃತ್ತಿ ವೇತನಕ್ಕೆ ಹೆಚ್ಚುವರಿ ಅರ್ಹತಾದಾಯಕ ಸೇವೆಯ ಸೇರ್ಪಡೆಗೆ ಪರಿಗಣಿಸುವ ಕುರಿತು.

**ಓದಲಾಗಿದೆ:** 1. ಸರ್ಕಾರದ ಅಧಿಸೂಚನೆ ಸಂ: ಲಾ 229 ಪಿಪಿಇ 81, ದಿನಾಂಕ: 24.02.1982.
2. ಸರ್ಕಾರದ ಆದೇಶದ ಸಂ. ಲಾ 25 ಪಿಪಿಇ 83, ದಿನಾಂಕ: 05/06.05.1983.
3. ಸದರಿ ಅಧಿಕಾರಿಯವರ ಮನವಿ ದಿನಾಂಕ: 03.07.2008.
4. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂ: ಡಿಪಿಎನ್/ಲೆಕ್ಕ-1/50/2008-09, ದಿನಾಂಕ: 11.07.2008.

**ಪ್ರಸ್ತಾವನೆ:**

ಶ್ರೀ ಎ.ಜಿ. ಮುಳ್ಳೂರ, ನಿವೃತ್ತ ಸರ್ಕಾರಿ ಅಭಿಯೋಜಕರು, ಬಿಜಾಪುರ, ಇವರು ಮೇಲೆ (1)ರಲ್ಲಿ ಓದಲಾದ ದಿನಾಂಕ: 24.02.1982ರ ಸರ್ಕಾರದ ಅಧಿಸೂಚನೆಯ ಕ.ಸಂ: 3ರ ಅನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇರ ನೇಮಕಾತಿ ಹೊಂದಿ, ದಿನಾಂಕ: 05.03.1982ರಂದು ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಸದರಿ ನಿವೃತ್ತ ಅಧಿಕಾರಿಯವರ ಜನ್ಮ ದಿನಾಂಕ: 01.06.1950 ಆಗಿದ್ದು, ಸದರಿಯವರ ಜನ್ಮ ದಿನಾಂಕವನ್ನು ಮೇಲೆ (2)ರಲ್ಲಿ ಓದಲಾದ ದಿನಾಂಕ: 05/06.05.1983ರ ಸರ್ಕಾರದ ಆದೇಶದಲ್ಲಿ ಒಪ್ಪಲಾಗಿದೆ.

ಮೇಲೆ (3)ರಲ್ಲಿ ಓದಲಾದ ಮನವಿಯಲ್ಲಿ, ಸದರಿ ನಿವೃತ್ತ ಅಧಿಕಾರಿಯವರು ದಿನಾಂಕ: 05.03.1982 ರಂದು ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯಕ್ಕೆ ಹಾಜರಾಗಿದ್ದು, ಇವರ ಜನ್ಮ ದಿನಾಂಕವನ್ನು 01.06.1950 ಎಂದು ಸರ್ಕಾರವು ಒಪ್ಪಿರುವುದರಿಂದ ಸದರಿ ನಿವೃತ್ತ ಅಧಿಕಾರಿಯವರು 31 ವರ್ಷ 09 ತಿಂಗಳು 04 ದಿನಗಳ ವಯಸ್ಸಿನಲ್ಲಿ ಸರ್ಕಾರಿ ಸೇವೆಗೆ ಸೇರಿದಂತೆ ಆಗಿರುತ್ತದೆ. ಆದ್ದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ)(1)ರನ್ವಯ ಒಂದು ವರ್ಷದ ಹೆಚ್ಚುವರಿ ಸೇವೆಯನ್ನು ಸದರಿಯವರ ಅರ್ಹತಾದಾಯಕ ಸೇವೆಯಲ್ಲಿ ಸೇರ್ಪಡೆ ಮಾಡುವಂತೆ ಕೋರಿರುತ್ತಾರೆ.

ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರು, ಶ್ರೀ ಎ.ಜಿ. ಮುಳ್ಳೂರ, ನಿವೃತ್ತ ಸರ್ಕಾರಿ ಅಭಿಯೋಜಕರು, ಬಿಜಾಪುರ, ಇವರು ದಿನಾಂಕ: 05.03.1982ರಂದು ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ಹಾಜರಾಗಿರುತ್ತಾರೆ. ಇವರ ಜನ್ಮ ದಿನಾಂಕ: 01.06.1950 ಆಗಿರುತ್ತದೆ. ಸದರಿ ಅಧಿಕಾರಿಯು ಅವರ 31ವರ್ಷ 09ತಿಂಗಳು 04ದಿನಗಳ ವಯಸ್ಸಿನಲ್ಲಿ ಸರ್ಕಾರಿ ಸೇವೆಗೆ ಸೇರಿರುವುದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ)(1)ರ ಪ್ರಕಾರ ನಿವೃತ್ತಿ ವೇತನಕ್ಕೆ ಒಂದು ವರ್ಷದ ಸೇವೆಯನ್ನು ಹೆಚ್ಚುವರಿಯಾಗಿ ಸದರಿ ಅಧಿಕಾರಿಯ ಅರ್ಹತಾದಾಯಕ ಸೇವೆಗೆ ಸೇರ್ಪಡೆ ಮಾಡಲು ಸರ್ಕಾರವು ಆದೇಶವನ್ನು ಹೊರಡಿಸಬಹುದೆಂದು ಶಿಫಾರಸ್ಸನ್ನು ಮಾಡಿರುತ್ತಾರೆ.

ಆದುದರಿಂದ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಒಇ 318 ಪಿಪಿಇ 2008, ಬೆಂಗಳೂರು, ದಿನಾಂಕ : 1ನೇ ಏಪ್ರಿಲ್ 2009.**

ಶ್ರೀ ಎ.ಜಿ. ಮುಳ್ಳೂರ, ನಿವೃತ್ತ ಸರ್ಕಾರಿ ಅಭಿಯೋಜಕರು, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ)(1)ರನ್ವಯ ಒಂದು ವರ್ಷದ ಹೆಚ್ಚುವರಿ ಸೇವಾವಧಿಯನ್ನು ಶ್ರೀಯುತರ ಪಿಂಚಣಿ ಸೌಲಭ್ಯಗಳಿಗೆ ಮಾತ್ರ ಹೆಚ್ಚುವರಿ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಆದೇಶಿಸಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆ(ವಿಶ್ರಾಂತಿ ವೇತನ)ಯ ಟಿಪ್ಪಣಿ ಸಂ: 3 ಆಇ 28 ವೆಚ್ಚ-11/2008, ದಿನಾಂಕ: 11.12.2008ರ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
**ಕೆ.ಸಿ. ಸಿದ್ದಪ್ಪ**
ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ
(ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

ಪಿ.ಆರ್. 1093

**ವಿಷಯ:** ಶ್ರೀ ಆರ್.ಎಂ. ಗಂಜಿಗಟ್ಟಿ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿ.ಜೆ. (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗಂಗಾವತಿ ಇವರ ಜನ್ಮ ದಿನಾಂಕದ ತಿದ್ದುಪಡಿಗಾಗಿ ಮಂಡನಾಧಿಕಾರಿಯನ್ನು ನೇಮಿಸಿ, ಪ್ರಕರಣದ ವಿಚಾರಣೆಗೆ ಆದೇಶಿಸುವ ಕುರಿತು.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂ: ಒಇ 155 ಪಿಪಿಇ 2008, ದಿನಾಂಕ: 29.07.2008.

2. ಸದರಿ ಅಧಿಕಾರಿಯ ಮನವಿಯ ದಿನಾಂಕ: 18.12.2008.
3. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರದ ಸಂ: ಡಿಪಿಎನ್/ಕೇಂಸ/ವಿವ/61/07–08, ದಿನಾಂಕ:12.01.2009.
4. ಸರ್ಕಾರದ ಅಧಿಸೂಚನೆಯ ಸಂ:ಡಿಪಿಎಆರ್/13/ಎಸ್‌ಎಸ್‌ಆರ್/94, ದಿನಾಂಕ: 15.03.1994.

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಆರ್.ಎಂ. ಗಂಜಿಗಟ್ಟಿ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿ.ಜೆ. (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗಂಗಾವತಿ ಇವರ ಜನ್ಮ ದಿನಾಂಕವನ್ನು ಕರ್ನಾಟಕ ಸರ್ಕಾರಿ ನೌಕರರ (ವಯೋನಿರ್ಧಾರ) (ತಿದ್ದುಪಡಿ) ಕಾಯ್ದೆ 1982ರ ಕಲಂ 3ರ ಉಪಕಲಂ–2ರನ್ವಯ, ಎಸ್‌ಎಸ್‌ಎಲ್‌ಸಿ ಅಂಕಪಟ್ಟಿಯ ನಮೂದಿನಂತೆ 20.08.1962 ಎಂದು ಸರ್ಕಾರವು ಒಪ್ಪಿರುತ್ತದೆ.

ಮೇಲೆ (2)ರಲ್ಲಿ ಓದಲಾದ ಮನವಿಯಲ್ಲಿ, ಸದರಿ ಅಧಿಕಾರಿಯು ಅವರ ನಿಜವಾದ ಜನ್ಮ ದಿನಾಂಕವು ಕುಂದುಗೋಳ ತಹಶಿಲ್ದಾರರ ಕಾರ್ಯಾಲಯದಲ್ಲಿನ ನೋಂದಣಿಯನ್ವಯ ನೀಡಿರುವ ಜನನ ಪ್ರಮಾಣ ಪತ್ರದಲ್ಲಿರುವಂತೆ 20.10.1964 ಆಗಿರುತ್ತದೆ. ಎಂದು, ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶಕ್ಕೆ ತಿದ್ದುಪಡಿಯನ್ನು ಕೋರಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ಪತ್ರದಲ್ಲಿ, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ನಿರ್ದೇಶಕರರವರು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ಕಲಂ 5ರ ಉಪಕಲಂ 1 ಮತ್ತು 2ರ ಹಿನ್ನೆಲೆಯಲ್ಲಿ, ಮೇಲೆ (2)ರಲ್ಲಿ ಓದಲಾದ ಸದರಿ ಅಧಿಕಾರಿಯ ಮನವಿಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ.

ಮೇಲೆ (4)ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ಕಲಂ 5ರ ಉಪನಿಯಮ 3ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಇಂತಹ ಪ್ರಕರಣಗಳ ಇತ್ಯರ್ಥಕ್ಕಾಗಿ ಕಾನೂನು ಇಲಾಖೆಯ ವಾದೇಕ್ಷಕರು ಹಾಗೂ ಪದನಿಮಿತ್ತ ಸರ್ಕಾರ ಉಪಕಾರ್ಯದರ್ಶಿ ಮಟ್ಟದ ಅಧಿಕಾರಿಯನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ.

ಆದ್ದರಿಂದ, ಪ್ರಕರಣದ ವಿಚಾರಣೆಗೆ ಹಾಗೂ ಒಳಾಡಳಿತ ಇಲಾಖೆಯ ಪರವಾಗಿ ವಾದ ಮಂಡಿಸುವ ಸಲುವಾಗಿ ಮಂಡನಾಧಿಕಾರಿಯನ್ನು ನೇಮಕ ಮಾಡಲು, ಈ ಬಗ್ಗೆ ಕಾನೂನು ಇಲಾಖೆಯೊಡನೆ ಸಮಾಲೋಚಿಸಿ ಈ ಮುಂದಿನಂತೆ ಸರ್ಕಾರವು ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಒಇ 37 ಪಿಪಿಇ 2009, ಬೆಂಗಳೂರು, ದಿನಾಂಕ : 1ನೇ ಏಪ್ರಿಲ್ 2009.**

ಮೇಲೆ ವಿವರಿಸಿರುವ ಹಿನ್ನೆಲೆಯಲ್ಲಿ, ಶ್ರೀ ಆರ್.ಎಂ. ಗಂಜಿಗಟ್ಟಿ, ಸಹಾಯಕ ಸರ್ಕಾರಿ ಅಭಿಯೋಜಕರು, ಸಿ.ಜೆ. (ಕಿ.ವಿ) ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗಂಗಾವತಿ, ಇವರ ಜನ್ಮ ದಿನಾಂಕ:20.08.1962 ಎಂದಿರುವುದನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ವಯೋ ನಿರ್ಧಾರ) ಅಧಿನಿಯಮ 1974ರ ನಿಯಮ 5ರ ಉಪನಿಯಮ 1ರನ್ವಯ ತಿದ್ದುಪಡಿ ಮಾಡುವ ಸಲುವಾಗಿ ಸದರಿ ಅಧಿನಿಯಮದ ನಿಯಮ 5ರ ಉಪನಿಯಮ 3ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪ್ರಕರಣದ ವಿಚಾರಣಾಧಿಕಾರಿಗಳ ಮುಂದೆ ಒಳಾಡಳಿತ ಇಲಾಖೆಯ ಪರವಾಗಿ ಪ್ರಕರಣವನ್ನು ಮಂಡಿಸಲು ಮತ್ತು ವಾದ ಮಾಡಲು ಶ್ರೀ ಎಂ.ಬಿ. ಚಂದ್ರಶೇಖರ್, ಸರ್ಕಾರ ಅಧೀನ ಕಾರ್ಯದರ್ಶಿ (ವ್ಯಾಜ್ಯಗಳು), ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ, ಪ್ರಕರಣದ ವಿಚಾರಣೆಗೆ ಆದೇಶಿಸಿದೆ.

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಅನಧಿಕೃತ ಟಿಪ್ಪಣಿಯ ಸಂಖ್ಯೆ: ಲಾ 01 ಜದಿವಿ 2009, ದಿನಾಂಕ: 07.02.2009ರನ್ವಯ ಮಂಡನಾಧಿಕಾರಿಯನ್ನು ನೇಮಿಸಿ ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಕೆ.ಸಿ. ಸಿದ್ದಪ್ಪ**

ಪಿ.ಆರ್. 1094

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ
(ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

**ವಿಷಯ:** ಶ್ರೀ ಬಿ.ಎಂ. ವಿರಕ್ತಮಠ್, ನಿವೃತ್ತ ಅಧಿಕ ಸರ್ಕಾರಿ ಅಭಿಯೋಜಕರು, ಬೆಂಗಳೂರು ನಗರ ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ)(1)ರ ಸೌಲಭ್ಯಕ್ಕೆ ಪರಿಗಣಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಅಧಿಸೂಚನೆ ಸಂ: ಲಾ 229 ಪಿಪಿಇ 81, ದಿನಾಂಕ: 24.02.1982.
2. ಸರ್ಕಾರದ ಆದೇಶದ ಸಂ. ಲಾ 102 ಪಿಪಿಇ 83, ದಿನಾಂಕ: 23/25.07.1983.
3. ಸದರಿ ಅಧಿಕಾರಿಯವರ ಮನವಿ ದಿನಾಂಕ: 30.10.2007.
4. ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ ಇವರ ಪತ್ರ ಸಂ: ಡಿಪಿಎನ್/ಲೆಕ್ಕ–1/246/2007–08, ದಿನಾಂಕ: 07.01.2008.

**ಪ್ರಸ್ತಾವನೆ:**

ಶ್ರೀ ಬಿ.ಎಂ.ವಿರಕ್ತಮಠ್, ನಿವೃತ್ತ ಅಧಿಕ ಸರ್ಕಾರಿ ಅಭಿಯೋಜಕರು, ಬೆಂಗಳೂರು ನಗರ ಇವರು ಮೇಲೆ (1)ರಲ್ಲಿ ಓದಲಾದ ದಿನಾಂಕ: 24.02.1982ರ ಸರ್ಕಾರದ ಅಧಿಸೂಚನೆಯ ಕ್ರ.ಸಂ: 28ರ ಅನ್ವಯ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ನೇರ ನೇಮಕಾತಿ ಹೊಂದಿ, ದಿನಾಂಕ: 05.03.1982ರಂದು ಸಹಾಯಕ ಸರ್ಕಾರಿ ಅಭಿಯೋಜಕರಾಗಿ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ದಿನಾಂಕ: 23/25.07.1983ರ ಸರ್ಕಾರ ಆದೇಶದನ್ವಯ ಸದರಿ ನಿವೃತ್ತ ಅಧಿಕಾರಿಯ ಜನ್ಮ ದಿನಾಂಕವನ್ನು 29.04.1950 ಎಂದು ಒಪ್ಪಲಾಗಿದೆ.

ಮೇಲೆ (3)ರಲ್ಲಿ ಓದಲಾದ ಮನವಿಯಲ್ಲಿ, ಸದರಿ ನಿವೃತ್ತ ಅಧಿಕಾರಿಯವರು 31 ವರ್ಷ 10 ತಿಂಗಳು 06 ದಿನಗಳ ವಯಸ್ಸಿನಲ್ಲಿ ಸರ್ಕಾರಿ ಸೇವೆಗೆ ಸೇರಿರುವುದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ)(1)ರ ಅನುಸಾರ ಅರ್ಹ ಹೆಚ್ಚುವರಿ ಸೇವೆಯನು ಅವರ ಅರ್ಹತಾದಾಯಕ ಸೇವೆಗೆ ಸೇರ್ಪಡೆ ಮಾಡುವಂತೆ ಕೋರಿರುತ್ತಾರೆ.

ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಬೆಂಗಳೂರು ಇವರು, ಶ್ರೀ ಬಿ.ಎಂ. ವಿರಕ್ತಮಠ್, ನಿವೃತ್ತ ಅಧಿಕ ಸರ್ಕಾರಿ ಅಭಿಯೋಜಕರು, ಬೆಂಗಳೂರು ನಗರ ಇವರು ದಿನಾಂಕ: 05.03.1982ರಂದು ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ವರದಿ ಮಾಡಿಕೊಂಡಿರುತ್ತಾರೆ. ಇವರ ಜನ್ಮ ದಿನಾಂಕ: 29.04.1950 ಆಗಿರುತ್ತದೆ. ಆದ್ದರಿಂದ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247(ಎ)(1)ರ ಪ್ರಕಾರ ನಿವೃತ್ತಿ ವೇತನಕ್ಕೆ ಮಾತ್ರ ಒಂದು ವರ್ಷದ ಹೆಚ್ಚುವರಿ ಸೇವೆಯನ್ನು ಸದರಿ ಅಧಿಕಾರಿಯ ಅರ್ಹತಾದಾಯಕ ಸೇವೆಗೆ ಸೇರ್ಪಡೆ ಮಾಡಲು ಆದೇಶವನ್ನು ಹೊರಡಿಸುವಂತೆ ಸರ್ಕಾರಕ್ಕೆ ಶಿಫಾರಸ್ಸನ್ನು ಮಾಡಿರುತ್ತಾರೆ.

ಆದುದರಿಂದ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಒಇ 20 ಪಿಪಿಇ 2008, ಬೆಂಗಳೂರು, ದಿನಾಂಕ : 1ನೇ ಏಪ್ರಿಲ್ 2009.**

ಶ್ರೀಯುತ ಬಿ.ಎಂ. ವಿರಕ್ತಮಠ್, ನಿವೃತ್ತ ಅಧಿಕ ಸರ್ಕಾರಿ ಅಭಿಯೋಜಕರು, ಇವರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 247(ಎ)(1)ರ ರೀತ್ಯ ಒಂದು ವರ್ಷದ ಅಧಿಕ ಸೇವೆಯನ್ನು ಅವರ ನಿವೃತ್ತಿ ವೇತನಕ್ಕೆ ಮಾತ್ರ ಹೆಚ್ಚುವರಿ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಲು ಆದೇಶಿಸಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ: ಆಇ 86 ವೆಚ್ಚ–11/2008, ದಿನಾಂಕ: 23.01.2009ರ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಕೆ.ಸಿ. ಸಿದ್ದಪ್ಪ

ಪಿ.ಆರ್. 1095 ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ

(ಕಾ ಮತ್ತು ಸು ಹಾಗೂ ಕಾಫಿಪೋಸಾ ಮತ್ತು ಅಭಿಯೋಗಗಳು)

**COMMERCE AND INDUSTRIES SECRETARIAT**

**Sub:** Appointment of Sri Subir Hari Singh, IAS, as one of the Director on the Board of Directors of KTPO.

**Read:**
1. Notification No. CI DPAR 548 S.A.S. 2008 dated 31.01.2009.
2. Letter No. KTPO/174/401/2008-09 dated 17.03.2009 of Managing Director, KTPO, Bangalore.

**Preamble:**

Sri V. Umesh, IAS the then Principal Secretary to Govt., C & I Department, was appointed as a Director on the Board of KTPO. Since he has been transferred to Health Department as Principal Secretary vide Notification read at (1) above, the present Principal Secretary, C & I Dept. Sri Subir Hari Singh, IAS is to be appointed as a Director of KTPO Board. The Managing Director, KTPO has requested to appoint new Director vide his letter read at (2) above. The matter has been examined by Govt. hence the following order,

**Government Order No. CI 3 SPI 2009, Bangalore, Dated: 2nd April 2009**

Government is pleased to appoint Sri Subir Hari Singh, IAS, Principal Secretary to Govt.,Commerce & Industries Department, as one of the Directors on the Board of Directors of Karnataka

Trade Promotion Organisation [KTPO] in place of Sri V. Umesh, IAS with immediate effect and until further orders.

By Order and in the name of Governor of Karnataka,

**APARNA PAVATE**

P.R. 1096

Desk Officer [Technical Cell] Commerce & Industries Department.

**ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ**

ವಿಷಯ: ಶ್ರೀ ಜೆ.ಬಿ. ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು, ಇವರನ್ನು ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ ಹುದ್ದೆಗೆ ಪುನರ್ ನೇಮಕ ಮಾಡಲು ಹಾಗೂ ದಿ: 07.08.2008 ರಿಂದ 05.10.2008 ರವರೆಗೆ ಸೇವೆ ವಿಮುಕ್ತಿ ಅವಧಿಯನ್ನು dies non ಎಂದು ಪರಿಗಣಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂ: ವಾಕೈ 230 ಕೈಸೇವಿ 2001, ದಿ:19.07.2005.
2. ವಿಚಾರಣಾಧಿಕಾರಿಗಳ ವರದಿ ದಿನಾಂಕ: 02.06.2007.
3. ಸರ್ಕಾರದ ಆದೇಶ ಸಂ: ವಾಕೈ 264 ಕೈಸೇವಿ 2005, ದಿ:07.08.2008.
4. ಶ್ರೀ ಜೆ.ಬಿ. ಕುಮಾರಸ್ವಾಮಿ, ಇವರ ಮನವಿ ದಿ: 19.08.2008 ಹಾಗೂ ದಿ: 29.08.2008.
5. ಸರ್ಕಾರದ ಆದೇಶ ಸಂ: ವಾಕೈ 179 ಕೈಸೇವಿ 2008, ದಿ:04.10.2008.
6. ಮಹಾಲೇಖಪಾಲರ ಪತ್ರ ಸಂಖ್ಯೆ: ಜಿಇ 5/ ಎ.ಜಿ.3/ವಿಐಎಲ್.5/2008–09/887–90 ದಿ: 18.11.2008.
7. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಪತ್ರ ಸಂಖ್ಯೆ: ಆಡಳಿತ/ಸಿಬ್ಬಂದಿ/ಇ4/ 125/2008–09 ದಿ: 13.03.2009.

ಪ್ರಸ್ತಾವನೆ:

ಮೇಲೆ ಓದಲಾದ (1) ರ ಸರ್ಕಾರದ ಆದೇಶದಲ್ಲಿ ಶ್ರೀ ಜೆ.ಬಿ. ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು, ಇವರ ವಿರುದ್ಧ ಈ ಕೆಳಕಂಡ ನಿರ್ದಿಷ್ಟ ಆಪಾದನೆಗಳನ್ನು ಕುರಿತಂತೆ –

1. ದಿ: 18.03.2000 ರಿಂದ ಅನಧಿಕೃತ ಗೈರುಹಾಜರಿ
2. ಅನಧಿಕೃತ ಗೈರುಹಾಜರಿಯಲ್ಲಿ ಹುದ್ದೆಯ ಪ್ರಭಾರವನ್ನು ಬೇರೆ ಯಾರಿಗೂ ವಹಿಸದೇ ಇರುವುದು.
3. ಕಛೇರಿಯ ವಶದಲ್ಲಿದ್ದ ರೂ. 35,000/– ಗಳನ್ನು ದುರುಪಯೋಗ ಪಡಿಸಿಕೊಂಡಿರುವುದು.

ಇಲಾಖಾ ವಿಚಾರಣೆಯನ್ನು ನಡೆಸಲು ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (2) ರಲ್ಲಿ ವಿಚಾರಣಾಧಿಕಾರಿಗಳು ಅಧಿಕಾರಿಗಳ ವಿರುದ್ಧದ ಎಲ್ಲಾ ಮೂರು ಆರೋಪಗಳು ರುಜುವಾತಾಗಿದೆಯೆಂದು ಹಾಗೂ ಅಧಿಕಾರಿಯ ಮೇಲಿನ ಮೂರೂ ಆರೋಪಗಳ ಬಗ್ಗೆ ಆರೋಪಿತ ಅಧಿಕಾರಿಯು ದೋಷಿ ಎಂದು ಘೋಷಿಸಿ ಆರೋಪಿತ ಅಧಿಕಾರಿಯಿಂದ ರೂ. 35,000/– ಗಳನ್ನು ಬಡ್ಡಿ ಸಮೇತ ವಸೂಲು ಮಾಡಲು ವಿಚಾರಣಾಧಿಕಾರಿಗಳು ವರದಿ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ಶ್ರೀ ಜೆ.ಬಿ. ಕುಮಾರಸ್ವಾಮಿ, ಹಾಲಿ ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ, (ಹಿಂದಿನ ಸಹಾಯಕ ನಿರ್ದೇಶಕರು, ಜಿಲ್ಲಾ ಪಂಚಾಯತ್, ಕೈಮಗ್ಗ ಮತ್ತು ಜವಳಿ ಇಲಾಖೆ, ಚಿಕ್ಕಮಗಳೂರು) ಇವರು ಅರ್ಹತಾ ಪೂರ್ವ ಸೇವಾವಧಿಯಲ್ಲಿ ಸರ್ಕಾರಿ ನೌಕರರಿಗೆ ಸಲ್ಲದ ರೀತಿಯಲ್ಲಿ ವರ್ತಿಸಿ ದುರ್ನಡತೆ/ ಕರ್ತವ್ಯ ಚ್ಯುತಿ ಎಸಗಿರುವುದರಿಂದ ಸದರಿಯವರನ್ನು ಕರ್ನಾಟಕ ನಾಗರೀಕ ಸೇವೆಗಳು (ಪ್ರೊಬೇಷನ್) ನಿಯಮಗಳು 1977ರ ನಿಯಮ 7 ರ ಅನುಸಾರ ಸರ್ಕಾರಿ ಸೇವೆಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ವಿಮುಕ್ತಿಗೊಳಿಸಲಾಗಿತ್ತು ಹಾಗೂ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ. 35,000/– (ರೂಪಾಯಿ ಮೂವತ್ತೈದು ಸಾವಿರ ಮಾತ್ರ) ಗಳನ್ನು ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಾತಿ ಮಾಡಲು ಹಾಗೂ ಅಧಿಕಾರಿಯ ವಿರುದ್ಧ ಸಿವಿಲ್ ಮೊಕದ್ದಮೆ ಹೂಡಲು ಆದೇಶಿಸಲಾಗಿತ್ತು.

ಮೇಲೆ ಓದಲಾದ (4) ರಲ್ಲಿ ಶ್ರೀ ಜೆ.ಬಿ. ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು ಸರ್ಕಾರದ ಆದೇಶ ಸಂ: ವಾಕೈ 264 ಕೈಸೇವಿ 2005, ದಿ:07.08.2008ರ ಆದೇಶವನ್ನು ತಡೆಹಿಡಿದು, ಕೆಲಸದ ಮೇಲೆ ಹಾಜರಾಗಲು ಅನುಮತಿ ನೀಡುವಂತೆ ಹಾಗೂ ವಿಚಾರಣೆಗೆ ಹಾಜರಾಗಲು ಅನುಮತಿ ನೀಡಬೇಕೆಂದು ಸರ್ಕಾರಕ್ಕೆ ವಿನಂತಿಸಿದ್ದಾರೆ.

ಮೇಲೆ ಓದಲಾದ (5) ರಲ್ಲಿ ಶ್ರೀ ಜೆ.ಬಿ. ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ, (ಹಿಂದಿನ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು) ಇವರ ವಿರುದ್ಧ ದಿ: 07.08.2008ರಂದು ಹೊರಡಿಸಿದ ಸರ್ಕಾರದ ಆದೇಶ ಸಂ: ವಾಕೈ 264 ಕೈಸೇವಿ 2005ನ್ನು ಮುಂದಿನ

ಆದೇಶದವರೆಗೆ ತಡೆಹಿಡಿಯಲಾಗಿದೆ ಹಾಗೂ ಈ ಪ್ರಕರಣವನ್ನು ಒಂದು ನಿದರ್ಶನ ಎಂದು ಯಾವ ಸಂದರ್ಭದಲ್ಲೂ ಮುಂದಿನ ಪ್ರಕರಣಗಳಲ್ಲಿ ಅನ್ವಯಿಸತಕ್ಕದ್ದಲ್ಲ ಎಂದು ಸಹ ಆದೇಶಿಸಲಾಗಿದೆ.

ಮೇಲೆ ಓದಲಾದ (6) ರಲ್ಲಿ ಮಹಾಲೇಖಪಾಲರು, ಶ್ರೀ ಜೆ.ಬಿ. ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು, ಇವರನ್ನು ಹಿಂದಿನ ಹುದ್ದೆಗೆ ಪುನರ್ ನೇಮಿಸುವ ಆದೇಶ ಹಾಗೂ ಸೇವೆ ವಿಮುಕ್ತಿ ಹಾಗೂ ಪುನರ್ ನೇಮಕದ ಮಧ್ಯಂತರ ಅವಧಿಯನ್ನು ಯಾವ ರೀತಿ ರೆಗ್ಯುಲೇಟ್ ಮಾಡಬೇಕು ಎಂಬುದರ ಬಗ್ಗೆ ಆದೇಶದ ಪ್ರತಿ ಒದಗಿಸಲು ಕೋರಿರುತ್ತಾರೆ.

ಮೇಲೆ ಓದಲಾದ (7) ರ ಕೈಗಾರಿಕಾ ನಿರ್ದೇಶನಾಲಯದ ಪತ್ರದಲ್ಲಿ ದಿ: 06.10.2008ರಂದು ಪೂರ್ವಾಹ್ನ ಅಧಿಕಾರಿಗಳು ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ, ಹುದ್ದೆಯ ಕಾರ್ಯಭಾರವನ್ನು ಪುನರ್ ವಹಿಸಿಕೊಂಡಿರುತ್ತಾರೆಂದು ವರದಿಸಲಾಗಿದೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ವಾಕೈ 179 ಕೈಸೇವಿ 2008, ಬೆಂಗಳೂರು, ದಿನಾಂಕ: 3ನೇ ಏಪ್ರಿಲ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಜೆ.ಬಿ. ಕುಮಾರಸ್ವಾಮಿ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ, (ಹಿಂದಿನ ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು) ಇವರ ವಿರುದ್ಧ ದಿ: 07.08.2008ರಂದು ಹೊರಡಿಸಿದ ಸರ್ಕಾರದ ಆದೇಶ ಸಂ: ವಾಕೈ 264 ಕೈಸೇವಿ 2005ನ್ನು ಉಲ್ಲೇಖಿತ (5)ರ ಆದೇಶದಲ್ಲಿ ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿರುವುದರಿಂದ ಶ್ರೀ ಜೆ.ಬಿ. ಕುಮಾರಸ್ವಾಮಿ, ಇವರನ್ನು ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ, ಹುದ್ದೆಗೆ ಪುನರ್ ನೇಮಕ ಮಾಡಿ ಆದೇಶಿಸಿದೆ ಹಾಗೂ ದಿ: 07.08.2008 ರಿಂದ 05.10.2008ರವರೆಗಿನ ಅವಧಿಯಲ್ಲಿ ಸದರಿ ಅಧಿಕಾರಿಯು ಕಾರ್ಯ ನಿರ್ವಹಿಸದೇ ಇರುವುದರಿಂದ, ಈ ಸೇವೆ ವಿಮುಕ್ತಿ ಹಾಗೂ ಪುನರ್ ನೇಮಕದ ಮಧ್ಯಂತರ ಅವಧಿಯನ್ನು ಲೆಕ್ಕಕ್ಕಿಲ್ಲದ ಅವಧಿ (dies non) ಎಂದು ಪರಿಗಣಿಸಿ ಆದೇಶ ಹೊರಡಿಸಿದೆ.

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಟಿಪ್ಪಣಿ ಸಂಖ್ಯೆ: ಸಿಆಸುಇ 523 ಸೇನಿಎ 2008 ದಿ: 09.01.2009ರ ಸಹಮತಿ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1097 **ಬಿ.ಸಿ. ಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಸೇವೆಗಳು)

**ವಿಷಯ:** ಶ್ರೀ ಟಿ.ಎಸ್. ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, (ಅಮಾನತ್ತು) ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ ರವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣದ ಅಭಿಯೋಜನಾ ಮಂಜೂರಾತಿ ಕುರಿತು.

**ಓದಲಾಗಿದೆ:**
1. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರದ ಸಂಖ್ಯೆ:ಲೋಕ್/ಐಎನ್‌ವಿ(ಜಿ)/ಎಲ್.22/ಸಿಆರ್-3/2008/ಡಿಹೆಚ್‌ಆರ್ ದಿನಾಂಕ: 20.01.2009.
2. ತನಿಖಾಧಿಕಾರಿಯ ವರದಿ ನಂ. ಪಿಐ/ಕೆಎಲ್ಎ/ಧಾ/ಸಿಆರ್ ನಂ. 3/08/ಅವಿ/08 ದಿ:12.09.08.
3. ತನಿಖಾ ದಾಖಲೆಗಳ ನಕಲುಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ ಪ್ರಾಯೋಗಿಕ ಪಂಚನಾಮೆ, ಟ್ರ್ಯಾಪ್ ಪಂಚನಾಮೆ, ಜಪ್ತ ಪಂಚನಾಮು, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.

**ಪ್ರಸ್ತಾವನೆ:**

ಶ್ರೀ ಟಿ.ಎಸ್. ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, (ಅಮಾನತ್ತು) ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ ಇವರ ವಿರುದ್ಧ ಗುನ್ನೆ ನಂ. 3/2008ರಲ್ಲಿ ಆರಕ್ಷಕ ನಿರೀಕ್ಷಕರು, ಪೊಲೀಸ್ ವಿಭಾಗ, ಕರ್ನಾಟಕ ಲೋಕಾಯುಕ್ತ, ಧಾರವಾಡ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯ ಅಂತಿಮ ವರದಿಯ ನಕಲು ಮತ್ತು ತನಿಖಾ ದಾಖಲಾತಿಗಳನ್ನು ಉಲ್ಲೇಖಿತ (2) ಮತ್ತು (3) ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ತಮ್ಮ ಪತ್ರ ಸಂಖ್ಯೆ: ಸಂಖ್ಯೆ:ಲೋಕ್/ಐಎನ್‌ವಿ(ಜಿ)/ ಎಲ್.22/ ಸಿಆರ್-3/ 2008/ ಡಿಹೆಚ್‌ಆರ್ ದಿನಾಂಕ: 20.01.2009 (ಉಲ್ಲೇಖ-1) ರೊಡನೆ ಕಳುಹಿಸುತ್ತಾ, ಆಪಾದಿತರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧ ಕಾಯ್ದೆ 1988ರ 19ನೇ ಕಲಂ ಅಡಿಯಲ್ಲಿ ಮಂಜೂರಾತಿಗಾಗಿ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ತಮ್ಮ ಉಲ್ಲೇಖಿತ ಪತ್ರ ಸಂಖ್ಯೆ: ಸಂಖ್ಯೆ:ಲೋಕ್/ ಐಎನ್‌ವಿ (ಜಿ)/ ಎಲ್.22/ ಸಿಆರ್–3/ 2008/ ಡಿಹೆಚ್‌ಆರ್ ದಿನಾಂಕ:20.01.2009ರೊಂದಿಗೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಿದೆ.

1. ಶ್ರೀ ಕೃಷ್ಣ ಪ್ರಭಾಕರ ಕುಲಕರ್ಣಿ, ಉದ್ಯಮಿದಾರ, ಮೆ: ಕೆ.ಪಿ. ಇಂಡಸ್ಟ್ರೀಸ್, ಬೇಲೂರ ಕೈಗಾರಿಕಾ ಪ್ರದೇಶ, ಧಾರವಾಡ ಇವರ ಫಿರ್ಯಾದಿ ದಿ: 04.03.2008.
2. ಪ್ರಥಮ ವರ್ತಮಾನ ವರದಿ, ಮಾನ್ಯ ಜಿಲ್ಲಾ ಸತ್ರ ಹಾಗೂ ವಿಶೇಷ ನಾಯಾಧೀಶರು, ಧಾರವಾಡ ಲೋಕಾಯುಕ್ತ ಪೊಲೀಸ್ ಠಾಣೆ, ಧಾರವಾಡ ಗುನ್ನೆ ನಂ. 3/2008 ಕಲಂ 7, 13 (1) ಲ ಸಹ ಕಲಂ 13(2) ಪಿಸಿ ಆ್ಯಕ್ಟ್– 1988
3. ದಿ: 04.03.2008ರಂದು ಮಾಡಿದ ಪ್ರಾಯೋಗಿಕ ಪಂಚನಾಮಾ
4. ದಿ: 04.03.2008ರಂದು ಮಾಡಿದ ಟ್ರ್ಯಾಪ್ ಪಂಚನಾಮಾ
5. ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ: ಎಲ್‌ವಾಯ್‌ಕೆ/ಎಸಿಇ/ಧಾ/3/08/2008 ದಿ: 02.06.2008
6. ತನಿಖಾಧಿಕಾರಿಗಳು ಪಂಚರ ಸಮಕ್ಷಮ ತೆಗೆದ ಗುನ್ನೆ ಜಾಗೆಯ ಕಚ್ಚಾ ನಕಾಶೆ.
7. ಸಾಕ್ಷಿಗಳ ಹೇಳಿಕೆಗಳು (ಪಟ್ಟಿಯನ್ನು ಅಂತಿಮ ವರದಿಯಲ್ಲಿ ಸೇರಿಸಲಾಗಿದೆ)
8. ದಿ: 04.03.2008ರಂದು ಆಪಾದಿತ ಅಧಿಕಾರಿ ನೀಡಿದ ಸಮಜಾಯಿಷಿ ಹೇಳಿಕೆ.

ತನಿಖಾಧಿಕಾರಿಗಳಾದ ಶ್ರೀ ಅಲ್ಲಮಪ್ರಭು ಸುಬೇಧರ, ಪಿಐ, ಲೋಕಾಯುಕ್ತ, ಪೊಲೀಸ್ ಠಾಣೆ, ಧಾರವಾಡರವರು ಶ್ರೀ ಟಿ.ಎಸ್. ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ, ರವರ ವಿರುದ್ಧ ಧಾರವಾಡ ಕರ್ನಾಟಕ ಲೋಕಾಯುಕ್ತ ಆರಕ್ಷಕ ಠಾಣೆ ಗುನ್ನೆ ನಂ. 3/2008ರಲ್ಲಿ ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆ – 1988ರ ಕಲಂ 7, 13, (1) (ಡಿ) ಸಹ ಕಲಂ 13 (2) ಪಿಸಿ ಆ್ಯಕ್ಟ್ 1988ರ ಅಡಿಯಲ್ಲಿ ದಾಖಲಿಸಿಕೊಂಡಿರುತ್ತಾರೆ.

ಆರೋಪಿತ ಸರ್ಕಾರಿ ಅಧಿಕಾರಿಯಾದ ಶ್ರೀ ಟಿ.ಎಸ್. ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ, ರವರು ಪ್ರಕರಣದ ಫಿರ್ಯಾದಿಯಾದ ಶ್ರೀ ಕೃಷ್ಣ ಪಿ. ಕುಲಕರ್ಣಿ, ಇವರಿಗೆ ಸರ್ಕಾರದಿಂದ ಮಂಜೂರಾದ ಸಬ್ಸಿಡಿ ಹಣ ಬಿಡುಗಡೆ ಮಾಡುವ ಕುರಿತು ಹಾಗೂ ಉಳಿದ ಸಬ್ಸಿಡಿಯನ್ನು ಮಂಜೂರಿಸುವ ಕುರಿತು ರೂ. 2,000/– ಗಳ ಲಂಚವನ್ನು ಕೇಳಿದ್ದು ಇರುತ್ತದೆ ಮತ್ತು ಫಿರ್ಯಾದಿಯು ಲಂಚವನ್ನು ಕೊಡಲು ಬಯಸದ ಕಾರಣ ಸದರಿ ಸರ್ಕಾರಿ ಅಧಿಕಾರಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರಿನಂತೆ ತನಿಖಾಧಿಕಾರಿಗಳು ಬಲೆ ಬೀಸುವ ಮೊದಲಿನ ಎಲ್ಲಾ ಔಚಿತ್ಯ ಪೂರ್ಣ ಕಾರ್ಯಕ್ರಮಗಳನ್ನು ನೆರವೇರಿಸಿದ ನಂತರ ದಿ: 04.03.2008ರಂದು ಸಹಾಯಕ ನಿರ್ದೇಶಕರ ಕಛೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡದಲ್ಲಿ ಬೀಸಿದ ಟ್ರ್ಯಾಪ್ ಯಶಸ್ವಿಯಾಗಿದ್ದು, ಶ್ರೀ ಟಿ.ಎಸ್. ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, ಜಿಲ್ಲ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ, ರವರು ಅಕ್ರಮ ಸಂಭಾವನೆಯಾದ ರೂ. 2,000/– ಗಳನ್ನು ಸಬ್ಸಿಡಿ ಹಣ ಮಂಜೂರಿಸಲು ಲಂಚದ ಹಣ ಕೇಳಿ ಪಡೆಯುತ್ತಿದ್ದಾಗ ಸಿಕ್ಕಿ ಹಾಕಿಕೊಂಡಿರುತ್ತಾರೆ. ಆಪಾದಿತ ಸರ್ಕಾರಿ ಅಧಿಕಾರಿಯ ಬಲಗೈ ಮತ್ತು ಎಡಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ಹಾಕಿ ಡಿಸ್ಟಲ್ ವಾಟರಿನ ದ್ರಾವಣದಲ್ಲಿ ಮೊರ್ಜನೆ ಮಾಡಿ ಫಿನಾಪ್ತಲೀನ ಪರೀಕ್ಷೆಗೆ ಒಳಪಡಿಸಿದಾಗ ಅದು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದ್ದು, ರಾಸಾಯನಿಕ ತಜ್ಞರ ಪರೀಕ್ಷಣಾ ವರದಿಯಿಂದಲೂ ಸಹ ದೃಢಪಟ್ಟಿರುತ್ತದೆ.

ನೆರಳು ಸಾಕ್ಷಿಯು ಅಕ್ರಮ ಸಂಭಾವನೆಯ ಬೇಡಿಕೆ ಮತ್ತು ಪಡೆಯುವಿಕೆಗೆ ಸಂಬಂಧಿಸಿದಂತೆ ಫಿರ್ಯಾದಿ ಹಾಗೂ ಆಪಾದಿತ ಸರ್ಕಾರಿ ನೌಕರರ ನಡುವಿನ ವ್ಯವಹಾರವನ್ನು ಗಮನಿಸಿರುತ್ತಾರೆ ಮತ್ತು ಸಂಭಾಷಣೆಯನ್ನು ಆಲಿಸಿರುತ್ತಾರೆ. ಅಕ್ರಮ ಸಂಭಾವನೆಯಾದ ರೂ. 2,000/– (ಎರಡು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಶ್ರೀ ಟಿ.ಎಸ್. ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ, ಇವರಿಂದ ಆಪಾದಿತ ಅಧಿಕಾರಿಯ ಕಛೇರಿಯಲ್ಲಿ ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ 1988ರ ಕಲಂ 7, 13 (1) (ಡಿ) ಸಹ ಕಲಂ 13 (2) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸರ್ಕಾರಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿರುವುದರಿಂದ, ಇವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 19 (1) (ಸಿ) ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸುವುದು ಅವಶ್ಯ ಎಂದು ಸರ್ಕಾರ ಮನಗಂಡಿದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತರನ್ನು ಕೆಲಸದಿಂದ ತೆಗೆದು ಹಾಕಲು ಅಧಿಕಾರವುಳ್ಳದ್ದಾಗಿದೆ. ಆದ್ದರಿಂದ ಲಂಚ ನಿರೋಧ ಕಾಯ್ದೆ 1988ರ 19 (1) (ಸಿ) ರ ಅಡಿ ಆಪಾದಿತ ಅಧಿಕಾರಿಯಾಗಿದ್ದ ಶ್ರೀ ಟಿ.ಎಸ್. ಮಲ್ಲಿಕಾರ್ಜುನ,

ಸಹಾಯಕ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ, (ಅಮಾನತ್ತು) ಇವರನ್ನು ಅಭಿಯೋಜನೆಗೆ ಒಳಪಡಿಸಲು ಸರ್ಕಾರವು ಈ ಕೆಳಕಂಡಂತೆ ಮಂಜೂರಾತಿ ಆದೇಶ ನೀಡಿದೆ.

**ಸರ್ಕಾರದ ಆದೇಶ ಸಂಖ್ಯೆ: ವಾಕೈ 85 ಕೈಸೇವಿ 2008, (ಭಾಗ), ಬೆಂಗಳೂರು, ದಿನಾಂಕ: 3ನೇ ಏಪ್ರಿಲ್ 2009**

ಶ್ರೀ ಟಿ.ಎಸ್.ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, (ಅಮಾನತ್ತು) ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ, ಇವರನ್ನು ಹುದ್ದೆಯಿಂದ ತೆಗೆದು ಹಾಕುವ (ವಜಾ ಮಾಡುವ) ಅಧಿಕಾರವುಳ್ಳ ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಶ್ರೀ ಟಿ.ಎಸ್. ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರು, (ಅಮಾನತ್ತು) ಜಿಲ್ಲಾ ಕೈಗಾರಿಕಾ ಕೇಂದ್ರ, ರಾಯಪುರ, ಧಾರವಾಡ, ಇವರನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 7, 13 (1) (ಡಿ) ಜೊತೆಯಲ್ಲಿ ಓದಲಾದ ಕಲಂ 13(2) ರ ಪ್ರಕಾರ ಶಿಕ್ಷಾರ್ಹ ಅಪರಾಧಕ್ಕಾಗಿ ಸದರಿ ಕಾಯ್ದೆಯ ಕಲಂ 19 (1) (ಸಿ) ರ ಅಡಿ ಅಭಿಯೋಗಗೊಳಿಸಲು ಮಂಜೂರಾತಿಯನ್ನು ನೀಡಿದೆ.

ಈ ಮೇಲ್ಕಂಡ ಆದೇಶವನ್ನು ಈ ಕಛೇರಿಯ ಮೊಹರು ಮತ್ತು ನನ್ನ ಸಹಿಯ ಅಡಿಯಲ್ಲಿ ದಿ: 03.04.2009 ರಂದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1098

**ಬಿ.ಸಿ. ಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಸೇವೆಗಳು)

## ಆರ್ಥಿಕ ಸಚಿವಾಲಯ

**ವಿಷಯ:** ಮುಖ್ಯ ಮಂತ್ರಿಯವರ ಆರ್ಥಿಕ ಸಲಹೆಗಾರರು ಇವರು ತೆಗೆದುಕೊಳ್ಳುವ ಸಭೆಗಳಲ್ಲಿ ನೀಡುವ ಟೀ, ಕಾಫೀ ಮತ್ತು ಅಲ್ಪೋಪಹಾರದ ಸಲುವಾಗಿ ಮಾಡುವ ವೆಚ್ಚ ನೀಡುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ:ಆಇ 1 ಟಿಸಿಇ 2000, ದಿನಾಂಕ: 3.1.2001.
2. ಅಧಿಸೂಚನೆ ಸಂಖ್ಯೆ:ಸಿಆಸುಇ 492 ಸಅಸೇ 2008 ದಿನಾಂಕ: 10.06.2008.
3. ಡಾ: ಕೆ.ವಿ. ರಾಜು, ಮುಖ್ಯ ಮಂತ್ರಿಯವರ ಆರ್ಥಿಕ ಸಲಹೆಗಾರರು ಇವರ ಟಿಪ್ಪಣಿ ಸಂಖ್ಯೆ. ಇಎಸಿಎಂ/15/2009 ದಿನಾಂಕ: 19.02.2009.

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದ ಕ್ರಮ ಸಂಖ್ಯೆ 4 ರಲ್ಲಿ ವಿವರಿಸಿರುವ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು-2, ವಿಶೇಷ ಕಾರ್ಯದರ್ಶಿಗಳು, ವಿಭಾಗಾಧಿಕಾರಿಗಳು, ವಾಣಿಜ್ಯ ತೆರಿಗೆ ಆಯುಕ್ತರು, ಅಬಕಾರಿ ಆಯುಕ್ತರು, ಮುಂತಾದ ಇಲಾಖಾ ಕಾರ್ಯದರ್ಶಿಗಳ ಮಟ್ಟದ ಅಧಿಕಾರಿಗಳು ನಡೆಸುವ ಅಧಿಕೃತ ಸಭೆಗಳಲ್ಲಿ ನೀಡುವ ಟೀ, ಕಾಫೀ, ಅಲ್ಪೋಪಹಾರದ ಉದ್ದೇಶ ಮಾಡುವ ವೆಚ್ಚದ ಆರ್ಥಿಕ ಮಿತಿಯನ್ನು 6000/- ರೂ.ಗಳಿಗೆ ನಿಗದಿಪಡಿಸಲಾಗಿದೆ.

ಡಾ: ಕೆ.ವಿ. ರಾಜು ರವರನ್ನು ಮುಖ್ಯ ಮಂತ್ರಿಯವರ ಆರ್ಥಿಕ ಸಲಹೆಗಾರರನ್ನಾಗಿ ಉಲ್ಲೇಖ (2)ರ ಅಧಿಸೂಚನೆಯಲ್ಲಿ ನೇಮಿಸಲಾಗಿತ್ತು, ಇವರು ತೆಗೆದುಕೊಳ್ಳುವ ಸಭೆಗಳಲ್ಲಿ ನೀಡುವ ಟೀ, ಕಾಫೀ ಮತ್ತು ಅಲ್ಪೋಪಹಾರದ ಸಲುವಾಗಿ ಪ್ರತಿ ವರ್ಷಕ್ಕೆ ರೂ. 6000/- ಗಳನ್ನು ವೆಚ್ಚ ಮಾಡಲು ಅವಕಾಶ ಕಲ್ಪಿಸಿ ಆದೇಶ ಹೊರಡಿಸಬೇಕೆಂದು ಮೇಲೆ (3) ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಆಇ 2 ಟಿಸಿಇ 2009, ಬೆಂಗಳೂರು, ದಿನಾಂಕ: 1ನೇ ಏಪ್ರಿಲ್ 2009**

ಸರ್ಕಾರದ ಆದೇಶ ಸಂಖ್ಯೆ ; ಎಫ್‌ಡಿ 1 ಟಿಸಿಇ 2000 ದಿನಾಂಕ: 3.1.2001 ರ ಕ್ರಮ ಸಂಖ್ಯೆ (4) ರಲ್ಲಿ ವಿವರಿಸಿರುವ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು ಮುಂತಾದವರ ಪಟ್ಟಿಯಲ್ಲಿ ಮಾನ್ಯ ಮುಖ್ಯ ಮಂತ್ರಿಯವರ ಆರ್ಥಿಕ ಸಲಹೆಗಾರರು ಇವರ ಹೆಸರನ್ನು ಸೇರಿಸಲು ಆದೇಶಿಸಲಾಗಿದೆ. ಇವರು ನಡೆಸುವ ಅಧಿಕೃತ ಸಭೆಗಳಲ್ಲಿ ನೀಡುವ ಟೀ, ಕಾಫೀ ಮತ್ತು ಅಲ್ಪೋಪಹಾರದ ಸಲುವಾಗಿ ಮಾಡುವ ವಾರ್ಷಿಕ ವೆಚ್ಚ 6000/- ರೂ ಗಳಿಗೆ ಮಿತಿಗೊಳಿಸಿ ನಿಗದಿಪಡಿಸಲಾಗಿದೆ.

ಈ ಬಗ್ಗೆ ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮಗಳಿಗೆ ಸೂಕ್ತ ತಿದ್ದುಪಡಿ ಮಾಡಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಸಿ. ಶಾಮರಾವ್**

ಪಿ.ಆರ್. 1099

ಸರ್ಕಾರದ ಅಧೀನ ಕಾರ್ಯದರ್ಶಿ, (ಆರ್ಥಿಕ ನಿಯಮಗಳು, ಆಯವ್ಯಯ ಸಂಕಲನ ಮತ್ತು ಸಮಿತಿ ಶಾಖೆ) ಆರ್ಥಿಕ ಇಲಾಖೆ.

## ನಗರಾಭಿವೃದ್ಧಿ ಸಚಿವಾಲಯ

### ತಿದ್ದುಪಡಿ

**ಸಂಖ್ಯೆ:ನಅಇ 05 ಬೆಂಪ್ರಾ 2008, ಬೆಂಗಳೂರು, ದಿನಾಂಕ: 6ನೇ ಏಪ್ರಿಲ್ 2009**

ಸರ್ಕಾರಿ ಅಧಿಸೂಚನೆ ಸಂಖ್ಯೆ:ನಅಇ 05 ಬೆಂರೂಪ್ರಾ 2008 ದಿನಾಂಕ: 12.11.2008ರಲ್ಲಿನ ಕ್ರಮ ಸಂಖ್ಯೆ:13ರಲ್ಲಿ ನಗರ ಯೋಜನಾ ಜಂಟಿ ನಿರ್ದೇಶಕರು, ನಗರ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು ಸದಸ್ಯರು" ಎಂದು ನಮೂದಿಸಿರುವುದಕ್ಕೆ ಬದಲಾಗಿ "ನಗರ ಯೋಜನಾ ಹೆಚ್ಚುವರಿ ನಿರ್ದೇಶಕರು ಬಿ.ಎಂ.ಐ.ಸಿ.ಎ.ಸಿ.ಎ. ಬೆಂಗಳೂರು ಸದಸ್ಯ ಕಾರ್ಯದರ್ಶಿ ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಸಿ.ಟಿ. ನಾರಾಯಣಸ್ವಾಮಿ**

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ.

ಪಿ.ಆರ್. 1131

## EDUCATION SECRETARIAT

### NOTIFICATION

**No. ED 73 TEC 2008, Bangalore, Dated: 2nd June 2008**

Whereas it is considered necessary to make certain modifications in the Karnataka Selection of candidates for admission to Master of Business Administration and Master of Computer Application Courses Rules, 2004. Therefore, in exercise of the powers conferred by sub section (1) of section 14 of the Karnataka Educational Institutions (Prohibition of Capitation Fee) Act 1984 (Karnataka Act 37 of 1984) the Government of Karnataka hereby the makes following rules namely:-

**1. Title, Commencement and Application:-** (1) These rules may be called the Karnataka Selection of candidates for admission to master of Business Administration and Master of Computer Application Courses Amendment Rules, 2008.

(2) They shall come into force on the date of their publication in the official gazette

(3) The following amendments may be incorporated in the existing rules

"3. Academic Eligibility:

(1) Admission to Master of Business Administration and Master of Computer Application course shall be open for the candidates who have passed the Bachelor Degree with not less than fifty percent i.e. integer 50% (rounding aggregate percent is not permitted) of the marks in the aggregate of all the years of the degree examinations. However, in the case of candidates belonging to Scheduled Castes, Scheduled Tribes and Category-I, the aggregate percent of Marks of all the years of the qualifying examination shall not be less than forty five percent i.e integer 45% (rounding aggregate percent is not permitted)

Provided that for Master of Computer Application course he shall have passed Bachelor Degree with not less than fifty percent of marks i.e integer 50% (rounding aggregate percent is not permitted) with Mathematics or Statistics or Computer Science or Computer Applications or Business Mathematics or Business Statistics as one of optional or elective. However, in case of candidates belonging to Scheduled Castes, Schedules Tribes and Category-I, the percentage of marks shall not be less than forty five percent i.e integer 45% (rounding aggregate percent is not permitted)

By Order and in the name of Governor of Karnataka,

**N.R. PRABHU**

Under Secretary to Government,

Education Department, (Collegiate & Technical Education)

P.R. 1132

## ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಕೆ.ವಿ. ನಂಜಪ್ಪ, ಸಿ.ಎಚ್.ಸಿ.–176, ಕುದೇರು ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1. ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಚಾಮರಾಜನಗರ ಜಿಲ್ಲೆ, ಇವರ ಆದೇಶ ಸಂಖ್ಯೆ:ಚಾನ:ಡಿಇ:38/98–99 ದಿನಾಂಕ:13.09.01.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ:ಅಪೀಲು/18/2008–09 ದಿ:25.06.2008.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:18.08.08.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)69/2008–09 ದಿ:16.01.2009.

**ಪ್ರಸ್ತಾವನೆ:**

ಶ್ರೀ ಕೆ.ವಿ. ನಂಜಪ್ಪ, ಸಿ.ಎಚ್.ಸಿ.–176, ಕುದೇರು ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ, ಇವರು ಸರಗೂರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ದುರ್ನಡತೆ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

**ದೋಷರೋಪಣೆ:**

"ಸರಗೂರು ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಎಚ್.ಡಿ. ಕೋಟೆ ತಾಲ್ಲೂಕು, ಬಿಡಗಲು ಗ್ರಾಮದ ಕುಮಾರಿ ನಿರ್ಮಲ ಎಂಬಾಕೆಯೊಂದಿಗೆ ಪ್ರೇಮ ವ್ಯವಹಾರವನ್ನಿಟ್ಟುಕೊಂಡಿದ್ದು, ಮದುವೆಯಾಗುವುದಿಲ್ಲವೆಂದು ತಿಳಿಸಿದ ಮೇರೆಗೆ ಕು:ನಿರ್ಮಲ ವಿಷ ಸೇವಿಸಿ ಠಾಣೆಯ ಮುಂದೆಯೇ ಆತ್ಮಹತ್ಯೆ ಮಾಡಿಕೊಂಡಿದ್ದು ಒಂದು ಪ್ರಾಣಹಾನಿಯಾಗುವಂತೆ ದುರ್ನಡತೆ ಪ್ರದರ್ಶಿಸಿದ್ದೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿಲ್ಲ ಎಂದು ಸಲ್ಲಿಸಿದ ವರದಿ ಶಿಸ್ತು ಪ್ರಾಧಿಕಾರವು ಒಪ್ಪದೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು ಚಾಮರಾಜನಗರ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ:13.09.01ರ ಆದೇಶದಲ್ಲಿ ಅರ್ಜಿದಾರರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮೂರು ವರ್ಷಗಳ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗುವಂತೆ ಮುಂದೂಡಿ, ಅಮಾನತ್ತಿನಲ್ಲಿಡಲಾದ ದಿನಾಂಕ:29.01.97 ರಿಂದ ದಿ:03.11.98 ರವರೆಗಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ, ಆದೇಶಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ: 25.06.2008ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಒಇ 311 ಪೊಸಿಅ 2008, ಬೆಂಗಳೂರು, ದಿನಾಂಕ: 20ನೇ ಮಾರ್ಚ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಕೆ.ವಿ.ನಂಜಪ್ಪ, ಸಿ.ಎಚ್.ಸಿ.–176, ಕುದೇರು ಪೊಲೀಸ್ ಠಾಣೆ, ಚಾಮರಾಜನಗರ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1133

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ವಿಷಯ: ಶ್ರೀ ಎಸ್.ಪಿ.ಮಣಕವಾಡ, ಆರ್.ಪಿ.ಐ., ಡಿ.ಎ.ಆರ್., ಮಂಡ್ಯ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1. ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರ ಆದೇಶ ಸಂಖ್ಯೆ:ಅಪೀಲು/35/2006–07 ದಿ:17.07.2007.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಆದೇಶ ಸಂಖ್ಯೆ: ಸಿಬಿ(8)70/2007–08 ದಿ:11.02.2008.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:19.06.2008.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಸಿಬಿ(8)70/2007–08 ದಿನಾಂಕ:07.01.2009.

**ಪ್ರಸ್ತಾವನೆ:**

ಶ್ರೀ ಎಸ್.ಪಿ. ಮಣಕವಾಡ, ಆರ್.ಪಿ.ಐ., ಡಿ.ಎ.ಆರ್., ಮಂಡ್ಯ ಜಿಲ್ಲೆ, ಇವರ ವಿರುದ್ಧ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ನಿರ್ಲಕ್ಷತೆ, ಬೇಜವಾಬ್ದಾರಿತನ ಪ್ರದರ್ಶಿಸಿದ್ದಾರೆಂದು ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆ ಹೊರಿಸಲಾಗಿದೆ.

**ದೋಷರೋಪಣೆ:**

"ನೀವು ಜಿಲ್ಲಾ ಮೀಸಲು ಪಡೆಯಲ್ಲಿ ಆರ್.ಪಿ.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು ಕರ್ನಾಟಕ ಪೊಲೀಸ್ ಮ್ಯಾನುಯಲ್ ಭಾಗ–2ರ ಆದೇಶ ಸಂಖ್ಯೆ:2010ರ ಪ್ರಕಾರ ಮೀಸಲು ಪಡೆಯ ವಾಹನಗಳ ನಿರ್ವಹಣೆ ಹಾಗೂ ಶುಚಿತ್ವದ ಬಗ್ಗೆ ಕ್ರಮ ಕೈಗೊಳ್ಳದೆ ಕರ್ತವ್ಯದಲ್ಲಿ ನಿರ್ಲಕ್ಷತೆ, ಬೇಜವಾಬ್ದಾರಿತನ ಹಾಗೂ ಲೋಪವೆಸಗಿರುವ ಬಗ್ಗೆ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 17.07.2007ರ ಆದೇಶದಲ್ಲಿ ಅರ್ಜಿದಾರಿಗೆ ಇವರ "ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು 6 ತಿಂಗಳ ಕಾಲ ತದನಂತರದ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮವಾಗದಂತೆ ತಡೆಹಿಡಿಯಲಾದ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿ ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ: 11.02.2008ರ ಆದೇಶದಲ್ಲಿ ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ ಮೂರು ತಿಂಗಳ ಕಾಲ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಯಾವುದೇ ಹೊಸ ಅಂಶಗಳನ್ನು ಪ್ರಸ್ತಾಪಿಸಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಒಇ 195 ಪೊಸಿಅ 2008, ಬೆಂಗಳೂರು, ದಿನಾಂಕ: 19ನೇ ಮಾರ್ಚ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಸ್.ಪಿ.ಮಣಕವಾಡ, ಆರ್.ಪಿ.ಐ., ಡಿ.ಎ.ಆರ್. ಮಂಡ್ಯ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1134

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

ವಿಷಯ: ಶ್ರೀ ಎಂ.ಡಿ. ನಾಗರಾಜು, ಎ.ಪಿ.ಸಿ.–316, ಡಿ.ಎ.ಆರ್., ಶಿವಮೊಗ್ಗ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:
1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ ಜಿಲ್ಲೆ, ಇವರ ಆದೇಶ ಸಂಖ್ಯೆ:ಡಿಇ 1/2006 ಓ.ಬಿ:400/2007 ದಿ:06.11.2007.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವವಲಯ, ದಾವಣಗೆರೆ, ಇವರ ಆದೇಶ ಸಂಖ್ಯೆ:28–29/ಅಪೀಲು/ಸಿಬ್ಬಂದಿ–2/2007–08 ದಿ:08.04.08.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:09.09.2008.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)73/2008–09 ದಿನಾಂಕ:05.01.2009.

ಪ್ರಸ್ತಾವನೆ:

ಶ್ರೀ ಎಂ.ಡಿ. ನಾಗರಾಜ್, ಎ.ಪಿ.ಸಿ.–316, ಡಿ.ಎ.ಆರ್. ಶಿವಮೊಗ್ಗ ಜಿಲ್ಲೆ, ಇವರ ವಿರುದ್ಧ (ಇನ್ನು ಮುಂದೆ ಅರ್ಜಿದಾರರೆಂದು 'ಕರೆಯಲ್ಪಡುವ) ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ, ಬೇಜವಾಬ್ದಾರಿತನ ಪ್ರದರ್ಶಿಸಿದ ಕಾರಣಕ್ಕಾಗಿ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ಮತ್ತು 8 ರಡಿಯಲ್ಲಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

ದೋಷರೋಪಣೆ:

1) ನೀವು ಡಿಎಆರ್, ಶಿವಮೊಗ್ಗದಲ್ಲಿ ಎ.ಪಿ.ಸಿ.ಯಾಗಿ ಕರ್ತವ್ಯದಲ್ಲಿ ನಿರ್ವಹಿಸುತ್ತಿದ್ದು ವಿಚಾರಣಾಧೀನ ಖೈದಿ ಆರೋಪಿ ಹನೀಫ್‌ನ ಪಹರೆ ಕರ್ತವ್ಯಕ್ಕೆ ಮೆಗ್ಗಾನ್ ಆಸ್ಪತ್ರೆಗೆ ನೇಮಕವಾಗಿದ್ದು, ದಿ:16.06.06 ರಂದು ರಾತ್ರಿ ಕರ್ತವ್ಯಕ್ಕೆ ಬರಬೇಕಾದ ನೀವು ಮೇಲಾಧಿಕಾರಿಗಳಿಗೆ ಮಾಹಿತಿ ನೀಡದೆ ಸದರಿ ಧಿನದಂದು ಕರ್ತವ್ಯಕ್ಕೆ ಹಾಜರಾಗದೇ ಅಥವಾ ಮೇಲಾಧಿಕಾರಿಗಳವರಿಂದ ಅನುಮತಿಯನ್ನು ಪಡೆಯದೇ ಇದ್ದು ದಿನಾಂಕ:16.06.06 ರಂದು ರಾತ್ರಿ 1.30ರ ಸಮಯದಲ್ಲಿ ಆರೋಪಿ ಹನೀಫ್ ಪರಾರಿಯಾಗಿದ್ದು, ಸದರಿ ಆರೋಪಿ ಪರಾರಿಯಾಗಲು ನೀವು ಸಹ ಪರೋಕ್ಷವಾಗಿ ಕಾರಣರಾಗಿ ನಿಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷತೆ, ಲೋಪ ಮತ್ತು ಬೇಜವಾಬ್ದಾರಿ ಪ್ರದರ್ಶಿಸಿರುತ್ತೀರಿ.
2) ಕಮ್ಮರಡಿ ಹನೀಫ್, ಹಂಜಾ, ಮರ್ಡರ್ ರವಿ, ಎಲ್‌ಟಿಟಿ ವೆಂಕಟೇಶ್ ಅರುಣ ಇವರೆಲ್ಲರೂ ರೂಢಿಗತ ಅಪರಾಧಿಗಳಾಗಿದ್ದು ಇವರ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಇವರುಗಳಿಗೆ ಆಸ್ಪತ್ರೆಗಳಿಗೆ ಪರಸ್ಪರ ಭೇಟಿ ಮಾಡಲು ಅವಕಾಶ ಮಾಡಿ ಕೊಟ್ಟಿದ್ದಲ್ಲದೆ ಆರೋಪಿ ಹನೀಫ್‌ಗೆ ಮಾತನಾಡಲು ಅವನ ಮೊಬೈಲ್‌ನ್ನು ಕೊಟ್ಟಿದ್ದಲ್ಲದೆ ಆರೋಪಿಗೆ ಅವನದೇ ಆದ ಮೊಬೈಲ್ ಹೊಂದಲು ಅನುವು ಮಾಡಿಕೊಟ್ಟು ಕರ್ತವ್ಯದಲ್ಲಿ ತೀವ್ರ ದುರ್ನಡತೆ ಪ್ರದರ್ಶಿಸಿರುತ್ತೀರಿ.
3) ಆರೋಪಿ ಹನೀಫ್ ಪರಾರಿಯಾಗಲು ಬಳಸಿದ ಕದ್ದ ವಾಹನ ನಂ:ಕೆಎ:ನಂ–05 ಸಿ–624 ಟಾಟಾ ಸುಮೋವನ್ನು ದಿ:08.06.06 ರಿಂದ 16.06.06 ರವರೆಗೆ ತಮ್ಮ ಮನೆಯ ಮುಂದೆ ನಿಲ್ಲಿಸಿಕೊಂಡಿದ್ದಲ್ಲದೆ ಮನೆ ಕೆಲಸಕಾರ್ಯಗಳಲ್ಲಿ ಬಳಸಿಕೊಂಡಿರುವುದು ಕಂಡುಬಂದಿದ್ದು ಕರ್ತವ್ಯದಲ್ಲಿ ತೀವ್ರ ದುರ್ನಡತೆ ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ ಜಿಲ್ಲೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ:06.11.2007ರ ಆದೇಶದಲ್ಲಿ "ಇವರನ್ನು ಸೇವೆಯಿಂದ ವಜಾಗೊಳಿಸುವ ದಂಡನೆ ವಿಧಿಸಿ, ದಿ:17.06.06 ರಿಂದ 06.01.2007ರ ವರೆಗೆ ಅಮಾನತ್ತಿನಲ್ಲಿದ್ದ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದ್ದಾರೆ."

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವವಲಯ, ದಾವಣಗೆರೆ, ಇವರು ಮೇಲ್ಮನವಿಯನ್ನು ಮಾನವೀಯ ದೃಷ್ಠಿಯಿಂದ ಭಾಗಶ: ಪರಿಗಣಿಸಿ, ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ: 08.04.08ರ ಆದೇಶದಲ್ಲಿ "ಇವರ ವೇತನವನ್ನು ಪೊಲೀಸ್ ಪೇದೆಯ ಹುದ್ದೆಯ ಕನಿಷ್ಠ ವೇತನ ಮಟ್ಟಕ್ಕೆ 3 ವರ್ಷಗಳ ಕಾಲ ಕೆಳಗಿಳಿಸಿ ಅಮಾನತ್ತಿನ ಅವಧಿಯನ್ನು ಅಮಾನತ್ತಿನ ಅವಧಿಯೆಂದು ಪರಿಗಣಿಸಿ, ಸದರಿಯವರು ವಜಾಗೊಂಡ ದಿನಾಂಕದಿಂದ ಸೇವೆಯಲ್ಲಿ ಮರುನೇಮಕವಾಗುವ ತನಕದ ಅವಧಿಯನ್ನು ವೇತನ ರಹಿತ ರಜೆಯೆಂದು ಪರಿಗಣಿಸಿದ್ದಾರೆ."

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ.

ಪರಿಷ್ಕರಣ ಮೇಲ್ಮನವಿಯಲ್ಲಿ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವೆಂದು ಪರಿಗಣಿಸುತ್ತಾ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಒಇ 305 ಪೊಸಿಅ 2008, ಬೆಂಗಳೂರು, ದಿನಾಂಕ: 19ನೇ ಮಾರ್ಚ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ಡಿ. ನಾಗರಾಜ್, ಎ.ಪಿ.ಸಿ.–316, ಡಿ.ಎ.ಆರ್. ಶಿವಮೊಗ್ಗ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಟಿ.ಎನ್. ರವಿಪ್ರಕಾಶ್**

ಪಿ.ಆರ್. 1135

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

**ವಿಷಯ:** ಶ್ರೀ ರುದ್ರೇಶ್ವರ ಜಿ.ಎಲ್. ಸಿ.ಪಿ.ಸಿ.1398, ನ್ಯೂಟೌನ್ ಪೊಲೀಸ್ ಠಾಣೆ, ಭದ್ರಾವತಿ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ:**
1. ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ, ಇವರ ಆದೇಶ ಸಂಖ್ಯೆ:ಸಿಬ್ಬಂದಿ (4)ಶಿಕ್ಷೆ/27:06 ಓ.ಬಿ:246/06 ದಿ:05.08.2006.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರ ಆದೇಶ ಸಂಖ್ಯೆ:33/ಅಪೀಲು/ಸಿಬ್ಬಂದಿ/2/2006–07 ಓ.ಬಿ:109/07 ದಿ:23.07.2007.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:04.11.2008.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)97/2008–09 ದಿನಾಂಕ:06.02.2009.

**ಪ್ರಸ್ತಾವನೆ:**

ಶ್ರೀ ರುದ್ರೇಶ್ವರ ಜಿ.ಎಲ್., ಸಿ.ಪಿ.ಸಿ–1398, ನ್ಯೂಟೌನ್ ಪೊಲೀಸ್ ಠಾಣೆ, ಭದ್ರಾವತಿ, ಇವರು ಹೊಸದುರ್ಗ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ತೀವ್ರ ಲೋಪ ಮತ್ತು ದುರ್ನಡತೆ ಪ್ರದರ್ಶಿಸಿದ ಕಾರಣಕ್ಕಾಗಿ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 7ರಡಿ ಈ ಕೆಳಕಂಡಂತೆ ದೋಷಾರೋಪಣೆ ಹೊರಿಸಲಾಗಿದೆ.

**ದೋಷರೋಪಣೆ:**

"ನೀವುಗಳು ದಿ:31.10.05 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಶ್ರೀ ಕೆ.ಎಂ. ಮಹೇಶ್, ಬಿನ್ ಮಂಜಪ್ಪಗೌಡ ಇವರ ಮಳಿಗೆಗೆ ನುಗ್ಗಿ ಅವರಿಗೆ ಪೆಟ್ರೋಲ್ ಡೀಸೆಲ್‌ನ್ನು ಕಳ್ಳತನದಲ್ಲಿ ಮಾರುತ್ತೀಯ ಎಂದು ಹೇಳಿ 40ಲೀ. ಡೀಸೆಲ್ ಹಾಗೂ 10ಲೀ. ಪೆಟ್ರೋಲ್ ತೆಗೆದುಕೊಂಡು ಮಹೇಶ್‌ರವರನ್ನೂ ಸಹ ಠಾಣೆಗೆ ಕರೆದುಕೊಂಡು ಹೋಗಿ ಅವರನ್ನು ಬಿಡಲು ರೂ.13,000–00 ಅಕ್ರಮ ಸಂಭಾವನೆ ಪಡೆದು ಶಿಸ್ತಿನ ಇಲಾಖೆಯ ಗೌರವಕ್ಕೆ ಧಕ್ಕೆ ತರುವಂತೆ ವರ್ತಿಸಿ ಕರ್ತವ್ಯದಲ್ಲಿ ತೀವ್ರ ಲೋಪ ಮತ್ತು ದುರ್ನಡತೆ ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗು ಪೊಲೀಸ್ ಅಧಿಕ್ಷಕರು, ಶಿವಮೊಗ್ಗ, ಇವರು ಮೇಲೆ ಕ್ರಮ ಸಂಖ್ಯೆ:(1) ರಲ್ಲಿ ಓದಲಾದ ದಿನಾಂಕ: 05.08.2006ರ ಆದೇಶದಲ್ಲಿ "ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಭವಿಷ್ಯದ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ 2 ವರ್ಷಗಳ ಕಾಲ ಮುಂದೂಡಿ ದಿ:22.11.05 ರಿಂದ 10.03.06ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮನತ್ತೆಂದೇ ಪರಿಗಣಿಸಿ ಆದೇಶಿಸಿದ್ದಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗು ಪೊಲೀಸ್ ಮಹಾ ನಿರೀಕ್ಷಕರು, ಪೂರ್ವವಲಯ, ದಾವಣಗೆರೆ, ಇವರು ಮೇಲ್ಮನವಿಯನ್ನು ಭಾಗಶ: ಪುರಸ್ಕರಿಸಿ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ: 23.07.2007ರ ಆದೇಶದಲ್ಲಿ ಶಿಸ್ತು ಪ್ರಾಧಿಕಾರದ ದಂಡನೆಯ ಆದೇಶವನ್ನು ಭಾಗಶ: ಮಾರ್ಪಡಿಸಿ, ಇವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ಮೂರು ತಿಂಗಳ ಕಾಲ ಮುಂದೂಡಿ, ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಪರಿಷ್ಕರಣ

ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ದುರ್ನಡತೆ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಒಇ 367 ಪೊಸಿಅ 2008, ಬೆಂಗಳೂರು, ದಿನಾಂಕ: 19ನೇ ಮಾರ್ಚ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ರುದ್ರೇಶ್ವರ ಜಿ.ಎಲ್., ಸಿ.ಪಿ.ಸಿ-1398, ನ್ಯೂಟೌನ್ ಪೊಲೀಸ್ ಠಾಣೆ, ಭದ್ರಾವತಿ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1136 **ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು).

**ವಿಷಯ:** ಶ್ರೀ ಸಿ.ಎ. ಕಲಬುರ್ಗಿ, ಸಿಪಿಸಿ-881, ಇವರು ಬಾಗಲಕೋಟೆ ನಗರ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ:**
1. ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬಾಗಲಕೋಟೆ, ಇವರ ಆದೇಶ ಸಂಖ್ಯೆ:ಸಿಬ್ಬಂದಿ 3/ಡಿಇ-2/2006, ಅ.ಪು.ಸಂ:239/2007 ದಿ:18.07.07.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ:ಅಪೀಲು 175/ಉವ/2007-08-09 ದಿ:08.03.08.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:30.07.08.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)50/2008-09 ದಿನಾಂಕ:06.02.2009.

**ಪ್ರಸ್ತಾವನೆ:**

ಶ್ರೀ ಸಿ.ಎ.ಕಲಬುರ್ಗಿ, ಸಿಪಿಸಿ-881, ಇವರು ಬಾಗಲಕೋಟೆ ನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಇವರ ಜೊತೆ ಇತರೆ ಪೊಲೀಸ್ ಸಿಬ್ಬಂದಿಗಳ ವಿರುದ್ಧ ಕರ್ತವ್ಯದಲ್ಲಿ ಘೋರ ದುರ್ನಡತೆ, ಅಶಿಸ್ತು, ನಿರ್ಲಕ್ಷತೆ ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6 ಮತ್ತು 8ರಡಿ ಜಂಟಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

**ದೋಷರೋಪಣೆ:**

"ದಿ:24.02.2006 ರಂದು 12.30 ಗಂಟೆಯಿಂದ 13.00 ಗಂಟೆಯ ಅವಧಿಯಲ್ಲಿ ಬಾಗಲಕೋಟೆ ಶಹರದ ಸಿ.ಟಿ.ಎಸ್. ನಂ:8/5ಬಿ ನೇದ್ದರಲ್ಲಿ ಇರುವ ಭಾಗವಾನ ಚಾಳ ರೂಂ ನಂ:12ರಲ್ಲಿ ಒಬ್ಬ ಸಾರ್ವಜನಿಕ ವ್ಯಕ್ತಿಯೊಂದಿಗೆ ಜೊತೆಗೂಡಿ ಇಸ್ಪೀಟ ಎಲೆಗಳ ಮೇಲೆ ಹಣ ಹಚ್ಚಿ ಸ್ವಂತ ಲಾಭಕ್ಕೋಸ್ಕರ 'ಅಂದರ ಬಾಹರ" ಎಂಬ ಮನ್ನಾ ಜೂಜಾಟ ಆಡುತ್ತಿರುವಾಗ ಸಿ.ಪಿ.ಐ. ಬಾಗಲಕೋಟೆ ಶಹರ ವೃತ್ತ, ಇವರು ದಾಳಿ ಮಾಡಿದಾಗಿ ಸಿಕ್ಕು ಬಿದ್ದು ಒಟ್ಟು ಹಣ 1,285-00 ರೂ.ಗಳನ್ನು ಜಪ್ತಮಾಡಿಕೊಂಡು ನಿಮ್ಮೆಲ್ಲರನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿಕೊಂಡು ಶಹರ ಠಾಣೆಯಲ್ಲಿ ಪ್ರಕರಣ ಸಂಖ್ಯೆ:44/2006 ಕಲಂ 79, 80 ಕೆ.ಪಿ. ಆಕ್ಟ್ ನೇದ್ದರ ಅಡಿಯಲ್ಲಿ ಪ್ರಕರಣ ದಾಖಲು ಮಾಡಿಸಿಕೊಂಡಿರುತ್ತಾರೆ. ಈ ಪ್ರಕಾರ ನೀವು ಸಮಾಜ ಘಾತುಕ ಶಕ್ತಿಯಲ್ಲಿ ಒಂದಾದ ಕಾನೂನುಬಾಹಿರ ಅಕ್ರಮ ಚಟುವಟಿಕೆಯಂತಹ ಇಸ್ಪೀಟ ಜೂಜಾಟ ಹತ್ತಿಕ್ಕುವ ನಿಟ್ಟಿನಲ್ಲಿ ಪ್ರಯತ್ನಿಸದೇ ಸ್ವತ:ಸಾರ್ವಜನಿಕರೊಂದಿಗೆ ಸೇರಿ ಜೂಜಾಟ ಆಡಿ ಅಪರಾಧ ಪ್ರಕರಣದಲ್ಲಿ ಭಾಗಿಯಾಗಿ ನೀವು ನಿಮ್ಮ ಕರ್ತವ್ಯದಲ್ಲಿ ಘೋರ ದುರ್ನಡತೆ, ಅಶಿಸ್ತು, ನಿರ್ಲಕ್ಷತನ ಮತ್ತು ಬೇಜವಾಬ್ದಾರಿತನ ಪ್ರದರ್ಶಿಸಿದ್ದೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ಬಾಗಲಕೋಟೆ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 18.07.07ರ ಆದೇಶದಲ್ಲಿ "ಇವರ ಮೂಲ ವೇತನದಲ್ಲಿನ 3 ಹಂತಗಳನ್ನು ತದನಂತರದ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರದಂತೆ 2 ವರ್ಷಗಳ ಕಾಲ ಕೆಳಗಿಳಿಸಿ, ದಿ:24.02.2006 ರಿಂದ 02.06.2006ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದು ಪರಿಗಣಿಸಿ ಆದೇಶಿಸಿದ್ದಾರೆ."

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರು ಮೇಲ್ಮನವಿಯನ್ನು ಪರಿಶೀಲಿಸಿ ಅರ್ಜಿದಾರರಿಗೆ

ಸುಧಾರಿಸಿಕೊಳ್ಳಲು ಆಸ್ಪದ ನೀಡುವ ಸಲುವಾಗಿ ಶಿಸ್ತು ಪ್ರಾಧಿಕಾರದ ದಂಡನಾದೇಶವನ್ನು ಭಾಗಶಃ ಮಾರ್ಪಡಿಸಿ, "ಇವರ ಮೂಲ ವೇತನದಲ್ಲಿನ ಮೂರು ಹಂತಗಳನ್ನು ತದನಂತರದ ವಾರ್ಷಿಕ ವೇತನ ಬಡ್ತಿಗಳ ಮೇಲೆ ಪರಿಣಾಮ ಬೀರುವಂತೆ ಒಂದು ವರ್ಷಕಾಲ ಕೆಳಗಿಳಿಸಿ ಅಮಾನತ್ತಿನ ಅವಧಿ ದಿ:24.02.2006 ರಿಂದ 02.06.2006ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ, ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿ:08.03.08ರ ಆದೇಶದಲ್ಲಿ ಮೇಲ್ಮನವಿಯನ್ನು ಪರಿಗಣಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಇವರ ವಿರುದ್ಧದ ಇಲಾಖಾ ವಿಚಾರಣೆಯಲ್ಲಿ ಆರೋಪವು ಸಾಬೀತಾಗಿದೆ. ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಒಇ 237 ಪೊಸಿಅ 2008, ಬೆಂಗಳೂರು, ದಿನಾಂಕ: 19ನೇ ಮಾರ್ಚ್ 2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೋಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಸಿ.ಎ. ಕಲಬುರ್ಗಿ, ಸಿಪಿಸಿ–881, ಬಾಗಲಕೋಟೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1137

**ಟಿ.ಎನ್. ರವಿಪ್ರಕಾಶ್**

ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ (ಪೋಲೀಸ್ ಸೇವೆಗಳು).

**ವಿಷಯ:** ಶ್ರೀ ಎಂ.ಕೆ. ನಾರಾಯಣಕರ್, ಸಿ.ಪಿ.ಸಿ.–583, ನರಗುಂದ, ಗದಗ ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

**ಓದಲಾಗಿದೆ:**
1. ಶಿಸ್ತು ಪ್ರಾಧಿಕಾರಿ ಹಾಗೂ ಪೋಲೀಸ್ ಅಧೀಕ್ಷಕರು, ಗದಗ, ಇವರ ಆದೇಶ ಸಂಖ್ಯೆ:ಡಿಇ:ಪಿಆರ್:145/99 ಗದಗ ಜಿಲ್ಲೆ, ಗದಗ, ಅ.ಪು:108/2000 ದಿ:09.03.2000.
2. ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರ ಆದೇಶ ಸಂಖ್ಯೆ:ಅಪೀಲು/36/ಉವ/2000 ದಿ:31.07.2002.
3. ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ:28.07.07.
4. ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)56/2007–08 ದಿನಾಂಕ:20.01.2009.

**ಪ್ರಸ್ತಾವನೆ:**

ಶ್ರೀ ಎಂ.ಕೆ. ನಾರಾಯಣಕರ್, ಸಿ.ಎಚ್.ಸಿ.–583, ಇವರು ಆಡೂರ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ಅತೀವ ದುರ್ನಡತೆ, ಬೇಜವಾಬ್ದಾರಿತನ ಹಾಗೂ ಕರ್ತವ್ಯಚ್ಯುತಿ ಮಾಡಿದ್ದಾರೆ ಎಂಬ ಕಾರಣಕ್ಕಾಗಿ ಕರ್ನಾಟಕ ರಾಜ್ಯ ಪೋಲೀಸ್ (ಶಿಸ್ತು ನಡವಳಿಗಳು) ನಿಯಮಾವಳಿ 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

**ದೋಷರೋಪಣೆ:**

"ನೀವು ಸಿ.ಪಿ.ಸಿ. ಅಂತಾ ಆಡೂರ ಪೋಲೀಸ್ ಠಾಣೆ, ಸದ್ಯ ಬೆರಳು ಮುದ್ರೆ ವಿಭಾಗ ಜಿಲ್ಲಾ ಪೋಲೀಸ್ ಕಾರ್ಯಾಲಯ, ಗದಗದಲ್ಲಿ ಸೇವೆ ಸಲ್ಲಿಸುತ್ತಿರುವಿರಿ. ನೀವು ಆಡೂರ ಠಾಣೆಯಲ್ಲಿ ಸೇವೆ ಸಲ್ಲಿಸುತ್ತಿರುವಾಗ ಈ ಕೆಳಕಂಡ ಅಪಾದನೆಗೆ ಗುರಿಯಾಗಿರುವಿರಿ.

ದಿ:03.04.1977ರ ರಾತ್ರಿ 8.00 ಗಂಟೆಯ ಹಾಜರಿಗೆ ಹಾಗೂ ಅಂದೇ ರಾತ್ರಿ ಗಸ್ತು ಕರ್ತವ್ಯಕ್ಕೆ ಕೂಡಾ ಅನಧಿಕೃತ ಗೈರುಹಾಜರಾಗಿ ರಾತ್ರಿ 2.30 ಗಂಟೆಗೆ ಹಾನಗಲ್–ಪಾಳಾ ರಸ್ತೆಯ ಮೇಲೆ ಹಲಗಿನ ಕೊಪ್ಪದ ಹತ್ತಿರ ಚಕ್ಕಡಿಯಲ್ಲಿ ಅನಧಿಕೃತವಾಗಿ ಪಾಸ್‌ವ ಪರ್ಮಿಟ್ ಇಲ್ಲದೆ ಸರ್ಕಾರಿ ಅರಣ್ಯದಿಂದಾ ಸಾಗುವಾನಿ ಕಟ್ಟಿಗೆಯ ತುಂಡುಗಳನ್ನು ಸಾಗಿಸುವಾಗ ಅರಣ್ಯ ಇಲಖೆಯವರ ಕೈಯಲ್ಲಿ ಸಿಲುಕಿ ಕರ್ತವ್ಯದಲ್ಲಿ ಅತೀವ ದುರ್ನಡತೆ ಬೇಜವಾಬ್ದಾರಿತನ ಹಾಗೂ ಕರ್ತವ್ಯಚ್ಯುತಿ ಪ್ರದರ್ಶಿಸಿದ್ದೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತು ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ಗದಗ ಜಿಲ್ಲೆ, ಗದಗ, ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 09.03.2000ರ ಆದೇಶದಲ್ಲಿ "ಇವರ ವೇತನವನ್ನು ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಯ ಕನಿಷ್ಠ ಶ್ರೇಣಿಗೆ ಮೂರು ವರ್ಷಗಳ ಕಾಲ ಇಳಿಸಲಾಗಿದೆ ಹಾಗೂ ದಿ:20.04.97 ರಿಂದ 14.11.97ರ ವರೆಗಿನ ಅಮಾನತ್ತಿನ ಅವಧಿಯನ್ನು ಅಮನಾತ್ತೆಂದೇ ಪರಿಗಣಿಸಿ ಆದೇಶಿಸಿದ್ದಾರೆ."

ಈ ಆದೇಶದ ವಿರುದ್ದ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಆರಕ್ಷಕ ಮಹಾ ನಿರೀಕ್ಷಕರು, ಉತ್ತರ ವಲಯ, ಬೆಳಗಾವಿ, ಇವರು ಶಿಸ್ತುಪ್ರಾಧಿಕಾರದ ದಂಡನೆಯು ದೋಷಾರೋಪಕ್ಕೆ ಅನುಗುಣವಾಗಿಲ್ಲವೆಂದು ಅಭಿಪ್ರಾಯವನ್ನಿಟ್ಟು ಶಿಸ್ತು ಪ್ರಾಧಿಕಾರದ ದಂಡನೆಯನ್ನು ಭಾಗಶ: ಮಾರ್ಪಡಿಸಿ, ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ: 31.07.2002ರ ಆದೇಶದಲ್ಲಿ "ಇವರ ವೇತನವನ್ನು ಪಿ.ಸಿ.ಹುದ್ದೆಯ ಕನಿಷ್ಠ ವೇತನ ಶ್ರೇಣಿಗೆ ಎರಡು ವರ್ಷಗಳ ಕಾಲ ಇಳಿಸುವ ದಂಡನೆ ವಿಧಿಸಿದ್ದಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗಿದ್ದು, ಪರಿಷ್ಕರಣ ಮೇಲ್ಮನವಿಯಲ್ಲಿ ಪರಿಗಣಿಸುವಂತಹ ಯಾವುದೇ ಹೊಸ ಸಮರ್ಥನೀಯ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ನಾನು ಅಪರಾಧ ಸ್ಥಳಕ್ಕೆ ಹೋಗಿದ್ದು, ಸ್ಥಳದಲ್ಲಿ ಜಫ್ತಾಗಿರುವ ವಾಹನದಿಂದ ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ ಎಂಬುವುದು ಸುಳ್ಳು ಎಂಬುವುದು ಸರಿಯಲ್ಲ. ಕಾಯರ್‌ತಡ್ಕ ಎಂಬ ಸ್ಥಳದ ಹತ್ತಿರದ ಗ್ರಾಮ ಬಾಳಿಲವಾಗಿರುತ್ತದೆ. ಆರ್.ಸಿ. ಮಾಲೀಕರು ನಾನು ವಶಪಡಿಸಿಕೊಂಡಿರುವ ಮೋಟಾರ್ ಬೈಕನ್ನು ಅವರ ಗೇರು ತೋಟಕ್ಕೆ ಹೋಗುವಾಗ ಮಧ್ಯಾಹ್ನ 3-00 ಗಂಟೆಗೆ ರಸ್ತೆ ಬದಿ ನಿಲ್ಲಿಸಿ ತೋಟಕ್ಕೆ ಹೋಗಿದ್ದು, ವಾಪಸ್ಸು ಸುಮಾರು 5-20 ಗಂಟೆಗೆ ಬಂದಾಗ ಅಲ್ಲಿ ಆ ವಾಹನವು ಇರಲಿಲ್ಲ ಎಂಬುದು ತನಗೆ ತಿಳಿದಿರಲಿಲ್ಲ. ಆರ್.ಸಿ. ಮಾಲೀಕರು ತಮ್ಮ ಬೈಕ್ ಮಾಯವಾಗಿರುವ ಬಗ್ಗೆ ವಿಚಾರಿಸಿದ್ದು, ಬೈಕನ್ನು ಅಬಕಾರಿ ಇಲಾಖೆ ಸಿಬ್ಬಂದಿಯವರು ಕೊಂಡು ಹೋಗಿದ್ದಾರೆ ಎಂಬ ಮಾಹಿತಿ ಎಂದು ತಿಳಿದು ತನ್ನ ಕಛೇರಿಗೆ ಅದೇ ದಿವಸ ರಾತ್ರಿ ಬಂದು ಬೈಕ್ ಬಗ್ಗೆ ವಿಚಾರಿಸಿರುವುದು ನನಗೆ ತಿಳಿದಿರುವುದಿಲ್ಲ. ಸದರಿಯವರು ಕಛೇರಿಗೆ ಬಂದಾಗ ನನ್ನ ಸಿಬ್ಬಂದಿಯವರು ಆರ್.ಸಿ. ಮಾಲೀಕರನ್ನು ಮರುದಿವಸ ಬೆಳಿಗ್ಗೆ ಬನ್ನಿ ಎಂಬುವುದಾಗಿ ಹೇಳಿರುವುದು ನನಗೆ ತಿಳಿದಿರುವುದಿಲ್ಲ. ಮರುದಿವಸ ಕೂಡಾ ಆರ್.ಸಿ. ಮಾಲೀಕರು ನಮ್ಮ ಕಛೇರಿಗೆ ಬಂದು ಬೈಕ್‌ನ ಬಗ್ಗೆ ವಿಚಾರಿಸಿದಾಗ, ಮತ್ತೆರಡು ದಿವಸ ನಂತರ ಅವರನ್ನು ಬರಲು ಹೇಳಿರುವ ವಿಷಯ ನನಗೆ ತಿಳಿದಿರುವುದಿಲ್ಲ. ನಂತರ ಎರಡು ದಿವಸ ಕಳೆದು ಆರ್.ಸಿ. ಮಾಲೀಕರು ತನ್ನ ಕಛೇರಿಗೆ ಬಂದು ವಾಹನವನ್ನು ಅವರಿಗೆ ಬಿಟ್ಟುಕೊಡಲು ಕೇಳಿದಾಗ, ಅದನ್ನು ವಿಶ್ವನಾಥ ರೈ ಎಂಬ ವ್ಯಕ್ತಿಯ ಮೇಲೆ ಪ್ರಕರಣ ದಾಖಲಿಸಿ, ಸದರಿ ವ್ಯಕ್ತಿಗೆ ಸಂಬಂಧಿಸಿ ಆ ಬೈಕನ್ನು ಪ್ರಕರಣದಲ್ಲಿ ಒಳಪಡಿಸಲಾಗಿದೆ ಹಾಗೂ ಸದರಿ ವಾಹನವು ವಿಶ್ವನಾಥ ಎಂಬವರ ಮೇಲೆ ಪ್ರಕರಣ ದಾಖಲಿಸಿರುವ ವಾಹನವಾಗಿರುತ್ತದೆ. ನೀವು ಸದರಿ ವಾಹನವನ್ನು ಅಧಿಕೃತ ಅಧಿಕಾರಿಗಳ ಪ್ರಾಧಿಕಾರ, ಮಂಗಳೂರು ಇವರ ಕಛೇರಿಯಿಂದ ಸದರಿ ವಾಹನ ಬಿಡುಗಡೆಗೊಳಿಸಿದೆ ಎಂಬುವುದು ಸರಿಯಲ್ಲ. ವಿಶ್ವನಾಥ ರೈ ಎಂಬವರ ವಿರುದ್ಧ ದಾಖಲಾಗಿರುವ ಪ್ರಕರಣಕ್ಕೂ, ಈ ವಾಹನಕ್ಕೂ ಸಂಬಂಧ ಸುಳ್ಳು ಕೇಸು ಹಾಕಿರುವುದು ಎಂದರೆ ಸರಿಯಲ್ಲ ಹಾಗೂ ವಾಹನದ ಮಾಲೀಕರಾದ ತಿಮ್ಮಪ್ಪಗೌಡ ಎನ್ನುವವರನ್ನು ಎರಡನೇ ಆರೋಪಿಯನ್ನಾಗಿ ಮಾಡಿ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಲಾಗಿದೆ ಎನ್ನುವುದು ಸರಿಯಲ್ಲ. ತಾನು ದಾಖಲಿಸಿರುವ ಪ್ರಕರಣದಲ್ಲಿ ಜಫ್ತಾಗಿರುವ ವಾಹನವಾಗಲೀ, ವಾಹನದ ಮಾಲೀಕರಾಗಲಿ ಪ್ರಕರಣದಲ್ಲಿ ಭಾಗಿಯಾಗಿರುವುದಿಲ್ಲ ಎಂಬುವುದು ಸರಿಯಲ್ಲ. ಪ್ರಕರಣದ ಒಂದನೇ ಆರೋಪಿ ವಿಶ್ವನಾಥ ರೈ ಇವರ ವಾಸ ಸ್ಥಳ ಕಾಣಿಯೂರು-ಪುತ್ತೂರು ತಾಲ್ಲೂಕು ಆಗಿದ್ದು, ಮಾಲೀಕರು ತಿಮ್ಮಪ್ಪಗೌಡ, ಮುರುಳ್ಯ-ಸುಳ್ಯ ತಾಲ್ಲೂಕು ಆಗಿರುತ್ತದೆ. ಆರ್.ಸಿ. ಮಾಲೀಕರು ತನ್ನ ತೋಟದ ಕಾರ್ಯಕ್ಕೆ ಹೋಗಿದ್ದ ಸಂದರ್ಭದಲ್ಲಿ ವಿನಾ ಕಾರಣ ಅವರ ಮೋಟಾರ್ ಸೈಕಲನ್ನು ಜಪ್ತುಪಡಿಸಿ ಸುಳ್ಳು ಕೇಸು ಹಾಕಿದ್ದೀರಿ ಎಂಬುವುದು ಸರಿಯಲ್ಲ. ನಾನು ಅಪರಾಧ ಸ್ಥಳದಲ್ಲಿ ಒಬ್ಬ ವ್ಯಕ್ತಿಯನ್ನು ಶೋಧಿಸಿ, ಅವನು ಒಂದು ಮದ್ಯದ ಬಾಟಲ್ ಇಟ್ಟುಕೊಂಡಿದ್ದು, ಅದನ್ನು ಜಪ್ತುಪಡಿಸಿದ ಬೈಕ್‌ನ ಮೂಲಕ ಮಾರಾಟ ಮಾಡಲಾಗಿದೆ ಎಂಬ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂಬುವುದು ಸರಿಯಲ್ಲ. ಜಪ್ತುಪಡಿಸಿರುವ ವಾಹನವು ಅಪರಾಧಕ್ಕೆ ಒಳಪಟ್ಟಿರುವುದಿಲ್ಲ ಎಂಬುವುದು ಸರಿಯಲ್ಲ. ಕೆಲವು ಸಂದರ್ಭಗಳಲ್ಲಿ ಅನಾಮಧೇಯ ಮಾಹಿತಿ ಬಂದು ಸ್ಥಳಕ್ಕೆ ದಾಳಿವೆಸಗಿದ ಸಂದರ್ಭದಲಿ ವಾರಸುದಾರರಿಲ್ಲದೆ ದಾಸ್ತಾನು ಇರಿಸಿರುವ ಅಕ್ರಮ ಮದ್ಯ ಸಾರಾಯಿ ಸಿಗುವುದು ಸರ್ವೆ ಸಾಮಾನ್ಯ ಪ್ರಕರಣವು ಅಂತಹದೇ ಅನಧಿಕೃತ ಮದ್ಯ ದಾಸ್ತಾನಿನ ಬಗ್ಗೆ ಪತ್ತೆಯಾಗಿದ್ದು, ಈ ಬಗ್ಗೆ ವಾಹನವನ್ನು ಜಪ್ತುಪಡಿಸಿ ಸುಳ್ಳು ಕೇಸು ಹಾಕಿರುವುದು ಸರಿಯಲ್ಲ. ಇಂತಹ ಅನಧಿಕೃತವಾಗಿ ಇರಿಸಲಾದ ಸೊತ್ತುಗಳನ್ನು ವಶಪಡಿಸಿಕೊಂಡು ಕಛೇರಿಯಲ್ಲಿರಿಸಿ ಅವುಗಳನ್ನೇ ಈ ಪ್ರಕರಣದಲ್ಲಿ ತೋರಿಸಿ ಸುಳ್ಳು ಕೇಸು ಹಾಕಲಾಗಿದೆ ಎಂಬುದು ಸರಿಯಲ್ಲ. ತಾನು ಬೈಕ್‌ನೊಂದಿಗೆ ಅಪರಾಧ ಸ್ಥಳದಲ್ಲಿ ವಶಪಡಿಸಿದ 180 ಎಂ.ಎಲ್.ನ ಬಾಸ್ ವಿಸ್ಕಿ ಎಂಬ ಮದ್ಯ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿ ನಿಶಾನೆ ಪಿ3 ಮಹಜರನ್ನು ತನ್ನ ಕಛೇರಿಯಲ್ಲಿ ತಯಾರಿಸಿದೆ ಎಂಬುವುದು ಸರಿಯಲ್ಲ. ತಾನು ಆರೋಪಿಗಳ ವಿರುದ್ಧ ಸುಳ್ಳು ಕೇಸು ಮಾಡಿದ್ದೇನೆ ಎಂಬುವುದು ಸರಿಯಲ್ಲ.

ಎದುರುದಾರರ ಪರ ವಕೀಲರು ಕೇಳಿದ ಪ್ರಶ್ನೆಗಳಿಗೆ ಉತ್ತರ ಸಲ್ಲಿಸಿ, ಈ ಪ್ರಕರಣದಲ್ಲಿ ವಶಪಡಿಸಿಕೊಂಡ ವಾಹನದಲ್ಲಿ ಯಾವುದೇ ಮದ್ಯ ಮಾರಾಟ ಮತ್ತು ಸಾಗಾಟ ಮಾಡಿಲ್ಲವೆಂಬುದನ್ನು ಅಲ್ಲಗಳೆದಿದ್ದಾರೆ ಹಾಗೂ ಮದ್ಯ ಮಾರಾಟ ಮತ್ತು ಸಾಗಾಟ ಆಗಿರುವುದನ್ನು ದೃಢಪಡಿಸಿರುತ್ತಾರೆ. ಈ ಸಾಕ್ಷಿದಾರರ ಹೇಳಿಕೆಗಳನ್ನು ಪರಿಶೀಲಿಸಿದಾಗ, ಅವುಗಳನ್ನು ನಂಬದೇ ಇರಲು ಸಕಾರಣ ಇಲ್ಲವೆಂಬ ಅಭಿಪ್ರಾಯ ವ್ಯಕ್ತಪಡಿಸಿರುತ್ತೇನೆ. ಅದಲ್ಲದೆ ಸ್ಥಳದಲ್ಲಿ ತಯಾರಿಸಿದ ಮಹಜರು ಮತ್ತು ಪ್ರಕರಣದ ಪ್ರಥಮ ಮಾಹಿತಿ ವರದಿಯು ಈ ಸಾಕ್ಷಿದಾರರ ಹೇಳಿಕೆಯನ್ನು ಪುಷ್ಟೀಕರಿಸುತ್ತೇನೆ. ಆದುದರಿಂದ ಜಪ್ತುಪಡಿಸಿರುವ ವಾಹನದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮತ್ತು ಸಾಗಾಟ ಮಾಡಿರುವುದು ಸ್ಪಷ್ಟವಾಗಿ ಸಾಬೀತಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ, ಮೊದಲನೇ ವಿವಾದಾಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಈ ಪ್ರಕರಣದ ಎರಡನೇ ಅಂಶವನ್ನು ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ವಾಹನದಲ್ಲಿ ವಾಹನ ಮಾಲೀಕರಿಗೆ ತಿಳಿಯದೆ ಈ ಕೃತ್ಯವು ಎಸಗಲಾಗಿದೆ ಎಂಬುವುದನ್ನು ಅರ್ಜಿದಾರರು ಸಾಬೀತುಪಡಿಸಬೇಕಾಗಿದ್ದು, ಅರ್ಜಿದಾರರನ್ನು ವಿಚಾರಣೆಗೆ ಹಾಜರುಪಡಿಸಿರುತ್ತಾರೆ. ಅವರ ಹೇಳಿಕೆಯನ್ನು ಈ ಕೆಳಗಿನಂತೆ ಪ್ರಾಧಿಕಾರವು ಪಡೆದಿರುತ್ತದೆ.

**ಪಿಡಬ್ಲ್ಯು-1:**

ವಾಹನ ಮಾಲೀಕರಾದ ಶ್ರೀ ಕೆ.ತಿಮ್ಮಪ್ಪಗೌಡ ಇವರು ದಿನಾಂಕ:28.01.2009 ರಂದು ಈ ಪ್ರಾಧಿಕಾರದ ಮುಂದೆ ಸಾಕ್ಷಿ ನುಡಿಯುತ್ತಾ, ತಾನು ಕೆಎ-21-ಜೆ-3289 ಸಂಖ್ಯೆಯ ಮೋಟಾರು ಬೈಕ್ ಇದರ ಆರ್.ಸಿ. ಮಾಲೀಕನಾಗಿದ್ದೇನೆ. ತಾನು

ಕೃಷಿಕನಾಗಿರುತ್ತೇನೆ. ಗೇರು ಹಾಗೂ ಗೇರುಬೀಜದ ಗುತ್ತಿಗೆ ಕಸಬು ಮಾಡುವವನಾಗಿರುತ್ತೇನೆ. ತಾನು ಸುಮಾರು ಒಂದು ವಷ ಹಿಂದೆ ದಿನಾಂಕ:26.02.2002 ರಂದು ತನ್ನ ಮೋಟಾರು ಬೈಕನ್ನು ಮಾಳ ಎಂಬ ಊರಿನ ರಸ್ತೆ ಬದಿ ನಿಲುಗಡೆಗೊಳಿಸಿ ತ ಸ್ವಂತ ಸ್ಥಳಕ್ಕೆ ಬಾಳಿಲ ಎಂಬ ಸ್ಥಳಕ್ಕೆ ಹೋಗಿರುತ್ತೇನೆ. ತಾನು ಸಾಯಂಕಾಲ ಹಿಂತಿರುಗಿ ಬಂದಾಗ ತಾನು ನಿಲುಗಡೆಗೊಳಿಸಿ ಸ್ಥಳದಲ್ಲಿ ತನ್ನ ವಾಹನ ಇರಲಿಲ್ಲ. ತಾನು ಸ್ಥಳೀಯರಲ್ಲಿ ಬೈಕಿನ ಬಗ್ಗೆ ತಿಳಿಸಿದಾಗ, ನಿಲುಗಡೆಗೊಳಿಸಿದ ಬೈಕನ್ನು ಅಬಕಾ ಇಲಾಖೆಯವರು ಕೊಂಡುಹೋಗಿದ್ದಾರೆ ಎಂದು ತಿಳಿಸಿದರು. ತಾನು ನಂತರ ಸುಳ್ಯ ಪೇಟೆಗೆ ಬಂದು ಅಬಕಾರಿ ಇಲಾ ಕಛೇರಿಗೆ ಹೋಗಿ ತನ್ನ ಬೈಕನ್ನು ಅಲ್ಲಿ ನೋಡಲಾಗಿ, ಕಛೇರಿಯಲ್ಲಿ ಬೈಕ್ ಇರುವುದು ಕಂಡು, ಅಬಕಾರಿ ಅಧಿಕಾರಿಯವರ ಸದರಿ ಬೈಕನ್ನು ತನ್ನ ಸುಪರ್ದಿಗೆ ನೀಡುವಂತೆ ಕೇಳಿಕೊಂಡಿದ್ದು, ಕಾನೂನು ರೀತಿಯಲ್ಲಿ ಬಿಡುಗಡೆಗೊಳಿಸಬೇಕಾಗಿ ತಿಳಿಸಿರುತ್ತಾ ಎರಡು ತಿಂಗಳ ನಂತರ ತನ್ನ ವಾಹನಕ್ಕೆ ಬ್ಯಾಂಕ್ ಭದ್ರತೆ ನೀಡಿದಲ್ಲಿ ಮಧ್ಯಂತರ ಬಿಡುಗಡೆ ನೆಲೆಯಲ್ಲಿ ಪಡೆದುಕೊಳ್ಳಬಹುದಾ ನೋಟೀಸು ಬಂದಿರುತ್ತದೆ. ಆ ದಿವಸ ಅಂದರೆ ದಿನಾಂಕ:26.02.2002 ರಂದು ಮಧ್ಯಾಹ್ನ ತಾನು ಸದರಿ ಬೈಕ ರಸ್ತೆಬದಿಯಲ್ಲಿ ನಿಲ್ಲಿಸಿ, ಸಾಯಂಕಾಲ ಸುಮಾರು 6 ಗಂಟೆಗೆ ವಾಪಾಸ್ಸು ಆ ಸ್ಥಳಕ್ಕೆ ಬಂದಿರುತ್ತೇನೆ. ಈ ಪ್ರಕರಣ ಸಂಬಂಧಿಸಿರುವ ಆರೋಪಿಯಾದ ವಿಶ್ವನಾಥ ರೈ ಯವರ ಪರಿಚಯ ತನಗಿರಲಿಲ್ಲ. ತಾನು ತನ್ನ ಬೈಕಿನಲ್ಲಿ ಯಾವು ಸಾರಾಯಿಯನ್ನು ಕೊಂಡುಹೋಗಿರುವುದಿಲ್ಲ. ತನ್ನ ಮೋಟಾರು ಬೈಕನ್ನು ತಾನೇ ಸ್ವತಃ ಚಲಾಯಿಸಿಕೊಂಡಿದ್ದು, ಯಾರಿಗ ಉಪಯೋಗಿಸಲು ನೀಡಿರುವುದಿಲ್ಲ. ಈ ದಿನ ಸದರಿ ವಾಹನವನ್ನು ಈ ಪ್ರಾಧಿಕಾರದ ಮುಂದೆ ಹಾಜರುಪಡಿಸಿರುತ್ತೇನೆ. ತಾ ಯಾವುದೇ ತಪ್ಪು ಮಾಡಿರುವುದಿಲ್ಲ. ತನ್ನ ವಾಹನವನ್ನು ತನಗೆ ಖಾಯಂ ಆಗಿ ಬಿಡುಗಡೆಗೊಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲಿಗೆ ಉತ್ತರಿಸುತ್ತಾ ವಿಶ್ವನಾಥ ರೈಯವರು ಪ್ರಕರಣದ ಆರೋಪಿಯ ಅಣ್ಣ-ಸೀತಾರಾಮ ರೈ ಎಂಬವ ಪರಿಚಯ ತನಗೆ 15 ವರ್ಷಗಳಿಂದ ಇರುತ್ತದೆ. ಅವರು ಹೋಟೆಲ್ ಉದ್ಯಮ ನಡೆಸುತ್ತಿದ್ದರು. ವಿಶ್ವನಾಥ ರೈಯವರು ಏ ಉದ್ಯೋಗ ಮಾಡುತ್ತಾರೆ ಎಂಬುವುದು ತನಗೆ ಗೊತ್ತಿಲ್ಲ. ತನಗೆ 2 ಎಕರೆ 80 ಸೆನ್ಸ್ ಜಾಗದಲ್ಲಿ ಅಡಿಕೆ-ಗೇರು ತೋಟವಿ ತನ್ನ ಮನೆಯಲ್ಲಿ ತನ್ನ ಹೆಂಡತಿ ಮತ್ತು 3 ಮಕ್ಕಳಿದ್ದು, ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ತನಗೆ ಅಡಿಕೆ ತೋಟದಿಂ ವರ್ಷಕ್ಕೆ 8 ಕ್ವಿಂಟಾಲ್ ಅಡಿಕೆ ಬರುತ್ತದೆ. ಕ್ವಿಂಟಾಲ್‌ಗೆ ರೂ.6,000/- ರಂತೆ ಸರಾಸರಿ ಬೆಲೆ ಇರುತ್ತದೆ. ಕೃಷಿ ಖರ್ಚೆಲ್ಲಾ ತೆಗೆ ತನಗೆ ವರ್ಷಕ್ಕೆ ರೂ.10,000/- ಉಳಿತಾಯವಾಗುತ್ತದೆ. ತನ್ನ ಮೊದಲನೇ ಮಗ ಡಿಗ್ರಿ ಮಾಡಿ ಕಂಪ್ಯೂಟರ್ ಕೋರ್ಸ್ ಮಾಡುತ್ತಿದ್ದಾನೆ. ಎರಡನೇ ಮಗ ಫ್ಯಾಶನ್ ಡಿಸೈನ್ ಕೋರ್ಸ್ ಮಾಡುತ್ತಿದ್ದಾನೆ. ತನ್ನ ಮಗಳು ಕೂಡಾ ಫ್ಯಾಶನ್ ಡಿಸೈ ಕ್ಲಾಸಿಗೆ ಹೋಗುತ್ತಿದ್ದಾಳೆ. ತನ್ನ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ತಾನು ವಿದ್ಯಾಭ್ಯಾಸ ಸಾಲ ರೂ.2,00,000/- ಪಡೆದಿರುತ್ತೇನೆ. ತನ ಕೃಷಿ ಬಿಟ್ಟರೆ ಬೇರೆ ಉದ್ಯೋಗವಿಲ್ಲ. ತನ್ನ ಕೃಷಿ ಉತ್ಪನ್ನ ತನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ಸಾಕಾಗುವುದಿಲ್ಲ ಎಂದರೆ ಸರಿ, ತಾ ತೆಗೆದ ಸಾಲವನ್ನೂ ಸಹಾ ಕೃಷಿ ಉತ್ಪನ್ನದಿಂದಲೇ ತೀರಿಸುತ್ತಿದ್ದೆನೆ. ತನ್ನ ಕೃಷಿ ಉತ್ಪನ್ನ ಆದಾಯದಿಂದ ತಾನು ಪಡೆದಿರು ಸಾಲಗಳಿಗೆ ಕಂತು ಕಟ್ಟಲು ಕಷ್ಟವಾಗುತ್ತದೆ ಎಂದರೆ ಸರಿ. ತನ್ನ ಕೃಷಿ ಉತ್ಪನ್ನದಿಂದ ಸಾಲ ತೀರಿಸಲು ಸಾಕಾಗದೆ ತಾನು ಅಕ್ರ ಮದ್ಯ ಮಾರಾಟ ಮಾಡಲು ಪ್ರಾರಂಭಿಸಿದ್ದೇನೆ ಎಂದರೆ ಸರಿಯಲ್ಲ. ಒಂದೇ ಕಡೆ ಅಕ್ರಮ ಮದ್ಯ ಮಾರಾಟ ಮಾಡಿದ ಅಬಕಾರಿ ದಾಳಿ ಆಗುತ್ತದೆ ಎಂದು ತಾನು ತನ್ನ ಬೈಕಿನಲ್ಲಿ ದಿನವೂ ಒಂದೊಂದು ಸ್ಥಳದಲ್ಲಿ ಅಕ್ರಮ ಮದ್ಯ ಮಾರಾ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಅಕ್ರಮ ಮದ್ಯ ಮಾರಾಟ ಮಾಡಲು ವಿಶ್ವನಾಥ ರೈಯನ್ನು ನಾನು ನೇಮಿಸಿದ್ದೇನೆ ಎಂದ ಸರಿಯಲ್ಲ. ದಿನಾಂಕ:26.02.2002ರಂದು ವಿಶ್ವನಾಥ ರೈಯವರಿಗೆ ಬೈಕ್ ಕೊಟ್ಟು ಮದ್ಯ ಮಾರಾಟ ಮಾಡಲು ತಾ ಕಳುಹಿಸಿದ್ದೆ ಎಂದರೆ ಸರಿಯಲ್ಲ. ಆ ದಿನ ಕಾಯರ್‌ತಡ್ಕ ಎಂಬಲ್ಲಿ ವಿಶ್ವನಾಥ ರೈ ಬೈಕಿನ ಮೇಲೆ ಮದ್ಯದ ರಟ್ಟಿನ ಪೆಟ್ಟ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ ಎಂದರೆ ತನಗೆ ಗೊತ್ತಿಲ್ಲ. ಮದ್ಯ ಮಾರಾಟ ಮಾಡುವ ಸಮಯದಲ್ಲಿ ಅಬಕಾ ಇಲಾಖೆಯವರು ದಾಳಿ ಮಾಡಿ ಬೈಕನ್ನು ಮದ್ಯ ಸಮೇತ ಅಮಾನತು ಮಾಡಿರುವರು ಎಂದರೆ ತನಗೆ ಗೊತ್ತಿಲ್ಲ. ವಿಶ್ವನಾಥ ಯವರು ದಾಳಿ ಸಮಯ ತಪ್ಪಿಸಿಕೊಂಡು ಓಡಿಹೋದರು ಎಂದರೆ ತನಗೆ ಗೊತ್ತಿಲ್ಲ.

ಸುಳ್ಯ ನ್ಯಾಯಾಲಯಕ್ಕಾಗಲೀ, ಅಬಕಾರಿ ಇಲಾಖೆಯವರಿಗಾಗಲೀ ತನ್ನ ಬೈಕನ್ನು ಅಬಕಾರಿ ಅಧಿಕಾರಿಗ ವಿನಾಕಾರಣ ಅಮಾನತ್ತು ಮಾಡಿಕೊಂಡಿರುತ್ತಾರೆ ಎಂದು ತಾನು ದೂರು ಸಲ್ಲಿಸಿರುವುದಿಲ್ಲ. ಸದರಿ ದಿನ ತಾನು ತನ್ನ ಬೈಕ ವಿಶ್ವನಾಥ ರೈಗೆ ಮದ್ಯ ಮಾರಾಟ ಮಾಡಲು ಕೊಟ್ಟಿದ್ದೆ ಎಂದರೆ ಸರಿಯಲ್ಲ. ವಾಹನವನ್ನು ಮುಟ್ಟುಗೋಲು ನಡವಳಿಯಿಂ ಬಿಡುಗಡೆ ಮಾಡಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಬಕಾರಿ ಅಧಿಕಾರಿಗಳು ಈ ಪ್ರಕರಣದಲ್ಲಿ ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಲು ಯಾವುದೇ ಕಾರಣವಿರುವು ಸಾಕ್ಷ್ಯಾಧಾರ ಮತ್ತು ದಾಖಲಾತಿಗಳಿಂದ ಕಂಡು ಬರುವುದಿಲ್ಲ. ಅದರಂತೆ ಅಭಿಯೋಜಕರ, ಪ್ರಾ.ಸಾ-1 ರ ಹೇಳಿಕೆಗಳು ಮ ಹಾಜರುಪಡಿಸಲಾದ ದಾಖಲೆಗಳು ಈ ಪ್ರಕರಣದ ಆರೋಪಗಳು ನಿಸ್ಸಂದೇಹವಾಗಿ ಸಾಬೀತುಪಡುತ್ತದೆ. ಈ ಕಾರಣಗಳಿಂ ವಾಹನದ ಮಾಲೀಕರು ತನಗೆ ತಿಳಿಯದೆ ವಾಹನವನ್ನು ಅಕ್ರಮ ಮದ್ಯ ಮಾರಾಟ ಮತ್ತು ಸಾಗಾಣಿಕೆಗೆ ಉಪಯೋಗಿಸಲ್ಪಟ್ಟ ಎಂಬುವುದನ್ನು ಸಾಬೀತುಪಡಿಸಲು ಪ್ರಾಧಿಕಾರದ ಮುಂದೆ ನಡೆಸಲಾದ ರಕ್ಷಣಾ ಸಾಕ್ಷಿ ವಿಚಾರಣೆ ಹೇಳಿಕೆಯಲ್ಲಿ ತಿಳಿಸಿರುತ್ತಾ ಈ ಕಾರಣದಿಂದ ಎರಡನೇ ವಿವಾದಾಂಶವನ್ನು ಸಕಾರಾತ್ಮಕವಾಗಿ ಪರಿಗಣಿಸಬಹುದಾಗಿದೆ.

ದಿನಾಂಕ:26.02.2008ರಂದು ಅಬಕಾರಿ ಉಪ ನಿರೀಕ್ಷಕರು ದಾಳಿ ನಡೆಸಿದ ಸಂದರ್ಭದಲ್ಲಿ ವಶಪಡಿಸಿಕೊಂಡಿರುವ 80 ಎಂ.ಎಲ್.ನ 30 ಬಾಟ್ಲ ಮದ್ಯವನ್ನು ಅವರು ವಶಪಡಿಸಿಕೊಂಡಿರುವ ಮೋಟಾರ್ ಬೈಕ್‌ನಿಂದಲೇ ವಶಪಡಿಸಿಕೊಳ್ಳಲಾಗಿದೆ ಎಂಬುವುದರ ಬಗ್ಗೆ ಸ್ಥಳ ಮಹಜರ್‌ನಲ್ಲಿ ಕೇವಲ ಇಲಾಖಾ ಸಿಬ್ಬಂದಿಗಳು ಮಾತ್ರ ಸಹಿ ಮಾಡಿದ್ದು, ಸ್ಥಳದಲ್ಲಿಯೇ ಹಾಜರಿದ್ದ ಯಾವೊಬ್ಬರೂ ಖಾಸಗಿ ಸಾಕ್ಷಿದಾರರನ್ನು ಪಡೆಯದಿರುವುದು ಸಂಶಯಕ್ಕೆ ಆಸ್ಪದವಾಗಿದ್ದು, ರಸ್ತೆ ಬದಿಯಲ್ಲಿ ನಿಲ್ಲಿಸಲಾಗಿದ್ದ ಬೈಕ್‌ನಿಂದ ಸದರಿ ಮದ್ಯವನ್ನು ವಶಪಡಿಸಿಕೊಳ್ಳಲಾಗಿದೆ ಎಂಬುವುದರ ಬಗ್ಗೆ ಯಾವುದೇ ಸ್ಪಷ್ಟ ಸಾಕ್ಷ್ಯಾಧಾರಗಳು ಇಲ್ಲದಿದ್ದು, ಸ್ಥಳದಲ್ಲಿ ಆರೋಪಿ ಯಾರು ಎಂಬುವುದು ತಿಳಿಯದೇ ಬೇರೊಬ್ಬ ವ್ಯಕ್ತಿಯು ನೀಡಿರುವ ಹೇಳಿಕೆಯಂತೆ ವಿಶ್ವನಾಥ ರೈ ಎಂಬುವರನ್ನು ಆರೋಪಿಯೆಂದು ಗುರುತಿಸಿರುವ ಮಾತ್ರಕ್ಕೆ ವಾಹನವನ್ನು ಸದರಿ ಮದ್ಯದ ಸಾಗಾಣಿಕೆಗೆ ಬಳಸಲಾಗಿದೆ ಎಂಬ ಬಗ್ಗೆ ನಂಬಲು ಸಾಧ್ಯವಾಗುವುದಿಲ್ಲ ಎಂಬ ತೀರ್ಮಾನಕ್ಕೆ ಬರಬಹುದಾಗಿದೆ.

ಈ ಎಲ್ಲಾ ಕಾರಣಗಳು ಮತ್ತು ಪುರಾವೆಗಳಿಂದ ಈ ಪ್ರಕರಣದಲ್ಲಿ ಜಪ್ತುಗೊಳಿಸಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಸೂಕ್ತ ಸಾಕ್ಷ್ಯಾಧಾರಗಳು ಇಲ್ಲದಿರುವುದು ಮನವರಿಕೆಯಾಗಿರುವುದರಿಂದ, ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಎಸ್‌ಡಿಕೆ/346/ಡಿಟಿಸಿಆರ್/2007–08, ದಿನಾಂಕ:28ನೇ ಫೆಬ್ರವರಿ, 2009**

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಾಲಂ 43ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು (ನಂ.1) ಜಾರಿ ಮತ್ತು ತನಿಖೆ, ಸುಳ್ಯ ಇವರ ತಕ್ಷೀರು ಸಂಖ್ಯೆ:15/2007–08 ದಿನಾಂಕ:26.02.2008ರಲ್ಲಿ ಜಪ್ತುಪಡಿಸಿರುವ ವಾಹನ ಮೋಟಾರು ಬೈಕ್ ಸಂಖ್ಯೆ: ಕೆಎ–21–ಜೆ–3289 (ಟಿ.ವಿ.ಎಸ್.ವಿಕ್ಟರ್ ಜಿ.ಎಸ್.) ನ್ನು ಆರ್.ಸಿ. ಮಾಲೀಕರಾದ ಶ್ರೀ ತಿಮ್ಮಪ್ಪಗೌಡ ಬಿನ್ ವೆಂಕಣ್ಣಗೌಡ, ಖದೀರ್ ಹೌಸ್, ಮುರುಳ್ಯ ಮನೆ, ಸುಳ್ಯ ಇವರ ಪರ ಬಿಡುಗಡೆಗೆ ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿನಾಂಕ:02.08.2008ರಂದು ವಾಹನ ಬಿಡುಗಡೆಗೊಳಿಸಿ ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆ ಆದೇಶವನ್ನು ರದ್ದುಗೊಳಿಸಿ, ಆರ್.ಸಿ. ಮಾಲೀಕರು ಮಧ್ಯಂತರ ಬಿಡುಗಡೆ ಹೊಂದಿರುವ ಮೋಟಾರು ಬೈಕ್ ಸಂಖ್ಯೆ: ಕೆಎ–21–ಜೆ–3289 (ಟಿ.ವಿ.ಎಸ್. ವಿಕ್ಟರ್ ಜಿ.ಎಸ್.) ಕ್ಕೆ ಸಂಬಂಧಿಸಿ ಈ ಪ್ರಾಧಿಕಾರಕ್ಕೆ ಒಪ್ಪಿಸಿರುವ ಭದ್ರತೆ ಬ್ಯಾಂಕ್ ಗ್ಯಾರಂಟಿ ಪತ್ರವನ್ನು ಹಿಂದಕ್ಕೆ ನೀಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:28.02.2009ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

**ನೂರ್ ಮಹಮ್ಮದ್ ಹುಸೇನ್**
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

**ಅನುಬಂಧ–1**

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ.–1–ಶ್ರೀ ಕೃಷ್ಣ ನಾಯಕ್, ಅಬಕಾರಿ ಉಪ ನಿರೀಕ್ಷಕರು (ನಂ.1), ಸುಳ್ಯ ವಲಯ

**ಅನುಬಂಧ–2**

**ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು**

ನಿಶಾನೆ ಪಿ–1: ಸ್ಥಳ ಮಹಜರು ಪ್ರತಿ
ನಿಶಾನೆ ಪಿ–2: ಪ್ರಥಮ ಮಾಹಿತಿ ವರದಿ ಪ್ರತಿ
ನಿಶಾನೆ ಪಿ–3: ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರತಿ
ನಿಶಾನೆ ಪಿ–4: ರಾಸಾಯನಿಕ ತಜ್ಞರ ವರದಿ ಪ್ರತಿ
ನಿಶಾನೆ ಪಿ–5: ದೋಷಾರೋಪಣ ಪಟ್ಟಿಯ ಪ್ರತಿ.
ನಿಶಾನೆ ಪಿ–5(ಎ): ದೋಷಾರೋಪಣ ಪಟ್ಟಿಯಲ್ಲಿ ಸಹಿ ಇರುವ ಪ್ರತಿ.

**ಅನುಬಂಧ–3**

ವಾಹನ ಮಾಲೀಕರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು

ಡಿಡಬ್ಲ್ಯೂ–1: ಶ್ರೀ ಕೆ. ತಿಮ್ಮಪ್ಪ ಗೌಡ.

**ಅನುಬಂಧ–4**

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

–ಇಲ್ಲ–

**ನೂರ್ ಮಹಮ್ಮದ್ ಹುಸೇನ್**
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.250

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

**ಸಂಖ್ಯೆ:ಎಸ್‌ಡಿಕೆ/182/ಡಿಟಿಸಿಆರ್/1997-98, ದಿನಾಂಕ:27ನೇ ಫೆಬ್ರವರಿ, 2009**

**ಉಪಸ್ಥಿತರು:** ನೂರ್ ಮಹಮ್ಮದ್ ಹುಸೇನ್ ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

**ಫಿರ್ಯಾದುದಾರರು:**

ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು.

**ಆರೋಪಿ**

1) ಅಲೆಕ್ಸ್ ಓಸ್ ವಲ್ಡ್ ಡಿಮೊಲ್ಲೋ, ಬಿನ್ ಜೇಮ್ಸ್ ಡಿಮೆಲ್ಲೋ, ವಾಸ: ಪ್ರವಾಸಿ ಬಂಗಲೆ ಎದುರು, ಉಡುಪಿನಗರ.

2) ಗಣಪತಿ ಭಟ್ ಬಿನ್ ನಾರಾಯಣಭಟ್, ವಾಸ: ಪ್ರವಾಸಿ ಬಂಗಲೆ ಎದುರು, ಮೂಡನಿಡಂಬೂರು ಗ್ರಾಮ, ಉಡುಪಿ.

**ವಾಹನದ ಮಾಲೀಕರು**

ಶ್ರೀ ರಮೇಶ್ ಡಿ. ಕೋಟ್ಯಾನ್ ಬಿನ್ ದೇಜು ಪೂಜಾರಿ, ಕಡೆಕಾರು, ಉಡುಪಿ ತಾಲ್ಲೂಕು.

**ಪ್ರಕರಣದ ಮುಖ್ಯಾಂಶಗಳು:**

ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರು ತಮ್ಮ ಸಿಬ್ಬಂದಿಯೊಂದಿಗೆ ದಿನಾಂಕ:28.08.1997 ರಂದು ಪುತ್ತೂರು ತಾಲ್ಲೂಕು ಪಾಣಾಜೆ ಗ್ರಾಮದ ಅರ್ಲಪದವು ಎಂಬಲ್ಲಿ ರಸ್ತೆಗಾವಲು ನಡೆಸುತ್ತಿರುವಾಗ ರಾತ್ರಿ ಸುಮಾರು 3.00 ಗಂಟೆ ಸಮಯಕ್ಕೆ ಒಂದು ಟ್ರಾಕ್ಸ್ ಜೀಪು ಸಂಖ್ಯೆ: ಕೆಎ-20-ಎಂ-907 ಪುತ್ತೂರು ಕಡೆಯಿಂದ ಪಾಣಾಜೆ ಕಡೆಗೆ ಬರುತ್ತಿರುವುದನ್ನು ಕಂಡು ತಪಾಸಣೆಗೆಂದು ನಿಲ್ಲಿಸಿ ತಪಾಸಣೆಗೈದಾಗ ಅದರಲ್ಲಿ ಯಾವುದೇ ರಹದಾರಿ ಪತ್ರವಿಲ್ಲದೇ ಅಕ್ರಮವಾಗಿ ಮದ್ಯಸಾರ, ಸಾರಾಯಿ ಸ್ಯಾಚೇಟುಗಳು ಮತ್ತು ಫೆನ್ನಿಯನ್ನು ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆಹಚ್ಚಿ, ಚಾಲಕ ಹಾಗೂ ಸಹ ಚಾಲಕರ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ಜೀಪನ್ನು ಚಲಾಯಿಸಿದ ಚಾಲಕನ ಹೆಸರು ಅಲೆಕ್ಸ್ ಓಸ್‌ವಲ್ಡ್ ಡಿಮೊಲ್ಲೋ ಬಿನ್ ಜೇಮ್ಸ್ ಡಿಮೆಲ್ಲೋ, ವಾಸ: ಪ್ರವಾಸಿಬಂಗಲೆ ಎದುರು, ಉಡುಪಿ ಹಾಗೂ ಜೀಪಿನಲ್ಲಿದ್ದ ಇನ್ನೊಬ್ಬ ವ್ಯಕ್ತಿಯ ಹೆಸರನ್ನು ಕೇಳಲಾಗಿ ಗಣಪತಿ ಭಟ್ ಬಿನ್ ನಾರಾಯಣ ಭಟ್, ಪ್ರವಾಸಿ ಬಂಗಲೆ ಎದುರು, ಮೂಡನಿಡಂಬೂರು ಗ್ರಾಮ, ಉಡುಪಿ ಎಂದು ತಿಳಿಸಿರುತ್ತಾರೆ. ಇದು ಅಕ್ರಮ ಮದ್ಯಸಾರ, ಸಾರಾಯಿ ಸ್ಯಾಚೇಟು ಹಾಗೂ ಫೆನ್ನಿ ಸಾಗಾಣಿಕೆಯಾಗಿರುವುದರಿಂದ ಈ ಕೆಳಕಂಡ ಸೊತ್ತುಗಳನ್ನು ವಶಪಡಿಸಿಕೊಂಡು ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11 ರೀತ್ಯಾ ಉಲ್ಲಂಘನೆ ಹಾಗೂ ಕಲಂ 32 ಮತ್ತು 43ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಆರೋಪಿಗಳ ವಿರುದ್ಧ ತಕ್ಷೀರು ಸಂಖ್ಯೆ 99/1997, ದಿನಾಂಕ:29.08.1997 ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು, ಮುಂದಿನ ತನಿಖೆಗಾಗಿ ಸದರಿ ಸೊತ್ತುಗಳನ್ನು ಈ ಪ್ರಾಧಿಕಾರದ ಆದೇಶದನುಸಾರ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರಿಗೆ ಹಸ್ತಾಂತರಿಸಿರುತ್ತಾರೆ.

**ವಶಪಡಿಸಿಕೊಂಡ ಸೊತ್ತುಗಳು**

1) 100 ಎಂಎಲ್‌ನ 1400 ಸಾರಾಯಿ ಸ್ಯಾಚೇಟುಗಳು-140 ಲೀಟರು ಸಾರಾಯಿ

2) ಎ.ಜೆ.ಫೆನ್ನಿ-180 ಎಂಎಲ್‌ನ 384 ಸೀಸೆಗಳಲ್ಲಿ ಒಟ್ಟು-69.120 ಲೀಟರು ಫೆನ್ನಿ

3) 35 ಲೀಟರು ಗಾತ್ರದ 15 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಒಟ್ಟು-525 ಲೀಟರು ಮದ್ಯಸಾರ

4) ಸಾಗಾಣಿಕೆಗೆ ಬಳಸಿದ ಟ್ರಾಕ್ಸ್ ಜೀಪು ಸಂಖ್ಯೆ: ಕೆಎ-20-ಎಂ-907.

ಸದರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡ ಸೊತ್ತುಗಳಲ್ಲಿ ಮದ್ಯಸಾರ, ಸಾರಾಯಿ ಹಾಗೂ ಫೆನ್ನಿಯನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ಸದರಿ ಮಾದರಿಯನ್ನು ವಿಶ್ಲೇಷಿಸಿದ ಕರ್ನಾಟಕ ಸರ್ಕಾರದ ಸಹಾಯಕ ರಾಸಾಯನಿಕ ತಜ್ಞರು ಮಂಗಳೂರುರವರು ದಿನಾಂಕ:28.10.1997ರ ವರದಿಯಲ್ಲಿ ಮದ್ಯಸಾರದಲ್ಲಿ ಮದ್ಯಸಾರ ಪ್ರಮಾಣ 66 ಡಿಗ್ರಿ ಒ.ಪಿ. ಫೆನ್ನಿಯ ಮದ್ಯಸಾರದ ಪ್ರಮಾಣ 25 ಡಿಗ್ರಿ ಯು.ಪಿ. ಮತ್ತು ಸಾರಾಯಿಯ ಮದ್ಯಸಾರದ ಪ್ರಮಾಣ 47 ಡಿಗ್ರಿ ಯು.ಪಿ. ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ತನಿಖಾ ವರದಿ ಸಂಖ್ಯೆ:18/97-98 ದಿನಾಂಕ:14.11.1997ರಲ್ಲಿ ವಾಹನವನ್ನು ಹೊರತುಪಡಿಸಿ ಉಳಿದ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ. ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ ಅಂದಿನ ಪ್ರಾಧಿಕಾರದ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರುರವರ ನ್ಯಾಯಾಲಯದ ಆದೇಶ ಸಂಖ್ಯೆ: ಎಸ್‌ಡಿಕೆ:182: ಡಿಟಿಸಿಆರ್:97-98 ದಿನಾಂಕ:25.11.1997ರ ಆದೇಶದಲ್ಲಿ ಪ್ರಕರಣದಲ್ಲಿ ಜಪ್ತು ಪಡಿಸಿಕೊಂಡ ವಾಹನ

ಮುಟ್ಟುಗೋಲು ಪ್ರಕ್ರಿಯೆಯನ್ನು ಕಾಯ್ದಿರಿಸಿ, ಉಳಿದ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯಸಾರವನ್ನು ಮೈಸೂಗರ್ ಸಾರಾಯಿ ಸಂಸ್ಕರಣಾ ಘಟಕಕ್ಕೆ ಹಂಚಿಕೆ ಮಾಡಲು ಹಾಗೂ ಫೆನ್ನಿಯನ್ನು ಹರಾಜಿನ ಮೂಲಕ ವಿಲೇವಾರಿಗೊಳಿಸಲು ಮತ್ತು ಸಾರಾಯಿಯನ್ನು ನಾಶಪಡಿಸಲು ಆದೇಶಿಸಿರುತ್ತಾರೆ.

ಸದರಿ ವಾಹನದ ಆರ್.ಸಿ. ಮಾಲೀಕರಾದ ಶ್ರೀ ರಮೇಶ್ ಡಿ. ಕೋಟ್ಯಾನ್ ಬಿನ್: ದೇಜು ಕರ್ಕೇರಾ, ಕಡೆಕಾರು, ಉಡುಪಿ-576104 ಇವರು ತಮ್ಮ ವಕೀಲರ ಮುಖಾಂತರ ದಿನಾಂಕ:04.10.1997ರಂದು ಅರ್ಜಿಯನ್ನು ಸಲ್ಲಿಸಿ, ಸದರಿ ಅರ್ಜಿಯಲ್ಲಿ ತನ್ನ ವಾಹನವನ್ನು ತನ್ನ ಮಿತ್ರನಿಗೆ ನೀಡಿದ್ದು ಅವರು ತನ್ನ ವಾಹನದಲ್ಲಿ ಅಕ್ರಮ ಸಾಗಾಣಿಕೆಗೆ ಬಳಸಿರುವ ಬಗ್ಗೆ ತನಗೆ ತಿಳಿದಿರುವುದಿಲ್ಲ ತಾನು ಯಾವುದೇ ಅಪರಾಧ ಎಸಗಿಲ್ಲವೆಂದು ವಶಪಡಿಸಿಕೊಂಡ ವಾಹನವನ್ನು ತನ್ನ ಸುಪರ್ಧಿಗೆ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರಿಗೆ ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43 ಜಿ ರಂತೆ ಕಾರಣ ಕೇಳಿ ನೋಟೀಸನ್ನು ದಿನಾಂಕ:16.10.1997 ರಂದು ನೊಂದಣಿ ಅಂಚೆಯ ಮೂಲಕ ನೀಡಲಾಗಿದ್ದು, ಅರ್ಜಿದಾರರು ಈ ಪ್ರಾಧಿಕಾರದಿಂದ ನೀಡಿರುವ ಕಾರಣ ಕೇಳಿ ನೋಟೀಸಿಗೆ ಉತ್ತರವನ್ನು ನೀಡಿರುತ್ತಾರೆ. ಸದರಿ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಿದ ಅಂದಿನ ಪ್ರಾಧಿಕಾರವು ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಿದ್ದಲ್ಲಿ ಇಂತಹ ದುಷ್ಕೃತ್ಯದಲ್ಲಿ ಮರುಭಾಗಿಯಾಗುವರೆಂಬ ಸಂಶಯದ ಮೇರೆಗೆ ವಾಹನವನ್ನು ಅರ್ಜಿದಾರರ ಸುಪರ್ಧಿಗೆ ನೀಡಲು ಕೋರಿದ ಮನವಿಯನ್ನು ತಿರಸ್ಕರಿಸಿ ದಿನಾಂಕ:19.12.1997ರಂದು ಆದೇಶ ನೀಡಿರುತ್ತಾರೆ.

ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ಆದೇಶ ಸಂಖ್ಯೆ: ಎಸ್‌ಡಿಕೆ/182/ಡಿಟಿಸಿಆರ್/97-98 ದಿನಾಂಕ:19.12.1997ರ ಆದೇಶದಲ್ಲಿ ಅರ್ಜಿದಾರರ ಮನವಿಯನ್ನು ತಿರಸ್ಕರಿಸಿರುವ ಮೇರೆಗೆ ಸದರಿ ಆದೇಶದ ವಿರುದ್ಧ ಅರ್ಜಿದಾರರು ಮಾನ್ಯ ಸೆಷನ್ಸ್ ನ್ಯಾಯಾಲಯದಲ್ಲಿ ಕ್ರಿಮಿನಲ್ ಅಪೀಲ್ ಸಂಖ್ಯೆ:193/97ರ ಮುಖಾಂತರ ಮೊರೆಹೊಕ್ಕು ಆದೇಶದ ಬಗ್ಗೆ ಮೇಲ್ಮನವಿ ಸಲ್ಲಿಸಿದ್ದು, ಮಾನ್ಯ ಸೆಷನ್ಸ್ ನ್ಯಾಯಾಧೀಶರು ತಮ್ಮ ಆದೇಶ ಸಂಖ್ಯೆ: ಕ್ರಿಮಿನಲ್ ಅಪೀಲ್ ನಂ.193/97 ದಿನಾಂಕ:19.02.1998ರ ಈ ಪ್ರಾಧಿಕಾರವು ಹೊರಡಿಸಿದ ಆದೇಶವನ್ನು ತಳ್ಳಿ ಹಾಕಿ ಅಧಿಕೃತ ಅಧಿಕಾರಿಗಳು ವಶಪಡಿಸಿಕೊಂಡ ಟ್ರಾಕ್ಸ್ ಜೀಪು ಸಂಖ್ಯೆ: ಕೆಎ-20-ಎಂ-907 ನ್ನು ಅರ್ಜಿದಾರರ ಸುಪರ್ದಿಗೆ ಷರತ್ತುಗಳಿಗೆ ಬದ್ಧರಾದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಆದೇಶ ನೀಡಿರುತ್ತಾರೆ. ಮಾನ್ಯ ಸೆಷನ್ಸ್ ನ್ಯಾಯಾಲಯದ ಆದೇಶದ ಮೇರೆಗೆ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದ ಆದೇಶ ಸಂಖ್ಯೆ: ಎಸ್‌ಡಿಕೆ: 182: ಡಿಟಿಸಿಆರ್:97-98, ದಿನಾಂಕ:27.03.98ರಲ್ಲಿ ಅರ್ಜಿದಾರರು 1,00,000/- ಇಂಡೆಮಿನ್ನಿಟಿ ಬಾಂಡ್ ಹಾಗೂ ಇದೇ ಮೊತ್ತಕ್ಕೆ ಸಮಾನವಾದ ಇಬ್ಬರು ಸ್ಥಳೀಯ ಜಾಮೀನುದಾರರನ್ನು ಸಲ್ಲಿಸಿದ್ದಲ್ಲಿ ಈ ಕೆಳಕಂಡ ಷರತ್ತಿಗೊಳಪಟ್ಟು ಅರ್ಜಿದಾರರ ವಶಕ್ಕೆ ವಾಹನವನ್ನು ತಾತ್ಕಾಲಿಕವಾಗಿ ಬಿಡುಗಡೆ ಮಾಡಲು ಆದೇಶಿಸಿದೆ.

**ಷರತ್ತುಗಳು**

1) ವಾಹನದ ಬಿಡಿಭಾಗಗಳನ್ನು ಮತ್ತು ಬಣ್ಣವನ್ನು ಯಾವುದೇ ಕಾರಣಕ್ಕೂ ಬದಲಾಯಿಸಬಾರದು.

2) ಸದರಿ ವಾಹನದ ಬಗ್ಗೆ ಇರುವ ಮುಟ್ಟುಗೋಲು ನಡವಳಿಗಳು ಅಂತಿಮವಾಗಿ ಇತ್ಯರ್ಥವಾಗುವವರೆಗೆ ವಾಹನವನ್ನು ಯಾರಿಗೂ ಮಾರಾಟ ಮಾಡುವುದಾಗಲೀ ಪರಭಾರೆ ಮಾಡುವುದಾಗಲೀ ಮಾಡಕೂಡದು.

3) ಪ್ರಾಧಿಕಾರವು ಯಾವುದೇ ಸಂದರ್ಭದಲ್ಲಿ ವಾಹನವನ್ನು ಹಾಜರುಪಡಿಸುವಂತೆ ಆದೇಶಿಸಿದ ಪಕ್ಷದಲ್ಲಿ ಸದರಿ ವಾಹನವನ್ನು ಪ್ರಾಧಿಕಾರದ ಮುಂದೆ ಹಾಜರುಪಡಿಸತಕ್ಕದ್ದು.

4) ಈ ಮೇಲಿನ ಷರತ್ತುಗಳನ್ನು ಉಲ್ಲಂಘನೆ ಮಾಡಿದ ಪಕ್ಷದಲ್ಲಿ ಈ ಪ್ರಾಧಿಕಾರಕ್ಕೆ ನೀಡಿರುವ ಇಂಡೆಮಿನ್ನಿಟಿ ಬಾಂಡ್ ಹಾಗೂ ಸ್ವಾಲೆಂಟ್ ಸ್ಯೂರಿಟಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

ನಂತರ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಸರ್ಕಾರದ ಅಭಿಯೋಜನೆ ಪರ ಎರಡು ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಅವರುಗಳ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಪ್ರತಿರಕ್ಷೆ ಸಾಕ್ಷಿಗಳು ಹಾಜರಾಗದೇ ಇದ್ದುದರಿಂದ ಪ್ರತಿರಕ್ಷೆ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ. ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕೆಳಗಿನ ವಿವಾದಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾ ಅಂಶಗಳು ಈ ಕೆಳಗಿನಂತಿರುತ್ತದೆ.

1) ದಿನಾಂಕ:29.08.1997 ರಂದು ಟ್ರಾಕ್ಸ್ ಜೀಪು ಸಂಖ್ಯೆ: ಕೆಎ-20-ಎಂ-907ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ 525.000 ಲೀ. ಮದ್ಯಸಾರ, 69,120 ಲೀ ಫೆನ್ನಿ ಮತ್ತು 100 ಎಂಎಲ್‌ನ 1400 ಸಾರಾಯಿ ಸ್ಯಾಚೇಟುಗಳನ್ನು ಸಾಗಾಣಿಕೆ ಮಾಡಲಾಗಿದೆಯೇ?

2) ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಅಕ್ರಮ ಮದ್ಯಸಾರ, ಫೆನ್ನಿ ಮತ್ತು ಸಾರಾಯಿ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?

3) ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಈ ಮೇಲಿನ ಪರಿಶೀಲನಾ ಅಂಶಗಳನ್ನು ಲಭ್ಯವಿರುವ ಸಾಕ್ಷ್ಯಾಧಾರಗಳ ಮೇಲೆ ಈ ಕೆಳಗಿನಂತೆ ಉತ್ತರಿಸಿರುತ್ತೇನೆ.

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

**ಪ್ರಾ.ಸಾ–1:**

ಶ್ರೀ ಅಬ್ಬಾಸ್, ಸಹಾಯಕ ಆರಕ್ಷಕ ನಿರೀಕ್ಷಕರು, ಪೂರ್ವ ಠಾಣೆ, ಕದ್ರಿ ಮಂಗಳೂರು ರವರು ದಿನಾಂಕ:20.03.2001ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಇವರು ಪ್ರಕರಣದ ಫಿರ್ಯಾದುದಾರರಾಗಿದ್ದು, ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ. ತಾನು ದಿ:1992ರಿಂದ 1998ರವರೆಗೆ ಮುಖ್ಯ ರಕ್ಷಕನಾಗಿ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದೆ. ದಿನಾಂಕ:29.08.1997ರಂದು ಮಧ್ಯರಾತ್ರಿ ಸಮಯ ಪಿ.ಎಸ್.ಐರವರು ತನ್ನನ್ನು ಮತ್ತು ಎಸ್.ಸಿ. 428 ಪಿ.ಸಿ. 453 ಮತ್ತು ಇತರ ಕೆಲವರನ್ನು ಒಂದು ಕಡೆ ಅಕ್ರಮವಾಗಿ ಮದ್ಯಸಾಗಾಣಿಕೆ ಆಗುತ್ತಿದೆ ಎಂದು ಖಚಿತ ವರ್ತಮಾನ ಬಂದಿದೆ, ಅಲ್ಲಿಗೆ ಹೋಗುವ ಸಲುವಾಗಿ ತನಿಖೆಗೆ ಬೇಕಾದ ಎಲ್ಲಾ ವಸ್ತುಗಳನ್ನು ಸಿದ್ದಪಡಿಸಲು ಹೇಳಿದರು. ತನಿಖೆಗೆ ಬೇಕಾದ ಎಲ್ಲಾ ಸ್ವತ್ತುಗಳೊಂದಿಗೆ ಸಬ್ ಇನ್ಸ್‌ಪೆಕ್ಟರ್ ಜೊತೆಯಲ್ಲಿ ಮಧ್ಯರಾತ್ರಿ ಹೋಗಿ ಪಾಣಾಜೆ ಗ್ರಾಮದ ಮಾರ್ಲಾಪದವು ಬಾಂಬೆಸ್ಕಾಡ್ ಅಂಗಡಿ ಬಳಿ ರಸ್ತೆ ಬಳಿ ಹೊಂಚುಹಾಕುತ್ತಾ ನಿಂತಿದ್ದೆವು. ಹತ್ತಿರದ ಅಂಗಡಿಗಳು ಬಂದ್ ಆಗಿತ್ತು. ರಸ್ತೆ ಬದಿ ವಿದ್ಯುತ್ ದೀಪ ಉರಿಯುತ್ತಿತ್ತು. ಅನೇಕ ವಾಹನಗಳನ್ನು ಚೆಕ್ ಮಾಡಿದೆವು. ಯಾವುದೇ ಅಪರಾಧ ಕಾಣಬರದ ಕಾರಣ ಬಿಟ್ಟೆವು. ಮಧ್ಯರಾತ್ರಿ 3–00 ಗಂಟೆ ಅಂದಾಜಿಗೆ ಪುತ್ತೂರು ಕಡೆಯಿಂದ ಕೇರಳಕ್ಕೆ ಪಾಣಾಜೆ ರಸ್ತೆಯಿಂದಾಗಿ ಒಂದು ಟ್ಯಾಕ್ಸ್ ಜೀಪು ಅತೀ ವೇಗವಾಗಿ ಬರುವುದನ್ನು ಕಂಡು ತಪಾಸಣೆ ಸಲುವಾಗಿ ಅದನ್ನು ನಿಲ್ಲಿಸುವರೇ ಸಮವಸ್ತ್ರದಲ್ಲಿದ್ದ ನಾವು ಸನ್ನೆ ಮಾಡಿದೆವು. ನಮ್ಮ ಸನ್ನೆ ನೋಡಿಯೂ ಚಾಲಕ ವಾಹನ ನಿಲ್ಲಿಸದೇ ಮುಂದೆ ಹೋದ ತಕ್ಷಣ ಅಲ್ಲಿ ಇದ್ದ ಜಯ ಎಂಬುವರ ಖಾಸಗಿ ಜೀಪಿನಲ್ಲಿ ನಾವೆಲ್ಲ ಕುಳಿತು ಆ ವಾಹನ ಬೆನ್ನಟ್ಟಬೇಕೆಂದು ತಿಳಿಸಿದ ಮೇರೆಗೆ ಅವರು ವಾಹನ ಬೆನ್ನಟ್ಟಿಕೊಂಡು ಹೋಗುತ್ತಾ ಅಲ್ಲಿಂದ ಸುಮಾರು ಅರ್ಧ ಕಿ.ಮೀ. ಮುಂದೆ ಪಾಣಾಜೆ ಚೆಕ್ ಪೋಸ್ಟ್ ಬಳಿ ಅದನ್ನು ಬೆನ್ನಟ್ಟಿ ಅದರ ಮುಂದೆ ನಾವಿದ್ದ ವಾಹನ ನಿಲ್ಲಿಸಿ ಆ ವಾಹನವನ್ನು ತಡೆದು ನಿಲ್ಲಿಸಿದ್ದೆವು. ಅದರ ನಂಬರ್ ನೋಡಲಾಗಿ ಕೆಎ–20–ಎಂ–907 ಆಗಿತ್ತು. ಅದರಲ್ಲಿ ಚಾಲಕ ಮತ್ತು ಇನ್ನೊಬ್ಬ ವ್ಯಕ್ತಿ ಇದ್ದನು. ಚಾಲಕನ ಹೆಸರು ಅಲೆಕ್ಸ್ ಓಸ್‌ವಾಲ್ಡ್ ಡೆಮೊಲ್ಲೋ ಮತ್ತು ಪಕ್ಕದ ವ್ಯಕ್ತಿ ಗಣಪತಿ ಭಟ್ ಎಂದು ತಿಳಿಸಿದ. ನಾವು ಸನ್ನೆ ಮಾಡಿದಾಗ ನೀವು ಯಾಕೆ ನಿಲ್ಲಿಸಲಿಲ್ಲವೆಂದು ಕೇಳಿದಾಗ ಅವರು ಸಮರ್ಪಕ ಉತ್ತರ ಕೊಡದ ಕಾರಣ ನಾವು ಅನುಮಾನಗೊಂಡು ಪಂಚರನ್ನಾಗಿ ಕರೆದುಕೊಂಡು ಬರುವರೇ ಪೊಲೀಸ್ ಉಪ ನಿರೀಕ್ಷಕರು ಸಿಬ್ಬಂದಿಯವರಿಗೆ ತಿಳಿಸಿದರು. ಸಿಬ್ಬಂದಿಯವರ ಆಸುಪಾಸಿನಲ್ಲಿ ಹುಡುಕಾಡಿ ಮರಳಿ ಬಂದು ಯಾವುದೇ ಸಾಕ್ಷಿಗಳು ಲಭ್ಯವಿಲ್ಲವೆಂದು ಹೇಳಿದರು. ನಮ್ಮ ಸಮಕ್ಷಮದಲ್ಲಿ ಪೊಲೀಸ್ ನಿರೀಕ್ಷಕರು ಸದರಿ ವಾಹನ ತಪಾಸಣೆ ಮಾಡಲಾಗಿ ಅದರಲ್ಲಿ ಬಿಳಿ ಬಣ್ಣದ 15 ಪ್ಲಾಸ್ಟಿಕ್ ಕ್ಯಾನುಗಳು ಇದ್ದು ಪ್ರತಿಯೊಂದರಲ್ಲೂ 35 ಲೀಟರು ನಷ್ಟು ಮದ್ಯಸಾರ ಇತ್ತು. ಅಲ್ಲದೇ 8 ರಟ್ಟಿನ ಪೆಟ್ಟಿಗೆಗಳಿದ್ದು ಅದನ್ನು ಬಿಡಿಸಿ ನೋಡಲಾಗಿ ಪ್ರತಿಯೊಂದರಲ್ಲೂ 48 ಬಾಟಲಿಗಳಿದ್ದು, ಒಂದೊಂದರಲ್ಲೂ 180 ಎಂಎಲ್ ಇರುವುದು ಕಂಡುಬಂತು. ಅಲ್ಲದೇ 5 ಬ್ಯಾಗ್‌ಗಳಿದ್ದು ಅವುಗಳನ್ನು ಬಿಚ್ಚಿ ನೋಡಲಾಗಿ 4 ಬ್ಯಾಗ್‌ಗಳಲ್ಲಿ ಒಂದೊಂದರಲ್ಲಿ ತಲಾ 300 ರಂತೆ 100 ಎಂಎಲ್ ಹಿಡಿಯುವಂಥ 400 ತೊಟ್ಟೆ ಸಾರಾಯಿ ಇತ್ತು. ಇನ್ನೊಂದರಲ್ಲಿ 100 ಎಂಎಲ್‌ನ ಹಿಡಿಯುವ 200 ತೊಟ್ಟೆ ಶರಾಬು ಇತ್ತು. ಇನ್ನೊಂದರಲ್ಲಿ 100 ಎಂಎಲ್ ಹಿಡಿಯುವ 200 ತೊಟ್ಟೆ ಶರಾಬು ಇತ್ತು. ಮೇಲೆ ಹೇಳಿದ 35 ಪ್ರತಿ ಕ್ಯಾನ್‌ಗಳಿಂದ 180 ಎಂಎಲ್‌ನ ಮಾದರಿ ಮದ್ಯಸಾರ ತೆಗೆದು ಸೀಲ್ ಮಾಡಿ ಬಟ್ಟೆ ಸುತ್ತಿ ಎಸ್.ಹೆಚ್.ಓ. ಸೀಲು ಹಾಕಲಾಯಿತು. 8 ಬಾಕ್ಸ್‌ಗಳಿಂದಲೂ ಸ್ಯಾಂಪಲ್‌ಗಾಗಿ ತೆಗೆದು ಅವುಗಳನ್ನು ಬಟ್ಟೆ ಸುತ್ತಿ ಎಸ್.ಹೆಚ್.ಓ. ಸೀಲು ಮಾಡಲಾಯಿತು. 5 ಪ್ಲಾಸ್ಟಿಕ್ ಬ್ಯಾಗ್‌ಗಳಿಂದ ತಲಾ 2ರಂತೆ ಸಾರಾಯಿ ತೊಟ್ಟೆಗಳನ್ನು ತೆಗೆದು ಬಟ್ಟೆದಾರ ಸುತ್ತಿ ಎಸ್.ಹೆಚ್.ಓ. ಸೀಲು ಮಾಡಲಾಯಿತು. ಈ ಮದ್ಯೆ ಆರೋಪಿಗಳನ್ನು ವಿಚಾರಿಸಲಾಗಿ ಕೇರಳಕ್ಕೆ ಸಾಗಿಸುವುದಾಗಿ ಹೇಳಿದರು. ಈ ಬಗ್ಗೆ ಅವರಲ್ಲಿ ಪರ್ಮಿಟು ರಹದಾರಿ ಪತ್ರ ಇಲ್ಲವೆಂದು ತಿಳಿಸಿದರು. ಮೇಲಿನ ಸ್ವತ್ತುಗಳನ್ನು ಸ್ವಾಧೀನಪಡಿಸಿ, ಆರೋಪಿಗಳನ್ನು ದಸ್ತಗಿರಿ ಮಾಡಿದೆನು. ಸ್ವಾಧೀನಪಡಿಸಿದ 180 ಎಂಎಲ್‌ನ 8 ಬಾಕ್ಸ್‌ಗಳಲ್ಲಿದ್ದ ಫೆನ್ನಿಯ ಬಾಟ್ಲಿಗಳ ಮೇಲೆ ಎ.ಜೆ. ಫೆನ್ನಿ ಎಂದು ಅದರ ವಿಳಾಸ ಬರೆದಿರುತ್ತದೆ. ಸ್ಥಳದಲ್ಲಿ 3 ರಿಂದ 5ರ ತನಕ ಮಹಜರು ಮಾಡಿದೆನು. ವಶಪಡಿಸಿಕೊಂಡ ಸ್ವತ್ತುಗಳ ಮೌಲ್ಯ ರೂ.30,000 ವಾಹನದ ಮೌಲ್ಯ ರೂ.2,000/– ಆರೋಪಿಗಳನ್ನು ಬಂಧಿಸಿ ಸ್ವತ್ತುಗಳೊಂದಿಗೆ ಠಾಣೆಗೆ ಬಂದು ಸ್ವತ್ತು ಸ್ವಾಧೀನ ಕ್ರಮ ಜರುಗಿಸಿದ ಕುರಿತು ವರದಿ ಒಳಗೊಂಡ ಯದಾಸ್ತಿಗೆ ನನ್ನ ರುಜು ಮಾಡಿರುತ್ತೇನೆ. ಅದನ್ನು ಈಗ ನೋಡಿದ್ದು ನಿಶಾನೆ ಪಿ–1 ಎಂದು, ನನ್ನ ಸಹಿಯನ್ನು ನಿಶಾನೆ ಪಿ–1ಎ ಎಂದು ಗುರುತಿಸಲಾಯಿತು. ವಾಹನ ಮತ್ತು ಸ್ವತ್ತುಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಅಭಿಯೋಗದ ಪರ ಪಿಡಬ್ಲ್ಯೂ–1ರವರು ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಕೈಗೊಂಡ ಬಗ್ಗೆ ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ.

ಅರ್ಜಿದಾರರ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತಾ ಅಬಕಾರಿ ನಿರೀಕ್ಷಕರು ಪುತ್ತೂರು ವಲಯರವರಿಂದ ದೃಢೀಕರಿಸಲ್ಪಟ್ಟ ಪ್ರ.ಮಾ.ವ. ಯ ಜೆರಾಕ್ಸ್ ಪ್ರತಿಯನ್ನು 15ನೇ ಗೆರೆಯಲ್ಲಿ ಸದರಿ ಜೀಪನ್ನು ಬೆಳಿಗ್ಗೆ 5–30 ಗಂಟೆಯಿಂದ ತಪಾಸಣೆ ಮಾಡಿರುವುದು ಎಂದು ಕಂಡುಬರುತ್ತದೆ. ಅದು ಜಜ್ಜಿದಂತೆ ಕಂಡುಬರುತ್ತದೆ. ಆ ಸಮಯವನ್ನು ಮಹಜರಿನ ಕೊನೆಯಲ್ಲಿ ನಿರ್ದಿಷ್ಟ ಸಮಯದಲ್ಲಿ ಬರೆಯಲಾಗಿದೆ, ತಾವು ಠಾಣೆಯಿಂದ ರಾತ್ರಿ 24–00 ಗಂಟೆಗೆ ಹೊರಟಿದ್ದೆವು,

ಮಹಜರಿನಲ್ಲಿ ತೋರಿಸಿದಂತೆ ಖಚಿತ ವರ್ತಮಾನ ಪುತ್ತೂರು ಕಡೆಯಿಂದ ಪಾಣಾಜೆ ರಸ್ತೆಯಾಗಿ ಕೇರಳ ರಾಜ್ಯಕ್ಕೆ ಅಕ್ರಮವಾಗಿ ಸಾರಾಯಿ ಸಾಗಾಣಿಕೆ ನಡೆಯುತ್ತಿದೆಯೆಂಬುದಾಗಿದೆ. ಪುತ್ತೂರಿನಿಂದ ಪಾಣಾಜೆಗೆ ಹೋಗಲು ಎರಡು ದಾರಿ ಇದೆ. ಅಲ್ಲಿ ತಾವು 25 ನಿಮಿಷಕ್ಕೆ ತಲುಪಿದೆವು. ಅಲ್ಲಿಗೆ ಖಾಸಗಿ ವಾಹನದಲ್ಲಿ ಹೋಗಿದ್ದೇವೆ, ಖಾಸಗಿ ವಾಹನ ಜಯ ಎಂಬವರದ್ದು ಆಗಿದೆ, ಆ ಖಾಸಗಿ ವಾಹನ ಬಾಡಿಗೆಗೆ ಗೊತ್ತು ಮಾಡಿದ್ದು ತನಗೆ ತಿಳಿದಿಲ್ಲ, ತಾವು ಪಂಚರು ಸ್ಥಳದಲ್ಲಿ ಸಿಗಬಹುದು ಎಂಬ ಭಾವನೆಯಿಂದ ಹೋದೆವು ಮಧ್ಯರಾತ್ರಿ ಆದ ಕಾರಣ ಯಾರೂ ಸಿಗಲಿಲ್ಲ, ಬೇರೆ ವಾಹನ ತಪಾಸಣೆ ಮಾಡಿದ ವಿಷಯ ಮಹಜರಿನಲ್ಲಿ ವರದಿಯಲ್ಲಿ ಬರೆಯಲಿಲ್ಲ, ನಾವೆಲ್ಲರೂ ವಾಹನ ನಿಲ್ಲಿಸಲು ಸನ್ನೆ ಮಾಡಿದ್ದೇವೆ. ಸದರಿ ಜೀಪನ್ನು ರಸ್ತೆಯ ಪಕ್ಕದಲ್ಲಿ ರಸ್ತೆಗೆ ಮುಖ ಮಾಡಿ ನಿಲ್ಲಿಸಿದೆವು, ಆ ದಿವಸ ಮಾತ್ರ ಜಯ ಎಂಬುವರ ಖಾಸಗಿ ಜೀಪು ಇತ್ತು. ಬಿಡಲು ಅವರಿಗೆ ಅವಕಾಶವಿರಲಿಲ್ಲ. ಆ ಸ್ಥಳದಿಂದ ಸುಮಾರು 150 ಅಡಿ ದೂರದಲ್ಲಿ ಒಂದು ಐದಾರು ಮನೆಗಳಿವೆ. ಪಂಚರನ್ನು ಕರೆತರಲು ಸಿಬ್ಬಂದಿಯವರನ್ನು ಕಳುಹಿಸಿದ್ದೆ. ತಾವು ಹೋದ ಖಾಸಗಿ ಜೀಪಿನ ಜಯರವರನ್ನು ಪಂಚರನ್ನಾಗಿ ಯಾಕೆ ತೆಗೆದುಕೊಂಡಿರುವುದಿಲ್ಲ ಎಂಬುದು ತಿಳಿದಿಲ್ಲ, ನಿಶಾನೆ ಪಿ-1 ನೋಡಿದೆ. ಅದರಲ್ಲಿ ಅವರ ಸಹಿ ಇಲ್ಲ. ಸದರಿ ಜಯನನ್ನು ಪಂಚರಾಗಿ ಸಹಿ ಪಡೆಯದೇ ಇರುವುದಕ್ಕೆ ಕಾರಣ ನನಗೆ ತಿಳಿದಿಲ್ಲ. ಮತ್ತೆ ಪುನಃ ಬೆಳಗ್ಗೆ 5-30ಕ್ಕೆ ನಾವು ಠಾಣೆಗೆ ಬಂದೆವು. ಆರೋಪಿಗಳನ್ನು ವಿಚಾರಿಸಿದಾಗ ಸದರಿ ಮಾಲನ್ನು ಎಲ್ಲಿಂದ ತಂದದ್ದು, ಯಾರು ಕಳುಹಿಸಿಕೊಟ್ಟದ್ದು ಎಂದು ವಿಚಾರಣೆ ಮಾಡಿದ್ದಾರೆಯೇ ಎನ್ನುವುದು ತನಗೆ ಗೊತ್ತಿಲ್ಲ. ವಾಹನ ಮಾಲೀಕ ಯಾರೆಂದು ಕೇಳಿಲ್ಲ, ಉಪ ನಿರೀಕ್ಷಕರು ಕೇಳಿದ್ದಾರೆಂದರೆ ತನಗೆ ಗೊತ್ತಿಲ್ಲ, ಆ ಸ್ಥಳದ ಬಗ್ಗೆ ನಿಶಾನೆ ಪಿ-1 ನಲ್ಲಿ ಅದರ ಚೆಕ್ ಬಂಧಿ ವಿವರಗಳು ಇರುವುದಿಲ್ಲ. ನಿಶಾನೆ ಪಿ-1ರಲ್ಲಿ ಆ ಸ್ಥಳದಲ್ಲಿ ವಿದ್ಯುತ್ ದೀಪ ಉರಿಯುತ್ತಿತ್ತು ಎಂಬುದನ್ನು ಬರೆದಿರುವುದಿಲ್ಲ. ಆ ಸಮಯ ಎಲ್ಲರೂ ಸಮವಸ್ತ್ರದಲ್ಲಿದ್ದೆವು, ಉಪನಿರೀಕ್ಷಕರು ಸಿಬ್ಬಂದಿಯವರನ್ನು ಪಂಚರನ್ನು ಕರೆದುಕೊಂಡು ಬರಲು ಕಳುಹಿಸಿದರು ಎಂಬ ವಿಷಯ ನಿಶಾನೆ ಪಿ-1ರಲ್ಲಿ ಕಾಣಿಸಿರುವುದಿಲ್ಲ. ಸದರಿ ವಾಹನದಿಂದ ಯಾವುದೇ ಮಾಲನ್ನು ಜಪ್ತಿ ಮಾಡಿಲ್ಲವೆಂದರೆ ಸರಿಯಲ್ಲ, ನಿಶಾನೆ ಪಿ-1ನ್ನು ಠಾಣೆಯಲ್ಲಿ ತಯಾರಿಸಿದ್ದೇನೆಂದರೆ ಸರಿಯಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲವೆಂದು ತಮ್ಮ ಸಾಕ್ಷ್ಯವನ್ನು ನುಡಿದಿರುತ್ತಾರೆ.

**ಪ್ರಾ.ಸಾ-2:**

ಶ್ರೀ ಕೆ.ಎನ್. ಆಳ್ವ, ನಿವೃತ್ತ ಅಬಕಾರಿ ನಿರೀಕ್ಷಕರು, ಇವರು ದಿನಾಂಕ:26.03.2008 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಇವರು ಪ್ರಕರಣದ ತನಿಖಾಧಿಕಾರಿಯಾಗಿದ್ದು, ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ. ತಾನು ಈ ತಕ್ಷೀರು ನಡೆದ ವರ್ಷದಲ್ಲಿ ಪುತ್ತೂರು ವಲಯದಲ್ಲಿ ಅಬಕಾರಿ ನಿರೀಕ್ಷಕರಾಗಿ ಕೆಲಸ ನಿರ್ವಹಿಸುತ್ತಿದೆ. ಈ ಪ್ರಕರಣದ ಕಡತವನ್ನು ಅಧಿಕೃತ ಅಧಿಕಾರಿಯವರ ಆದೇಶದಂತೆ ಪುತ್ತೂರು ಗ್ರಾಮಾಂತರ ಪೊಲೀಸ್ ಉಪ ನಿರೀಕ್ಷಕರವರಿಂದ ಪಡೆದುಕೊಂಡೆನು. ಈ ಪ್ರಕರಣದ ಮಾದರಿ ಸೀಸೆಗಳಾದ ರಕ್ಟಿಫೈಡ್ ಸ್ಪಿರಿಟ್‌ನಿಂದ 180 ಎಂಎಲ್ ನ 8 ಬಾಟ್ಲಿಗಳನ್ನು ಫೆನ್ನಿ 180 ಎಂಎಲ್ ಹಾಗೂ ಸಾರಾಯಿ ಸ್ಯಾಚೇಟು 5, ಇವರುಗಳನ್ನು ದಿನಾಂಕ:17.10.1997ರಂದು ರಾಸಾಯನಿಕ ತಜ್ಞರು ಮಂಗಳೂರು ಇವರಿಗೆ ಅಬಕಾರಿ ರಕ್ಷಕರಾದ ಚಂದ್ರಶೇಖರ್ ಇವರ ಮೂಲಕ ಕಳುಹಿಸಿರುತ್ತೇನೆ. ದಿನಾಂಕ:28.10.1997 ರಂದು ರಸಾಯನಿಕ ತಜ್ಞರು ಪರೀಕ್ಷಿಸಿದ ಸದರಿ ಮಾದರಿ ಬಾಟಲಿಗಳನ್ನು ಹಾಗೂ ಸ್ಯಾಚೇಟುಗಳನ್ನು ಮತ್ತು ವರದಿಯನ್ನು ಅಬಕಾರಿ ರಕ್ಷಕ ಚಂದ್ರಶೇಖರ್ ಇವರ ಮುಖಾಂತರ ಪಡೆದುಕೊಂಡೆನು. ಈ ಪ್ರಕರಣದಲ್ಲಿ ವಶಪಡಿಸಿಕೊಂಡ ವಾಹನ ಟೆಂಪೋಟ್ರಾಕ್ಸ್ ಸಂಖ್ಯೆ: ಕೆಎ-20-ಎಂ-907, 35 ಲೀ ರೆಕ್ಟಿಫೈಡ್ ಸ್ಪಿರಿಟ್ ತುಂಬಿದ 15 ಪ್ಲಾಸ್ಟಿಕ್ ಕ್ಯಾನುಗಳು ಹಾಗೂ 5 ಪಾಲಿಥೀನ್ ಚೀಲದಲ್ಲಿ ತುಂಬಿರುವ ಸಾರಾಯಿ ಮತ್ತು 180 ಎಂಎಲ್‌ನ 45 ಫೆನ್ನಿ ಬಾಟಲಿಗಳು ಇವುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವಂತೆ ಕೋರಿ ದಿನಾಂಕ:14.11.1997 ರಂದು ಅಧಿಕೃತ ಅಧಿಕಾರಿಯವರಿಗೆ ವರದಿಯನ್ನು ಸಲ್ಲಿಸಿದೆನು. ಈ ಪ್ರಕರಣಕ್ಕೆ ಸಂಬಂಧಿಸಿದ ಪ್ರಥಮ ವರ್ತಮಾನ ವರದಿ ಅದನ್ನು ನಿಶಾನೆ ಪಿ-2 ಎಂದೂ ಗುರುತಿಸಲಾಯಿತು. ಮಾದರಿ ಸೀಲನ್ನು ನಿಶಾನೆ ಪಿ-3 ಎಂದೂ ಗುರುತಿಸಲಾಯಿತು. ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರು ದಿನಾಂಕ:14.11.1997 ರಂದು ಅಧಿಕೃತ ಅಧಿಕಾರಿಗಳಿಗೆ ಸಲ್ಲಿಸಿದ ವರದಿಯನ್ನು ನಿಶಾನೆ ಪಿ-4 ಎಂದೂ ಗುರುತಿಸಲಾಯಿತು. ರಾಸಾಯನಿಕ ತಜ್ಞರ ವರದಿಯನ್ನು ನಿಶಾನೆ ಪಿ-5 ಎಂದೂ ಗುರುತಿಸಲಾಯಿತು ಎಂದು ಅಭಿಯೋಗದ ಪರ ಪಿಡಬ್ಲ್ಯೂ-2 ರವರು ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ.

**ಪಾಟೀ ಸವಾಲು:** ಮಾಲೀಕರ ಪರ ವಕೀಲರು ಹಾಜರು ಇರುವುದಿಲ್ಲ.

ಈ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರು ಪ್ರಕರಣಕ್ಕೆ ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರಗಳ ಆಧಾರದಲ್ಲಿ ಹಾಗೂ ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ:29.08.1997ರಂದು ಟ್ರಾಕ್ಸ್ ಜೀಪು ಸಂಖ್ಯೆ: ಕೆಎ-20-ಎಂ-907ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೇ ಆರೋಪಿಗಳು ಮದ್ಯಸಾರ, ಫೆನ್ನಿ ಮತ್ತು ಸಾರಾಯಿ ಸ್ಯಾಚೇಟುಗಳನ್ನು ಹೊಂದಿ ಸಾಗಾಟ ಮಾಡುತ್ತಿರುವುದನ್ನು ಪತ್ತೆಹಚ್ಚಿ, ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರ ಪ್ರಮಾವ ಸಂಖ್ಯೆ:99/1997, ದಿನಾಂಕ:29.08.1997 ರಂತೆ ಪ್ರಕರಣ ದಾಖಲಿಸಿಕೊಂಡಿರುವುದು ಹಾಗೂ ವಾಹನದಲ್ಲಿ ಜಪ್ತು ಮಾಡಲ್ಪಟ್ಟಿರುವ ವಸ್ತು ರಾಸಾಯನಿಕ ತಜ್ಞರ ವರದಿಯಂತೆ

ಮದ್ಯಸಾರ, ಫೆನ್ನಿ ಮತ್ತು ಸಾರಾಯಿಯಾಗಿದ್ದು, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಭೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿರುತ್ತದೆ.

ಇಂತಹ ಅಕ್ರಮ ಮದ್ಯಸಾರ, ಫೆನ್ನಿ ಮತ್ತು ಸಾರಾಯಿ ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಭೀತುಪಡಿಸುವುದು ವಾಹನದ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಆದರೆ ಈ ಪ್ರಕರಣದ ವಾಹನ ಮಾಲೀಕರಾದ ಶ್ರೀ ರಮೇಶ್ ಕೋಟ್ಯಾನ್ ಇವರಿಗೆ ಹಲವಾರು ಬಾರಿ ನೋಟೀಸು ನೀಡಿದ್ದರೂ ಅವರ ಪರ ವಕೀಲರಾಗಲೀ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಪ್ರತಿರಕ್ಷಾ ಸಾಕ್ಷಿ ವಿಚಾರಣೆ ಮಾಡಲು ಅರ್ಜಿದಾರರಿಗೆ ಹಾಗೂ ಅವರ ಪರ ವಕೀಲರಿಗೆ ಪ್ರತಿರಕ್ಷಾ ಸಾಕ್ಷಿಯನ್ನು ಹಾಜರುಪಡಿಸಲು ಹಲವಾರು ಬಾರಿ ಸಮಯಾವಕಾಶವನ್ನು ನೀಡಿದರೂ ಅರ್ಜಿದಾರರು ಹಾಗೂ ಅವರ ಪರ ವಕೀಲರು ಈ ಪ್ರಾಧಿಕಾರದ ಮುಂದೆ ಪ್ರತಿರಕ್ಷಾ ಸಾಕ್ಷಿಯನ್ನು ವಿಚಾರಣೆಗೆ ಹಾಜರುಪಡಿಸಲು ವಿಫಲರಾಗಿರುತ್ತಾರೆ. ಅಲ್ಲದೇ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷ್ಯಾಧಾರಗಳೊಂದಿಗೆ ವಾಹನವನ್ನು ತನ್ನ ತಿಳುವಳಿಕೆಗೆ ಬಾರದೇ ಅಕ್ರಮ ಸಾಗಾಣಿಕೆಗೆ ಉಪಯೋಗಿಸಲಾಗಿದೆ ಎಂದು ರುಜುವಾತುಪಡಿಸಲು ವಿಫಲರಾಗಿರುವುದರಿಂದ ಹಾಗೂ ಈ ಪ್ರಾಧಿಕಾರದ ಮುಂದೆ ಹಾಜರಾಗದೇ ಇರುವುದನ್ನು ಗಮನಿಸಿದಾಗ ವಾಹನ ಮಾಲೀಕರು ತನ್ನ ತಿಳುವಳಿಕೆಯಿಂದಲೇ ವಾಹನವನ್ನು ಅಕ್ರಮ ಸಾಗಾಣಿಕೆಗೆ ತೊಡಗಿಸಿರುವುದು ನಿಸ್ಸಂದೇಹವಾಗಿ ಸಾಭೀತಾಗಿರುತ್ತದೆ. ಈ ಮೇಲಿನ ಕಾರಣಗಳಿಂದ ಎರಡನೇ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಮೇಲಿನ ಎಲ್ಲಾ ಕಾರಣಗಳಿಂದ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ವಾಹನ ಟ್ರಾಕ್ಸ್ ಜೀಪು ಸಂಖ್ಯೆ: ಕೆಎ-20-ಎಂ-907ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿ ಪ್ರಾಧಿಕಾರವು ತೀರ್ಮಾನಿಸಿ, ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿರುವ ವಾಹನ ಸಂಖ್ಯೆ: ಕೆಎ-20-ಎಂ-907ನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

## ಆದೇಶ

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ನೇ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರ ತಕ್ಷೀರು ಸಂಖ್ಯೆ: 99/1997 ದಿನಾಂಕ:29.08.1997ರಲ್ಲಿ ಜಪ್ತು ಪಡಿಸಿಕೊಂಡಿರುವ ಟ್ರಾಕ್ಸ್ ಜೀಪು ಸಂಖ್ಯೆ: ಕೆಎ-20-ಎಂ-907 (ಚಾಸೀಸ್ ನಂ.TX 907847 ಮತ್ತು ಇಂಜಿನ್ ನಂ.616969070670) ನ್ನು ನಿಯಮ 43ಎ (2) ರನ್ವಯ ಕರ್ನಾಟಕ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿನಾಂಕ:27.03.1998ರಂದು ವಾಹನ ಬಿಡುಗಡೆಗೊಳಿಸಿ, ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ. ಮಾಲೀಕರು ಸದರಿ ಮಧ್ಯಂತರ ಬಿಡುಗಡೆ ಹೊಂದಿರುವ ಟೆಂಪೋ ಟ್ರಾಕ್ಸ್ ಜೀಪು ಸಂಖ್ಯೆ: ಕೆಎ-20-ಎಂ-907 ನ್ನು ಈ ಪ್ರಾಧಿಕಾರಕ್ಕೆ ಈ ಆದೇಶದ 30 ದಿನಗಳ ಒಳಗೆ ಒಪ್ಪಿಸಲು ಆದೇಶಿಸಿದೆ. ತಪ್ಪಿದ್ದಲ್ಲಿ ಭದ್ರತೆಗಾಗಿ ನೀಡಿರುವ ಇಂಡೆಮ್ನಿಟಿ ಬಾಂಡ್ ಹಾಗೂ ಸ್ವಾಲ್ವೆಂಟಿ ಶ್ಯೂರಿಟಿಯನ್ನು ಏಕಪಕ್ಷೀಯವಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:27.02.2009ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

**ನೂರ್ ಮಹಮ್ಮದ್ ಹುಸೇನ್**
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್
ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

## ಅನುಬಂಧ-I

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ.-1-ಶ್ರೀ ಅಬ್ಬಾಸ್, ಸಹಾಯಕ ಪೊಲೀಸ್ ನಿರೀಕ್ಷಕರು, ಕದ್ರಿ ಪೊಲೀಸ್ ಠಾಣೆ, ಮಂಗಳೂರು.

ಪ್ರಾ.ಸಾ-2 : ಶ್ರೀ ಕೆ.ಎನ್. ಆಳ್ವ, ನಿವೃತ್ತ ಅಬಕಾರಿ ನಿರೀಕ್ಷಕರು.

## ಅನುಬಂಧ-II

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ-1: ಯಾದಾಸ್ತಿನ ಪ್ರತಿ

ನಿಶಾನೆ-1ಎ: ಯಾದಾಸ್ತಿನ ಮೇಲಿನ ಸಹಿ

ನಿಶಾನೆ-2: ಪ್ರಥಮ ವರ್ತಮಾನ ವರದಿ

ನಿಶಾನೆ-3: ಮಾದರಿ ಸೀಲು

ನಿಶಾನೆ-4: ಅಬಕಾರಿ ನಿರೀಕ್ಷಕರು ಪುತ್ತೂರು ವಲಯರವರ ದಿ:17.11.1997 ರಂದು ಸಲ್ಲಿಸಿದ ತನಿಖಾ ವರದಿ.

ನಿಶಾನೆ-5: ರಸಾಯನಿಕ ವಿಶ್ಲೇಷಣಾ ವರದಿ ಪ್ರತಿ.

**ಅನುಬಂಧ- III**

ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು:

ಅರ್ಜಿದಾರರ ಹೇಳಿಕೆ: - ಯಾವುದು ಇಲ್ಲ-

**ಅನುಬಂಧ- IV**

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು: -ಯಾವುದು ಇಲ್ಲ-

**ನೂರ್ ಮಹಮ್ಮದ್ ಹುಸೇನ್**

ಪಿ.ಆರ್.251 ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

## ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು ನಿರ್ದೇಶಕರ ನಡವಳಿ

**ಸಂಖ್ಯೆ: ಗಭೂಇ/ಡಿಸಿಬಿ/ಕಗಗು625/09-10/164, ದಿನಾಂಕ:9ನೇ ಏಪ್ರಿಲ್, 2009**

**ವಿಷಯ:** ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ನಂದಿಹಳ್ಳಿ ಗ್ರಾಮದ ಸರ್ವೆ ನಂ.42ರಲ್ಲಿ 0.22 ಎಕರೆ ಪ್ರದೇಶದಲ್ಲಿ ಪಿಂಕ್ ಪಾರ್ಫರಿ ಶಿಲೆಗಾಗಿ ಮೆ: ಅಭಿನಯ ಟ್ರೇಡಿಂಗ್ ಕಾರ್ಪೋರೇಷನ್ ರವರಿಗೆ ಮಂಜೂರಾಗಿದ್ದ ಕಲ್ಲುಗಣಿಗುತ್ತಿಗೆ ಸಂಖ್ಯೆ: 625ರ ಗುತ್ತಿಗೆಯನ್ನು ಪುನರ್ ಸ್ಥಾಪಿಸಿರುವ ಬಗ್ಗೆ.

**ಉಲ್ಲೇಖ:** 1) ನಿರ್ದೇಶಕರ ಕಛೇರಿ ನಡವಳಿ ಆದೇಶ ಸಂಖ್ಯೆ: ಗಭೂಇ/ಡಿಸಿಬಿ/ ಕಗಗು-625/06-07/11990-98/ ದಿನಾಂಕ:11.01.2007.

2) ಸರ್ಕಾರದ ನಡವಳಿ ಆದೇಶ ಸಂಖ್ಯೆ: ಸಿಐ 43/ಎಂಎಂಎನ್ 2007 ದಿನಾಂಕ:26.05.2007.

3) ಸರ್ಕಾರದ ನಡವಳಿ ಆದೇಶ ಸಂಖ್ಯೆ: ಸಿಐ 203 ಎಂಆರ್‌ಸಿ 2007 ದಿನಾಂಕ:05.03.2009.

**ಪ್ರಸ್ತಾವನೆ:**

ತುಮಕೂರು ಜಿಲ್ಲೆ ತುಮಕೂರು ತಾಲ್ಲೂಕು ನಂದಿಹಳ್ಳಿ ಗ್ರಾಮದ ಸರ್ವೆ ನಂ.42ರಲ್ಲಿ 0.22 ಎಕರೆ ವಿಸ್ತೀರ್ಣದಲ್ಲಿ ಪಿಂಕ್ ಪಾರ್ಫರಿ ಅಲಂಕಾರಿಕೆ ಶಿಲೆಗಾಗಿ ಕಲ್ಲುಗಣಿಗುತ್ತಿಗೆ ಸಂಖ್ಯೆ: 625ರ ಗುತ್ತಿಗೆಯನ್ನು ಮೆ: ಅಭಿನಯ ಟ್ರೇಡಿಂಗ್ ಕಾರ್ಪೋರೇಷನ್‌ರವರ ಹೆಸರಿನಲ್ಲಿ ದಿನಾಂಕ:29.01.2004 ರಿಂದ 10 ವರ್ಷಗಳಿಗಾಗಿ ಮಂಜೂರು ಮಾಡಲಾಗಿತ್ತು. ಗುತ್ತಿಗೆದಾರರು ಗುತ್ತಿಗೆ ಮೇಲಿನ ಬಾಕಿಯನ್ನು ಪಾವತಿಸದೆ ಗುತ್ತಿಗೆಯನ್ನು ನಿಷ್ಕ್ರಿಯವಾಗಿರಿಸಿದ ಕಾರಣ ದಿನಾಂಕ:11.01.2007 ರಿಂದ ಜಾರಿಗೆ ಬರುವಂತೆ ನಿರ್ದೇಶಕರಿಗೆ ಪ್ರತ್ಯೋಜಿಸಿರುವ ಅಧಿಕಾರದ ಅಡಿಯಲ್ಲಿ ಗುತ್ತಿಗೆಯನ್ನು ರದ್ದುಗೊಳಿಸಲಾಗಿತ್ತು.

ಅದರಂತೆ ಗುತ್ತಿಗೆದಾರರು ಪರಿಷ್ಕರಣ ಅರ್ಜಿಯನ್ನು ನಿಯಮ 53(2)ರ ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರಂತೆ ಸರ್ಕಾರಕ್ಕೆ ಸಲ್ಲಿಸಿದ್ದು ಸರ್ಕಾರವು ಉಲ್ಲೇಖ 2ರ ತನ್ನ ಆದೇಶದಲ್ಲಿ ನಿರ್ದೇಶಕರ ಕ್ರಮವನ್ನು ಸ್ಥಿರೀಕರಿಸಿತು. ತತ್ಸಂಬಂಧ ಅರ್ಜಿದಾರರು ನಿರ್ದೇಶಕರ ಆದೇಶ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಸಿಐ 43 ಎಂಎಂಎನ್ 2007 ದಿನಾಂಕ:26.05.2007ರ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 11240/2007 ಅನ್ನು ದಾಖಲಿಸಿರುತ್ತಾರೆ. ಮಾನ್ಯ ಉಚ್ಛ ನ್ಯಾಯಾಲಯವು 13.08.2008ರ ತನ್ನ ಆದೇಶದಲ್ಲಿ, ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರ ದಿನಾಂಕ:11.01.2007ರ ಆದೇಶ ಮತ್ತು ಸರ್ಕಾರದ ನಡವಳಿ ಆದೇಶ ದಿನಾಂಕ:26.05.2007 ಅನ್ನು ವಜಾಗೊಳಿಸಿ ಅರ್ಜಿದಾರರ ಅರ್ಜಿಯನ್ನು ಪುರಸ್ಕರಿಸಿ, ಅರ್ಜಿದಾರರ ಮನವಿಯನ್ನು ನಿಯಮಗಳನುಸಾರ ಪುನರ್ ಪರಿಶೀಲಿಸಲು ಪರಿಷ್ಕರಣಾ ಪ್ರಾಧಿಕಾರಕ್ಕೆ ಹಿಂದಿರುಗಿಸಿರುತ್ತಾರೆ. ಪರಿಷ್ಕರಣ ಪ್ರಾಧಿಕಾರವಾದ ಸರ್ಕಾರವು ಉಲ್ಲೇಖ (3)ರ ನಡವಳಿಯಲ್ಲಿ ಮೆ: ಅಭಿನಯ ಟ್ರೇಡಿಂಗ್ ಕಾರ್ಪೋರೇಷನ್‌ರವರ ಪರಿಷ್ಕರಣ ಅರ್ಜಿಯನ್ನು ಮಾನ್ಯ ಉಚ್ಛ ನ್ಯಾಯಾಲಯದ ನಿರ್ದೇಶನದಂತೆ ಪುನರ್ ಪರಿಶೀಲಿಸಿ, ಕಲ್ಲುಗಣಿಗುತ್ತಿಗೆದಾರರು ನಿಯಮಾನುಸಾರ ವಿಧಿಸಿರುವ ನಿಬಂಧನೆಗಳನ್ನು ಪಾಲಿಸುವ ಷರತ್ತಿಗೊಳಪಡಿಸಿ ಕಲ್ಲುಗಣಿಗುತ್ತಿಗೆ ಸಂಖ್ಯೆ:625 ಅನ್ನು ಗುತ್ತಿಗೆ ಅವಧಿ ಅಂತ್ಯದವರೆವಿಗೆ ಮರು ಸ್ಥಾಪಿಸಿ ಆದೇಶಿಸಲಾಗಿದೆ.

ಕಲ್ಲುಗಣಿಗುತ್ತಿಗೆದಾರರು 2006-07ನೇ ಸಾಲಿನ ಅಂತ್ಯದವರೆವಿಗೆ ಬಾಕಿ ಇದ್ದ ಹಣ, ಬಡ್ಡಿ ಮತ್ತು ದಂಡವನ್ನು ಸರ್ಕಾರಕ್ಕೆ ಪಾವತಿಸಿರುವ ಮೇರೆಗೆ ಅವರ ಕಲ್ಲುಗಣಿಗುತ್ತಿಗೆ ಸಂಖ್ಯೆ:625 ಅನ್ನು ಸರ್ಕಾರವು ಮರುಸ್ಥಾಪಿಸಿರುವ ಮೇರೆಗೆ ಈಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಡಿಸಿಬಿ/ಕಗಗು-625/2009-10, ದಿನಾಂಕ:**

ಗಣಿ ಮತು ಭೂವಿಜ್ಞಾನ ಇಲಾಖೆಯ ನಿರ್ದೇಶಕರಿಗೆ ಸರ್ಕಾರದ ನಡವಳಿಯಲ್ಲಿ ನಿರ್ದೇಶಿಸಿರುವಂತೆ ತುಮಕೂರು ಜಿಲ್ಲೆ ತುಮಕೂರು ತಾಲ್ಲೂಕು, ನಂದಿಹಳ್ಳಿ ಗ್ರಾಮದ ಸರ್ವೆ ನಂ.42ರಲ್ಲಿ 0.22 ಎಕರೆ ವಿಸ್ತೀರ್ಣದಲ್ಲಿ ಅಲಂಕಾರಿಕ ಶಿಲೆಗಾಗಿ ಮೆ: ಅಭಿನಯ ಟ್ರೇಡಿಂಗ್ ಕಾರ್ಪೋರೇಷನ್‌ರವರ ಹೆಸರಿನಲ್ಲಿ ಮಂಜೂರಾಗಿದ್ದ ಕಲ್ಲುಗಣಿಗುತ್ತಿಗೆ ಸಂಖ್ಯೆ: 625 ಅನ್ನು

ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರ ನಿಯಮಗಳ ಷರತ್ತಿಗೆ ಒಳಪಡಿಸಿ ಕಲ್ಲುಗಣಿಗುತ್ತಿಗೆ ಅವಧಿ ಹಾಗೂ ಇನ್ನಿತರ ಷರತ್ತಿನಂತೆ ಗುತ್ತಿಗೆಯನ್ನು ಪುನರ್ ಸ್ಥಾಪಿಸಲಾಗಿದೆ.

ನಿರ್ದೇಶಕರು,
ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು.

ಪಿ.ಆರ್.363

**ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಇವರ ನಡವಳಿ**
**ಸಂಖ್ಯೆ: ಸಿಬ್ಬಂದಿ.ಶಿಸ್ತು.ಅಗೈಹಾ.7/2000-2001, ದಿನಾಂಕ:23ನೇ ಮಾರ್ಚ್, 2009**

**ವಿಷಯ:**ಶ್ರೀ ಆನಂದ್‌ನಾಯಕ ದ್ವಿತೀಯ ದರ್ಜೆ ಭೂಮಾಪಕರು ಇವರು ಭೂದಾಖಲೆಗಳ ಸಹಾಯಕ ನಿರ್ದೇಶಕರು, ಪುತ್ತೂರು ಕಛೇರಿಯಲ್ಲಿ ಅನಧಿಕೃತ ಗೈರು ಹಾಜರಿ ಬಗ್ಗೆ ಶಿಸ್ತು ಕ್ರಮ-ಅಂತಿಮ ಆದೇಶ ಹೊರಡಿಸುವ ಬಗ್ಗೆ.

**ಉಲ್ಲೇಖ:**1) ಈ ಕಛೇರಿಯ ಸಮಸಂಖ್ಯೆಯ ಕಾರಣ ಕೇಳಿ ನೋಟೀಸು ದಿನಾಂಕ:08.02.2007.
2) ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿದ ಈ ಕಛೇರಿಯ ಸಮಸಂಖ್ಯೆ ನಡವಳಿ ದಿನಾಂಕ:04/08.08.2007.
3) ವಿಚಾರಣಾಧಿಕಾರಿಗಳ ವರದಿ ಸಂಖ್ಯೆ: ಸಿಬ್ಬಂದಿ:ಶಿಸ್ತು:36/07-08/2814, ದಿನಾಂಕ:11.07.2008.
4) ಈ ಕಛೇರಿಯ ಸಮಸಂಖ್ಯೆಯ 2ನೇ ಕಾರಣ ಕೇಳಿ ನೋಟೀಸು ದಿನಾಂಕ:18.09.2008.

**ಪ್ರಸ್ತಾವನೆ:**

ಶ್ರೀ ಆನಂದ್‌ನಾಯಕ್, ದ್ವಿತೀಯ ದರ್ಜೆ ಭೂಮಾಪಕರು ಇವರು ಈ ಹಿಂದೆ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಪುತ್ತೂರು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿಯವರು ದಿನಾಂಕ:01.08.2002 ರಿಂದ 07.05.2005 ರವರೆಗೆ ಯಾವುದೇ ರಜೆ ಅರ್ಜಿಯನ್ನು ಸಲ್ಲಿಸದೆ, ಸಕ್ಷಮ ಪ್ರಾಧಿಕಾರಿಯಿಂದ ಪೂರ್ವಾನುಮತಿಯನ್ನು ಪಡೆಯದೆ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುವ (ಇಲಾಖೆಯು ಕಂದಾಯ ಇಲಾಖೆಯೊಡನೆ ಕಾರ್ಯವಿಲೀನವಾದ ನಂತರ ತಹಶೀಲ್ದಾರ, ಪುತ್ತೂರು ಕಛೇರಿಯಾಗಿದ್ದು, ನೌಕರರು ಗೈರು ಹಾಜರಿಯಲ್ಲಿ ಮುಂದುವರೆದ ಕಾರಣ, ಯಾವುದೇ ಕಛೇರಿಗೆ ಸ್ಥಳ ನಿಯುಕ್ತಿಗೊಂಡಿರುವುದಿಲ್ಲ) ಬಗ್ಗೆ ಈ ಕಛೇರಿಯಿಂದ ಕಾರಣ ಕೇಳಿ ನೋಟೀಸನ್ನು ಆರೋಪ ಪಟ್ಟಿಯೊಂದಿಗೆ ದಿನಾಂಕ:08.02.2007 ರಂದು ಜಾರಿ ಮಾಡಲಾಗಿರುತ್ತದೆ. ನೌಕರರ ವಿರುದ್ಧ ಮಾಡಲಾದ ಆರೋಪಗಳನ್ನು ಈ ಕೆಳಕಂಡಂತೆ ಪುನರುಚ್ಚರಿಸಿದೆ. (ಸದರಿ ನೌಕರರನ್ನು ಇನ್ನು ಮುಂದೆ ಆಪಾದಿತ ನೌಕರರೆಂದು ಕರೆಯಲಾಗಿದೆ.)

**ಆರೋಪ:**

ಶ್ರೀ ಆನಂದ್‌ನಾಯಕ್, ದ್ವಿತೀಯ ದರ್ಜೆ ಭೂಮಾಪಕರು ಆದ ನೀವು ಈ ಹಿಂದೆ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಪುತ್ತೂರು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ (ಕಂದಾಯ ಇಲಾಖೆಯೊಡನೆ ವಿಲೀನವಾದ ನಂತರ ತಹಶೀಲ್ದಾರ್, ಪುತ್ತೂರು ಕಛೇರಿ ಹಾಗೂ ಗೈರು ಹಾಜರಿಯಲ್ಲಿ ಮುಂದುವರೆದಿರುವ ಕಾರಣ ಯಾವುದೇ ಕಛೇರಿಗೆ ಸ್ಥಳ ನಿಯುಕ್ತಿಗೊಂಡಿರುವುದಿಲ್ಲ) ದಿನಾಂಕ:01.08.2002 ರಿಂದ ದಿನಾಂಕ:07.05.2005 ರವರೆಗೆ ಯಾವುದೇ ರಜೆ ಅರ್ಜಿಯನ್ನು ಸಲ್ಲಿಸದೆ, ಸಕ್ಷಮ ಪ್ರಾಧಿಕಾರಿಯವರಿಂದ ಪೂರ್ವಾನುಮತಿ ಪಡೆಯದೆ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗುವ ಮೂಲಕ ಕಛೇರಿಯ ಕೆಲಸಕ್ಕೆ ತೊಂದರೆಯುಂಟು ಮಾಡಿರುತ್ತೀರಿ. ಇದರಿಂದ ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ 1958ರ ನಿಯಮ 106(ಎ) ಮತ್ತು ನಿಯಮ 108 ಅನ್ನು ಉಲ್ಲಂಘಿಸಿದಂತಾಗಿ ದುರ್ನಡತೆ ಎಸಗಿರುತ್ತೀರಿ. ಆ ಕಾರಣ, ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(i),(ii) ಮತ್ತು (iii) ಅನ್ನು ಉಲ್ಲಂಘಿಸಿ ಕರ್ನಾಟಕ ಸರ್ಕಾರಿ ಸೇವಾ (ಸಿ.ಸಿ.ಎ.) 1957 ರನ್ವಯ ಶಿಸ್ತು ಕ್ರಮ ಜರುಗಿಸಲು ಅನುವು ಮಾಡಿ ಕೊಟ್ಟಿರುತ್ತೀರಿ. ಆದ ಕಾರಣ ಈ ಆರೋಪ.

ಆಪಾದಿತ ನೌಕರರು ದಿನಾಂಕ:14.03.2007 ರಂದು ನೋಟೀಸನ್ನು ಸ್ವೀಕರಿಸಿ, ಯಾವುದೇ ಹೇಳಿಕೆಯನ್ನು ನೀಡದ ಕಾರಣ, ಆರೋಪಗಳ ಸತ್ಯಾಸತ್ಯತೆಯನ್ನು ತಿಳಿಯಲು ದಿನಾಂಕ:04/08.08.2007ರ ಈ ಕಛೇರಿ ನಡವಳಿಯಲ್ಲಿ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿದಂತೆ, ವಿಚಾರಣಾಧಿಕಾರಿಗಳು, ದಿನಾಂಕ:26.10.2007, 13.06.2008, 18.06.2008ರಂದು ವಿಚಾರಣೆ ನಡೆಸಿದ್ದು, ಆಪಾದಿತರು ಆರೋಪವನ್ನು ಅಲ್ಲಗಳೆದಿರುವುದಿಲ್ಲ. ಬದಲಿಗೆ ಅನಾರೋಗ್ಯ ಕಾರಣದಿಂದ ಸ್ವಯಂ ನಿವೃತ್ತಿಯನ್ನು ಕೋರಿದ್ದು ಮತ್ತು ಅನಾರೋಗ್ಯದ ಬಗ್ಗೆ ವೈದ್ಯರ ಪ್ರಮಾಣ ಪತ್ರಗಳನ್ನು ಈ ಹಿಂದೆ ಪುತ್ತೂರು ಭೂಮಾಪನ ಕಛೇರಿಯಲ್ಲಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಆದರೆ ವಿಚಾರಣೆ ವೇಳೆಯಲ್ಲಿ ಅನಾರೋಗ್ಯವನ್ನು ನಿರೂಪಿಸುವ ಯಾವುದೇ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಲ್ಲಿಸಿರುವುದಿಲ್ಲವೆಂದೂ, ಆ ಕಾರಣ, ಆಪಾದಿತರ ವಿರುದ್ಧ ಮಾಡಲಾದ ಆರೋಪವು ಸಾಬೀತಾಗಿರುತ್ತದೆಯೆಂದು ವಿಚಾರಣಾಧಿಕಾರಿಗಳು ಅಭಿಪ್ರಾಯಪಟ್ಟಿರುತ್ತಾರೆ. ವಿಚಾರಣಾಧಿಕಾರಿಗಳ ಅಭಿಪ್ರಾಯವನ್ನು ಒಪ್ಪಿ, ಈ ಕಛೇರಿಯಿಂದ ದಿನಾಂಕ:18.09.2008ರಂದು ನೌಕರರಿಗೆ ವಿಚಾರಣಾ ವರದಿಯೊಂದಿಗೆ 2ನೇ ಕಾರಣ ಕೇಳಿ ನೋಟೀಸನ್ನು ಜಾರಿ ಮಾಡಲಾಗಿರುತ್ತದೆ. ನೌಕರರು ದಿನಾಂಕ:21.10.2008 ರಂದು ನೋಟೀಸನ್ನು ಸ್ವೀಕರಿಸಿ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಆಪಾದಿತರು ದಿನಾಂಕ:01.08.2002 ರಿಂದ ಅನಧಿಕೃತ ಗೈರು ಹಾಜರಾಗಿದ್ದು, ಈವರೆವಿಗೂ ಅನಧಿಕೃತ ಗೈರು ಹಾಜರಿಯಲ್ಲಿಯೇ ಮುಂದುವರೆಯುತ್ತಿದ್ದು, ವಿಚಾರಣೆಯಲ್ಲಿ ಅನಾರೋಗ್ಯದ ಕಾರಣದಿಂದ ಗೈರು ಹಾಜರಾಗಿರುವುದಾಗಿ ತಿಳಿಸಿರುವ ಬಗ್ಗೆ ಪರಿಶೀಲಿಸಲಾಗಿ, ಅಂತಹ ಗಂಭೀರವಾದ ದೀರ್ಘಾವಧಿಯ ಅನಾರೋಗ್ಯವನ್ನು ನಿರೂಪಿಸುವ ಯಾವುದೇ ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಲ್ಲಿಸದಿರುವುದನ್ನು ಗಮನಿಸಿದಾಗ, ಆಪಾದಿತರು ಕರ್ತವ್ಯಕ್ಕೆ ದೀರ್ಘಾವಧಿಯ ಅನಧಿಕೃತ ಗೈರು ಹಾಜರಾಗುವ ಪ್ರವೃತ್ತಿಯನ್ನು ಬೆಳೆಸಿಕೊಂಡು ಗಂಭೀರವಾದ ಕರ್ತವ್ಯಚ್ಯುತಿ ಎಸಗುತ್ತಿದ್ದು, ಸದರಿಯವರಿಗೆ ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ ಯಾವುದೇ ಶ್ರದ್ಧ ಆಸಕ್ತಿ ಇಲ್ಲದಿರುವುದು ಕಂಡು ಬರುತ್ತಿದ್ದು, ಆರೋಪ ಸಾಬೀತಾಗಿರುವ ಬಗ್ಗೆ ವಿಚಾರಣಾ ವರದಿಯನ್ನು ಮತ್ತು ವಿಚಾರಣಾ ವೇಳೆಯಲ್ಲಿ ಆಪಾದಿತರು ನೀಡಿದ ಹೇಳಿಕೆಯನ್ನು ಪರಿಶೀಲಿಸಿ, ಆಪಾದಿತರಿಗೆ ಕಠಿಣ ದಂಡನೆಯನ್ನು ವಿಧಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಶ್ರೀ ಆನಂದ್‌ನಾಯಕ್ ದ್ವಿತೀಯ ದರ್ಜೆ ಭೂಮಾಪಕರವರು ದಿನಾಂಕ:01.08.2002 ರಿಂದ ಇಲ್ಲಿಯವರೆಗೆ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುವುದು, ಆರೋಪಿತ ನೌಕರರು ನೀಡಿರುವ ಹೇಳಿಕೆ ಮತ್ತು ದಾಖಲೆಗಳಿಂದ ಸಾಬೀತಾಗಿರುತ್ತದೆ. ದಿನಾಂಕ:01.08.2002 ರಿಂದ ಯಾವುದೇ ರಜೆ ಅರ್ಜಿಯನ್ನು ಸಲ್ಲಿಸದೆ, ಸರ್ಕಾರಿ ಕೆಲಸಕ್ಕೆ ದೀರ್ಘಕಾಲದವರೆಗೆ ಅನಧಿಕೃತ ಗೈರು ಹಾಜರಾಗಿರುವುದು ಕೆ.ಸಿ.ಎಸ್.ಆರ್. ನಿಯಮ 108ನ್ನು ಆಕರ್ಷಿಸಿರುವ ಹಿನ್ನೆಲೆಯಲ್ಲಿ ಆಪಾದಿತ ನೌಕರರು ಗಂಭೀರವಾದ ಕರ್ತವ್ಯ ಲೋಪ ಮತ್ತು ದುರ್ವರ್ತನೆ ಎಸಗಿದಂತಾಗಿರುತ್ತದೆ.

ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ ನಿಯಮ 108ರ ಪ್ರಕಾರ ಸರ್ಕಾರವು ಪ್ರಕರಣದ ವಿಶೇಷ ಸಂದರ್ಭಗಳಿಂದಾಗಿ ಅನ್ಯಥಾ ನಿರ್ಣಯಿಸದ ಹೊರತು 4 ತಿಂಗಳು ಹಾಗೂ ಹೆಚ್ಚಿನ ಅವಧಿಗೆ ರಜೆ ಪಡೆದುಕೊಳ್ಳದೇ ಕರ್ತವ್ಯಕ್ಕೆ ವಿಮುಖರಾಗಿ ಗೈರು ಹಾಜರಾಗುವ ಸರ್ಕಾರಿ ನೌಕರರನ್ನು ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರಲ್ಲಿ ನಮೂದಿಸಲಾದ ಕಾರ್ಯವಿಧಾನವನ್ನನುಸರಿಸಿ ಸೇವೆಯಿಂದ ವಜಾ ಮಾಡಬಹುದಾಗಿರುತ್ತದೆ ಅಥವಾ ಸೇವೆಯಿಂದ ತೆಗೆದು ಹಾಕಬಹುದಾಗಿರುತ್ತದೆ ಆಪಾದಿತರಿಗೆ ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ ಆಸಕ್ತಿ ಇಲ್ಲದೆ ದೀರ್ಘಕಾಲದಿಂದ ಗೈರು ಹಾಜರಾಗಿದ್ದು, ಈ ಪ್ರಕರಣದಲ್ಲಿ ಆಪಾದಿತರು ಯಾವುದೇ ಪ್ರಬಲ ಕಾರಣವಿಲ್ಲದೆ, ಸರ್ಕಾರಿ ಕೆಲಸಕ್ಕೆ ಹಾಜರಾಗದೆ ದಿನಾಂಕ:01.08.2002 ರಿಂದ ಇಲ್ಲಿಯವರೆಗೆ ಅನಧಿಕೃತ ಗೈರು ಹಾಜರಾಗಿರುವುದು ತೀವ್ರತರನಾದ ದುರ್ವರ್ತನೆ ಆಗಿರುವುದರಿಂದ ಹಾಗೂ ಅವರ ವಿರುದ್ಧ ಮಾಡಲಾದ ಆರೋಪವು ಸಾಬೀತಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8(viii) ರೊಂದಿಗೆ ಓದಿಕೊಂಡ ನಿಯಮ 9(3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ರಾಜೀವ್ ಚಾವ್ಲಾ, ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಆದ ನಾನು ಶ್ರೀ ಆನಂದ್‌ನಾಯಕ್ ದ್ವಿತೀಯ ದರ್ಜೆ ಭೂಮಾಪಕರು, ತಹಶೀಲ್ದಾರ್, ಪುತ್ತೂರು (ಈ ಹಿಂದೆ ನೌಕರರು ಭೂದಾಖಲೆಗಳ ಸಹಾಯಕ ನಿರ್ದೇಶಕರು, ಪುತ್ತೂರು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅನಧಿಕೃತ ಗೈರು ಹಾಜರಿಯಲ್ಲಿಯೇ ಮುಂದುವರೆಯುತ್ತಿದ್ದ ಕಾರಣ, ಇಲಾಖೆಯು ಕಂದಾಯ ಇಲಾಖೆಯಲ್ಲಿ ಕಾರ್ಯ ವಿಲೀನಗೊಂಡ ನಂತರ ಯಾವುದೇ ಕಛೇರಿಗೆ ನೌಕರರನ್ನು ಸ್ಥಳ ನಿಯುಕ್ತಿಗೊಳಿಸಿರುವುದಿಲ್ಲ) ರವರನ್ನು ಸೇವೆಯಿಂದ ವಜಾ ಮಾಡಿ ಆದೇಶಿಸಿದ್ದೇನೆ.

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

ಪಿ.ಆರ್.287

**ಕರ್ನಾಟಕ ಲೋಕಸೇವಾ ಆಯೋಗ, "ಉದ್ಯೋಗ ಸೌಧ", ಬೆಂಗಳೂರು-01**

**ಅಧಿಸೂಚನೆ**

**ಇ(1) 9416/2008-09/ಪಿಎಸ್‌ಸಿ, ದಿನಾಂಕ:18ನೇ ಮಾರ್ಚ್, 2009**

**ವಿಷಯ:** 2006-2007ನೇ ಸಾಲಿನ ಪ್ರೌಢಶಾಲಾ ಮುಖ್ಯೋಪಾಧ್ಯಾಯರ 558 ಹುದ್ದೆಗಳ ಮುಖ್ಯ ಪರೀಕ್ಷೆಯಲ್ಲಿ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿದ ಶ್ರೀ ರಘೋತ್ತಮ ಹೆಚ್.ಬಿ. (ನೋಂ.ಸಂ.8874) ಅಭ್ಯರ್ಥಿಗೆ ದಂಡನೆ ವಿಧಿಸುವ ಬಗ್ಗೆ.

**ಓದಲಾಗಿದೆ:**

1) ಶ್ರೀ ರಘೋತ್ತಮ ಹೆಚ್.ಬಿ. ಇವರ 2006-07ನೇ ಸಾಲಿನ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಮುಖ್ಯ ಪರೀಕ್ಷೆಯ ಉತ್ತರ ಪತ್ರಿಕೆ.
2) ಶ್ರೀ ರಘೋತ್ತಮ ಹೆಚ್.ಬಿ. ಇವರಿಗೆ ಜಾರಿ ಮಾಡಿರುವ ಕಾರಣ ಕೇಳುವ ನೋಟೀಸಿನ ಸಂಖ್ಯೆ: ಇ(1)3368/ 2008-09/ ಪಿಎಸ್‌ಸಿ, ದಿನಾಂಕ:19.02.2009.
3) ಶ್ರೀ ರಘೋತ್ತಮ ಹೆಚ್.ಬಿ. ಇವರು ದಿನಾಂಕ:25.02.2009ರಂದು ಸಲ್ಲಿಸಿದ ಸಮಜಾಯಿಷಿ ಪತ್ರ.

ಪ್ರಸ್ತಾವನೆ:

ಮೇಲೆ ಓದಲಾದ 1ರನ್ವಯ ಶ್ರೀ ರಘೋತ್ತಮ ಹೆಚ್.ಬಿ. ಇವರು 2006-07ನೇ ಸಾಲಿನ ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಮುಖ್ಯ ಪರೀಕ್ಷೆಗೆ ಸಲ್ಲಿಸಿದ್ದ ಅರ್ಜಿಯ ಮೇರೆಗೆ ಇವರಿಗೆ ಸದರಿ ಪರೀಕ್ಷೆ ತೆಗೆದುಕೊಳ್ಳಲು ನೋಂದಣಿ ಸಂಖ್ಯೆ:8874ರ ಪ್ರವೇಶ ಪತ್ರವನ್ನು ಜಾರಿ ಮಾಡಲಾಗಿತ್ತು. ಅದರಂತೆ ಇವರು ದಿನಾಂಕ:20.04.2008 ರಿಂದ02.05.2008ರವರೆಗೆ ನಡೆಸಲಾದ ಮುಖ್ಯ ಪರೀಕ್ಷೆಯ ಅಪರಾಧಶಾಸ್ತ್ರ ಪತ್ರಿಕೆ-1ರ ಪರೀಕ್ಷೆಗೆ ಹಾಜರಾಗಿ ಉತ್ತರ ಪತ್ರಿಕೆಯಲ್ಲಿ ಕೆಲವರ ಹೆಸರುಗಳನ್ನು ಹಾಗೂ ಸಂಖ್ಯೆಗಳನ್ನು ನಮೂದು ಮಾಡಿ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿರುತ್ತಾರೆ ಎಂಬುದಾಗಿ ವರದಿಯಾಗಿದ್ದ ಕಾರಣ ಮೇಲೆ ಓದಲಾದ (2)ರನ್ವಯ ಸದರಿ ಅಭ್ಯರ್ಥಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು. ಈ ನೋಟೀಸಿಗೆ ಸಂಬಂಧಿಸಿದಂತೆ ಅಭ್ಯರ್ಥಿಯು ದಿನಾಂಕ:25.02.2009ರಂದು ವಿಚಾರಣಾಧಿಕಾರಿಗಳ ಮುಂದೆ ಇವರ ವಿರುದ್ಧದ ಆರೋಪವು ಸಾಬೀತಾಗಿರುವ ಕಾರಣ ತಮ್ಮ ವಿರುದ್ಧದ ಆರೋಪವನ್ನು ಒಪ್ಪಿಕೊಂಡಿರುತ್ತಾರೆ.

ಆಯೋಗವು ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಕೆಳಗಿನಂತೆ ದಂಡನೆ ವಿಧಿಸಲು ಆದೇಶಿಸಿರುತ್ತದೆ.

**ಆದೇಶ ಸಂಖ್ಯೆ: ಇ(1)9415/2008-09/ ಪಿಎಸ್‌ಸಿ, ಬೆಂಗಳೂರು, ದಿನಾಂಕ:18ನೇ ಮಾರ್ಚ್, 2009**

ಕರ್ನಾಟಕ ಲೋಕಸೇವಾ ಆಯೋಗದ ಅಧಿಕೃತ ಜ್ಞಾಪನ ಸಂಖ್ಯೆ: ಆಡಳಿತ 398/93-94/ಪಿಎಸ್‌ಸಿ, ದಿನಾಂಕ:14.09.1993ರಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಶ್ರೀ ರಘೋತ್ತಮ ಹೆಚ್.ಬಿ. (ನೋಂ.ಸಂ.8874) ನಂ.74, ಮಾತೃಶ್ರೀ ನಿಲಯ, ಪಿ & ಟಿ ಕಾಲೋನಿ, ಗುರು ರಾಘವೇಂದ್ರ ಥಿಯೇಟರ್ ರಸ್ತೆ, ಚಾಮರಾಜನಗರ-571313, ಇವರಿಗೆ 2006-07ನೇ ಸಾಲಿನಲ್ಲಿ ಆಯೋಗವು ನಡೆಸಿದ ಪ್ರೌಢಶಾಲಾ ಮುಖ್ಯೋಪಾಧ್ಯಾಯರ 558 ಹುದ್ದೆಗಳ ಮುಖ್ಯ ಪರೀಕ್ಷೆಯ ಅಭ್ಯರ್ಥಿತ್ವವನ್ನು ರದ್ದುಪಡಿಸುವ ದಂಡನೆಯನ್ನು ವಿಧಿಸಲಾಗಿದೆ.

ಆಯೋಗದ ಆದೇಶದ ಮೇರೆಗೆ

**ವಿ.ಬಿ. ಪಾಟೀಲ್**

ಕಾರ್ಯದರ್ಶಿ,

ಕರ್ನಾಟಕ ಲೋಕಸೇವಾ ಆಯೋಗ.

ಪಿ.ಆರ್.289

**PROCEEDINGS OF THE COMMISSIONER, DIRECTORATE OF EMPLOYMENT & TRAINING, "KAUSHALYA BHAVAN", NEAR DAIRY CIRCLE, BANNERGHATTA ROAD, BANGALORE-560 029**

The Officers borne on the Employment Wing of the Department of Employment and Training were bestowed with the powers and rights detailed in Section 6 of the Employment Exchanges (Compulsory Notification of Vacancies) Act 1959 vide the Directorate Notification No. DEX-11/CR-135/87-88, Dated:15th July, 1988 read with Corrigendum Dated:7th September, 1988 duly published in Part-III Section 2 of Karnataka Gazette Dated:25th august, 1988 and 15th September, 1988 respectively. In the context of formation of 2 new districts in the State by the State Government vide G.O.No.ಆರ್‌ಡಿ 27 ಭೂದಾಪು 2006 (ಭಾಗ-3), ದಿನಾಂಕ:03.08.2007 and subsequently, certain changes have taken place in the structure of the organization which necessitate certain modifications to the orders issued earlier in this behalf. Hence, the Notification.

**Notification No. DET/EMP/EMI-8(2)/CR-2/2009-10, Dated:5th May, 2009**

In exercise of the powers conferred by Section 6 of the Employment Exchanges (Compulsory Notification of Vacancies) Act 1959, read with Rule 7 of Employment Exchanges (Compulsory Notification of Vacancies) Rules 1960, I, Sri Ramesh Zalki, Commissioner, Department of Employment and Training, Government of Karnataka, Bangalore, do hereby authorise the officers specified in column (2) of the table below to exercise the powers and rights detailed in Section 6 of the Act in respect of the establishments situated in their respective jurisdiction as indicated in column (3) of the table below:

The notification comes into effect from the date of publication in the Karnataka Gazette.

**Table**

| Sl. No. | Designation of the Officer | Jurisdiction |
|---|---|---|
| 1. | Employment Officer, District Employment Exchange, Chikkaballapur. | Revenue district of Chikkaballapur. |
| 2. | Employment Officer, District Employment Exchange, Ramanagara. | Revenue District of Ramanagara. |

In view of the foregoing, the particulars mentioned in respect of the Offices and Officers in the earlier Notification No.DEX-11/CR-135/87-88, Dated:15th July, 1988 stand modified/ added to the extent indicated above.

**RAMESH ZALKI**

Commissioner, Employment & Training.

PR-399

ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕರ್ನಾಟಕ ರಾಜ್ಯ ಮೀಸಲು ಪೊಲೀಸ್, ಬೆಂಗಳೂರು ಇವರ ನಡವಳಿಗಳು

ವಿಷಯ: ಶ್ರೀ ಕೆ.ಎಂ. ಪುಟ್ಟಸ್ವಾಮಿ, ಹೆಚ್‌ಸಿ–183, 1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ಇವರ ವಿರುದ್ಧ ಕೆ.ಎಸ್.ಪಿ. (ಡಿ.ಪಿ) ರೂಲ್ಸ್, 1965ರ ನಿಯಮ 6ರ ಅನ್ವಯ ಶಿಸ್ತಿನ ಕ್ರಮ ತೆಗೆದುಕೊಳ್ಳುವ ಬಗ್ಗೆ.

ಉಲ್ಲೇಖ:
1. ಪೊಲೀಸ್ ಇನ್ಸ್‌ಪೆಕ್ಟರ್, ಮಡಿವಾಳ ಪೊಲೀಸ್ ಠಾಣೆ, ಬೆಂಗಳೂರು ರವರ ಪತ್ರ ದಿನಾಂಕ: 9.5.2006.
2. ಕಮಾಂಡೆಂಟ್, 1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ರವರ ಆದೇಶ ಸಂಖ್ಯೆ: ಡಿಇ/ಆರ್–7/13/2006 ದಿನಾಂಕ: 6.6.2006 (ಅಮಾನತ್ತು ಆದೇಶ)
3. ಕಮಾಂಡೆಂಟ್, 1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ರವರ ಜ್ಞಾಪನ ಸಂಖ್ಯೆ: ಡಿಇ/ಆರ್–6/10/2006 ದಿನಾಂಕ: 20.9.2006 ಮತ್ತು 12.6.2007 (ವಿಚಾರಣಾಧಿಕಾರಿ ನೇಮಕಾತಿ ಆದೇಶ)
4. ವಿಚಾರಣಾಧಿಕಾರಿ ಹಾಗೂ ಸಹಾಯಕ ಕಮಾಂಡೆಂಟ್, ಬಿ–ವಿಭಾಗ, 1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ರವರ ಪತ್ರ ಸಂಖ್ಯೆ: ಎಸಿಬಿ/ಡಿಇ/1/2006–07 ದಿನಾಂಕ: 17.10.2006 (ದೋಷಾರೋಪಣಾ ಪತ್ರ)
5. ವಿಚಾರಣಾಧಿಕಾರಿ ಹಾಗೂ ಸಹಾಯಕ ಕಮಾಂಡೆಂಟ್, ಬಿ–ವಿಭಾಗ, 1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ರವರ ವರದಿ ದಿನಾಂಕ 28.8.2007 (ವಿಚಾರಣಾ ವರದಿ)
6. ಕಮಾಂಡೆಂಟ್, 1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ರವರ ಪತ್ರ ಸಂಖ್ಯೆ: 10/ಡಿಇ/ಆರ್–6/2006–07 ದಿನಾಂಕ: 17.9.2007 (ವಿಚಾರಣಾ ವರದಿಯನ್ನು ಈ ಕಛೇರಿಗೆ ಕಳುಹಿಸಿರುವುದು)
7. ಈ ಕಛೇರಿಯ ಪತ್ರದ ಸಮಸಂಖ್ಯೆ ದಿನಾಂಕ: 12.2.2008 (ಕಾರಣ ಕೇಳುವ ಸೂಚನಾ ಪತ್ರ)
8. ಕಮಾಂಡೆಂಟ್, 1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ರವರ ಪತ್ರ ಸಂಖ್ಯೆ: 10/ಡಿಇ/ಆರ್–6/2006–07 ದಿನಾಂಕ: 3.3.2008
9. ಈ ಕಛೇರಿಯ ಪತ್ರದ ಸಮಸಂಖ್ಯೆ ದಿನಾಂಕ: 25.6.2008 (ಕರ್ನಾಟಕ ರಾಜ್ಯ ಪತ್ರದಲ್ಲಿ ಕಾರಣ ಕೇಳುವ ಸೂಚನಾ ಪತ್ರ ಪ್ರಕಟಿಸಲು ಕೋರಿ ಬರೆದ ಪತ್ರ).
10. ಕರ್ನಾಟಕ ರಾಜ್ಯ ಪತ್ರ, ಗುರುವಾರ ಆಗಸ್ಟ್ 28, 2008.

ಶ್ರೀ ಕೆ.ಎಂ. ಪುಟ್ಟಸ್ವಾಮಿ, ಹೆಚ್‌ಸಿ–183, 1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ರವರ ವಿರುದ್ಧ ಶ್ರೀಮತಿ ಪಿಳ್ಳಮ್ಮ, ...ಂ ನಾಗರಾಜು, ನಂ.453, 38ನೇ ಬ್ಲಾಕ್, ಹುಡ್ಕೋ ಪೊಲೀಸ್ ವಸತಿಗೃಹ, ಕೋರಮಂಗಲ, ಬೆಂಗಳೂರು ಇವರು ...ಡಿವಾಳ ಪೊಲೀಸ್ ಠಾಣೆಯಲ್ಲಿ ಅಪರಾಧ ಮೊಕದ್ದಮೆ ದಾಖಲಿಸಿದ ಹಿನ್ನೆಲೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್, ಮಡಿವಾಳ ...ೊಲೀಸ್ ಠಾಣೆ ರವರು ಉಲ್ಲೇಖ (1)ರ ದಿನಾಂಕ 9.5.2006ರ ಪತ್ರದಲ್ಲಿ, ಶ್ರೀಮತಿ ಕೆ.ಎಂ. ಪುಟ್ಟಸ್ವಾಮಿ, ಹೆಚ್‌ಸಿ–183 ...ತ್ತು ಅವರ ಹೆಂಡತಿ ಶ್ರೀಮತಿ ಚಂದ್ರಮ್ಮ ಪಟಾಕಿ ಚೀಟಿ ನಡೆಸುತ್ತಿದ್ದು, ದೂರುದಾರರಿಂದ ತಿಂಗಳಿಗೆ ರೂ.400–00 ರಂತೆ 2 ...ಟಿಯನ್ನು 12 ತಿಂಗಳ ಕಾಲ ಒಟ್ಟು ರೂ.4,800–00 ಗಳನ್ನು ಕಟ್ಟಿಸಿಕೊಂಡು ಕೊನೆಯಲ್ಲಿ ಚಿನ್ನವನ್ನಾಗಲಿ, ಹಣವನ್ನಾಗಲಿ ...ಡುತ್ತೇವೆಂದು ಹೇಳಿ ನವೆಂಬರ್–2005ನೇ ದೀಪಾವಳಿ ಹಬ್ಬಕ್ಕೆ ಯಾವುದೇ ಚಿನ್ನ, ಹಣ ಮತ್ತು ಪಟಾಕಿ ಕೊಡದೆ ...ನಾಂಕ:19.4.2006 ರಂದು ರಾತ್ರಿ ಮನೆ ಖಾಲಿ ಮಾಡಿಕೊಂಡು ನಂಬಿಕೆ ದ್ರೋಹ, ಮೋಸ ಮಾಡಿ ಹೋಗಿದ್ದಾರೆಂದು, ...ದರಿಯವರನ್ನು ಪತ್ತೆ ಮಾಡಿ ಕಾನೂನು ಕ್ರಮ ಜರುಗಿಸಬೇಕೆಂದು ದೂರು ಕೊಟ್ಟಿದ್ದು, ಸದರಿ ದೂರಿನ ಮೇರೆಗೆ ಮೊಕದ್ದಮೆ ...ಖ್ಯೆ: 271/2006 ಕಲಂ 406, 420 ಐಪಿಸಿ, ಮತ್ತು ಕಲಂ 3, 4 ಆಫ್ ಪ್ರೈಸ್ ಚಿಟ್ಸ್ ಅಂಡ್ ಮನಿ ಸರ್ಕ್ಯುಲೇಷನ್ ...ೀಮ್ (ಬಿಸಿನೆಸ್) ಆಕ್ಟ್, 1978ರ ಪ್ರಕಾರ ಕ್ರಿಮಿನಲ್ ಮೊಕದ್ದಮೆ ದಾಖಲಾಗಿರುತ್ತದೆಂದು ತಿಳಿಸಿರುತ್ತಾರೆ.

ಹಾಗೆಯೇ ಶ್ರೀ ಬಿ.ಆರ್. ಕಿರಣ್‌ಕುಮಾರ್, ಬಿನ್ ವಿ. ರಾಜು, ನಂ.146, 1ನೇ ಮುಖ್ಯರಸ್ತೆ, ಚಾಮರಾಜಪೇಟೆ, ...ಂಗಳೂರು ಇವರು, ಸದರಿ ಶ್ರೀ ಕೆ.ಎಂ. ಪುಟ್ಟಸ್ವಾಮಿ, ಹೆಚ್‌ಸಿ–183 ಇವರು ರೂ.50,000–00ಗಳ ಚೀಟಿ ವ್ಯವಹಾರ ...ಡೆಸುತ್ತಿದ್ದು, ತಮ್ಮನ್ನೂ ಸೇರಿದಂತೆ ಇತರರಿಂದ ತಿಂಗಳಿಗೆ ರೂ.2,000–00 ಗಳಂತೆ ಚೀಟಿ ಹಣ ಪಡೆದು 2005ನೇ ...ಸೆಂಬರ್ ತಿಂಗಳಲ್ಲಿ ಇದ್ದಕ್ಕಿದ್ದಂತ ಚೀಟಿ ವ್ಯವಹಾರವನ್ನು ನಿಲ್ಲಿಸಿದಾಗ, ಹಣವನ್ನು ಕೇಳಲು ಹೋದಾಗ ಮನೆಯನ್ನು ಖಾಲಿ ...ಾಡಿಕೊಂಡು ಹೋಗಿರುವುದಾಗಿ ತಿಳಿದಿದ್ದು, ಶ್ರೀ ಕೆ.ಎಂ. ಪುಟ್ಟಸ್ವಾಮಿ ರವರು ತನಗೆ ಹಾಗೂ ಇತರರಿಗೆ ಮೋಸ ...ಾಡಿರುತ್ತಾರೆಂದು ನೀಡಿದ ದೂರಿನ ಮೇರೆಗೆ ಮಡಿವಾಳ ಪೊಲೀಸ್ ಠಾಣೆ ಮೊಕದ್ದಮೆ ಸಂಖ್ಯೆ: 295/06 ಕಲಂ 420 ...ಪಿಸಿ, ಮತ್ತು ಕಲಂ 3, 4 ಆಫ್ ಪ್ರೈಸ್ ಚಿಟ್ಸ್ ಅಂಡ್ ಮನಿ ಸರ್ಕ್ಯುಲೇಷನ್ ಸ್ಕೀಮ್ (ಬಿಸಿನೆಸ್) ಆಕ್ಟ್, 1978ರ ಪ್ರಕಾರ ...ಮಿನಲ್ ಮೊಕದ್ದಮೆ ದಾಖಲಾಗಿರುತ್ತದೆಂದು ತಿಳಿಸಿರುತ್ತಾರೆ.

ಈ ಎರಡೂ ಕೇಸುಗಳ ತನಿಖಾ ಕಾಲದಲ್ಲಿ ದಿನಾಂಕ: 8.5.2006 ರಂದು ಆರೋಪಿ ಕೆ.ಎಂ. ಪುಟ್ಟಸ್ವಾಮಿ ಇವರನ್ನು ...ಸ್ತಗಿರಿ ಮಾಡಿ ಈ ಆರೋಪಿಯನ್ನು ಮಾನ್ಯ 4 ಮತ್ತು 6ನೇ ಎ.ಸಿ.ಎಂ.ಎಂ. ನ್ಯಾಯಾಲಯಗಳ ಮುಂದೆ ಹಾಜರುಪಡಿಸಿದ್ದು, ...್ಯಯಾಲಯಗಳ ಆದೇಶದಂತೆ ಆರೋಪಿಯು ದಿನಾಂಕ 22.5.2006 ರವರೆಗೆ ನ್ಯಾಯಾಂಗ ಬಂಧನಕ್ಕೆ ...ದೇಶವಾಗಿರುವುದರಿಂದ, ಆರೋಪಿಯು ಪಾಲಿ ಕೇಂದ್ರ ಕಾರಾಗೃಹದಲ್ಲಿ ಇರುತ್ತಾನೆಂದು ತಿಳಿಸಿರುತ್ತಾರೆ.

ಕಮಾಂಡೆಂಟ್, 1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ರವರು ಮೇಲ್ಕಂಡ ವರದಿಗಳ ಹಿನ್ನೆಲೆಯಲ್ಲಿ ಶ್ರೀ ಕೆ.ಎಂ. ಪುಟ್ಟಸ್ವಾಮಿ, ಹೆಚ್‌ಸಿ-183 ಇವರನ್ನು ದಸ್ತಗಿರಿ ಮಾಡಲಾಗಿರುವ ದಿನಾಂಕ: 8.5.2006 ರಿಂದ ಜಾರಿಗೆ ಬರುವಂತೆ ಉಲ್ಲೇಖ (2)ರ ಪ್ರಕಾರ ಸೇವೆಯಿಂದ ಅಮಾನತ್ತುಗೊಳಿಸಿ ದಿನಾಂಕ: 6.6.2006 ರಂದು ಆದೇಶ ಹೊರಡಿಸಿರುತ್ತಾರೆ. ಈ ಸಂಬಂಧದಲ್ಲಿ ಕಮಾಂಡೆಂಟ್, 1ನೇ ಪಡೆ ರವರು ಕೆ.ಎಸ್.ಪಿ. (ಡಿ.ಪಿ.) ರೂಲ್ಸ್, 1965ರ ನಿಯಮ 6ರ ಅಡಿಯಲ್ಲಿ ವಿವರವಾದ ಇಲಾಖಾ ವಿಚಾರಣೆ ನಡೆಸಲು ಉಲ್ಲೇಖ (3)ರ ಆದೇಶದಲ್ಲಿ ಸಹಾಯಕ ಕಮಾಂಡೆಂಟ್, ಬಿ-ವಿಭಾಗ, 1ನೇ ಪಡೆ ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶ ಹೊರಡಿಸಿರುತ್ತಾರೆ.

ವಿಚಾರಣಾಧಿಕಾರಿಗಳು ತಮಗೆ ಪ್ರದತ್ತವಾದ ಅಧಿಕಾರ ಚಲಾಯಿಸಿ, ಆಪಾದಿತ ಪೊಲೀಸ್ ಅಧಿಕಾರಿಯವರ ವಿರುದ್ಧ ಈ ಕೆಳಕಂಡ ಆರೋಪಗಳನ್ನು ಹೊರಿಸಿ ಉಲ್ಲೇಖ (4)ರಲ್ಲಿ ದೋಷಾರೋಪಣಾ ಪತ್ರ ಹೊರಡಿಸಿರುತ್ತಾರೆ.

**ಆರೋಪ:**

ಶ್ರೀ ಕೆ.ಎಂ. ಪುಟ್ಟಸ್ವಾಮಿ, ಮುಖ್ಯ ಪೇದೆ 183, ಇ, ದಳ, 1ನೇ ಪಡೆ, ಕೆಎಸ್‌ಆರ್‌ಪಿ, ಆದ ನೀವು ಶ್ರೀ ಲಕ್ಷ್ಮಿವೆಂಕಟೇಶ್ವರ ಸ್ವಾಮಿ ಶ್ರೀ ಸೊಲ್ಲಾಪುರದಮ್ಮ ಹೆಸರಿನಲ್ಲಿ ಪಟಾಕಿ ಚೀಟಿ ನಡೆಸಿ ಕೆ.ಎಸ್.ಆರ್.ಪಿ. ಸಿಬ್ಬಂದಿಯವರು ಹಾಗೂ ಸಾರ್ವಜನಿಕರಿಂದ ಪ್ರತಿ ತಿಂಗಳು ರೂ.100-00 ಹಾಗೂ 200-00 ರಂತೆ ಹಣವನ್ನು ವಸೂಲಿ ಮಾಡಿ ವಾಪಸ್ ಕೊಡದೇ ಮೋಸ ಮಾಡಿರುತ್ತೀರಿ. ಹಾಗೂ ವೈಯಕ್ತಿಕ ತೊಂದರೆಯ ನೆಪ ಹೇಳಿಕೊಂಡು ಕೆ.ಎಸ್.ಆರ್.ಪಿ. ಸಿಬ್ಬಂದಿ ಹಾಗೂ ಸಾರ್ವಜನಿಕರಿಂದ ಲಕ್ಷಾಂತರ ರೂಪಾಯಿ ಸಾಲವಾಗಿ ಹಣ ವಸೂಲಿ ಮಾಡಿ ಅವರಿಗೆ ವಾಪಸ್ಸು ಕೊಡದೇ, ತನ್ನ ಖಾತೆಯಲ್ಲಿ ಹಣವಿಲ್ಲದೇ ಇದ್ದರು ಸಹ ಕೆಲವರಿಗೆ ಚೆಕ್ ನೀಡಿ ವಂಚಿಸಿರುವುದಲ್ಲದೇ ಸರ್ಕಾರಿ ವಸತಿ ಗೃಹದಲ್ಲಿ ವಾಸವಾಗಿದ್ದುಕೊಂಡು ರೂ.50,000-00 ಗಳ ಹಣದ ಚೀಟಿ ವ್ಯವಹಾರ ಮಾಡಿ ವಸತಿಗೃಹದ ಸಿಬ್ಬಂದಿಯವರಿಂದ ಮತ್ತು ಸಾರ್ವಜನಿಕರಿಂದ ಹಣ ವಸೂಲಿ ಮಾಡಿ ವಾಪಸ್ ಕೊಡದೇ ವಂಚಿಸಿರುತ್ತೀರಿ. ಹಾಗೂ ವೈಯಕ್ತಿಕ ತೊಂದರಯ ನೆಪ ಹೇಳಿಕೊಂಡು ಕೆ.ಎಸ್.ಆರ್.ಪಿ. ಸಿಬ್ಬಂದಿ ಹಾಗೂ ಸಾರ್ವಜನಿಕರಿಂದ ಲಕ್ಷಾಂತರ ರೂಪಾಯಿ ಹಣ ವಸೂಲಿ ಮಾಡಿ ಅವರಿಗೆ ವಾಪಸ್ಸು ಕೊಡದೇ, ಮೋಸಮಾಡಿದ್ದಕ್ಕಾಗಿ, ಮಡಿವಾಳ ಪೊಲೀಸ್ ಠಾಣೆಯಲ್ಲಿ ದಿನಾಂಕ: 24.04.2006 ರಂದು ಅಪರಾಧ ಸಂಖ್ಯೆ 271/06 ಕಲಂ 406,420 ಐ.ಪಿ.ಸಿ, ಮತ್ತು 3, 4, ಆಫ್ ಪ್ರೈಸ್ ಚಿಟ್ಸ್ ಅಂಡ್ ಮನಿ ಸರ್ಕ್ಯುಲೇಷನ್ ಸ್ಕೀಂ (ಬಿಸಿನೆಸ್) ಆಕ್ಟ್ 1978 ಮತ್ತು ದಿನಾಂಕ: 4.5.2006 ರಂದು ಅಪರಾಧ ಸಂಖ್ಯೆ. 295/06 ಕಲಂ 420 ಐ.ಪಿ.ಸಿ. ಮತ್ತು 3, 4, ಆಫ್‌ಪ್ರೈಸ್ ಚಿಟ್ಸ್ ಅಂಡ್ ಮನಿ ಸರ್ಕ್ಯುಲೇಷನ್ ಸ್ಕೀಂ (ಬಿಸಿನೆಸ್) ಆಕ್ಟ್ 1978 ಪ್ರಕಾರ 2 ಕ್ರಿಮಿನಲ್ ಪ್ರಕರಣಗಳು ದಾಖಲಾಗಲು ಕಾರಣರಾಗಿ ತನ್ಮೂಲಕ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿ, ಶಿಸ್ತಿನ ಪಡೆಯಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿದ್ದ ನೀವು ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಿಯಾಗಿ ಕರ್ತವ್ಯ ಲೋಪವೆಸಗಿ, ಸರ್ಕಾರಿ ನೌಕರರಿಗೆ ತಕ್ಕಂತಹ ನಡತೆಗೆ ವಿರುದ್ಧವಾಗಿ ಹಾಗೂ ಕೆ.ಎಸ್.ಪಿ. (ಕಂಡಕ್ಟ್) ರೂಲ್ಸ್, 1966ರ ನಿಯಮ 21 ಉಪನಿಯಮ 4, ಬಿ ಅನ್ನು ಉಲ್ಲಂಘಿಸಿ ತೀವ್ರ ಅಶಿಸ್ತು ಮತ್ತು ದುರ್ನಡತೆ ಪ್ರದರ್ಶಿಸಿರುತ್ತೀರಿ.

ವಿಚಾರಣಾಧಿಕಾರಿಗಳು ಉಲ್ಲೇಖ (5)ರಲ್ಲಿ ಸಲ್ಲಿಸಿರುವ ವರದಿಯಲ್ಲಿ, ದೋಷಾರೋಪಣಾ ಪತ್ರವನ್ನು ದಿನಾಂಕ: 23.10.2006 ರಂದು ಸ್ವೀಕರಿಸಿದ ಆಪಾದಿತ ಪೊಲೀಸ್ ಅಧಿಕಾರಿಯವರು ದಿನಾಂಕ: 6.12.2006 ರಂದು ದೋಷಾರೋಪಣಾ ಪತ್ರಕ್ಕೆ ಲಿಖಿತ ಉತ್ತರ ಸಲ್ಲಿಸಿದ್ದು, ತದನಂತರ ಪೊಲೀಸ್ ಮಿತ್ರರನ್ನು ನೇಮಿಸಿಕೊಳ್ಳಲು ಅನುಮತಿ ನೀಡಲಾಗಿದೆ. ಪ್ರಥಮ ಮೌಖಿಕ ಹೇಳಿಕೆಯನ್ನು ದಿನಾಂಕ: 22.12.2006 ರಂದು ದಾಖಲಿಸಿಕೊಳ್ಳಲಾಗಿದೆ. ದಿನಾಂಕ: 27.2.2007 ರಂದು ಇನ್ನು ಮುಂದೆ ಇಲಾಖಾ ವಿಚಾರಣೆಗೆ ತಪ್ಪದೇ ಹಾಜರಾಗುವುದಾಗಿ ಬರೆದುಕೊಟ್ಟಿದ್ದಾರೆ. ದಿನಾಂಕ: 6.3.2007 ರಂದು ಒಬ್ಬ ಅಭಿಯೋಗ ಸಾಕ್ಷಿದಾರರ ಹೇಳಿಕೆಯನ್ನು ಎ.ಪಿ.ಒ. ಮತ್ತು ಅವರ ಪೊಲೀಸ್ ಮಿತ್ರರ ಉಪಸ್ಥಿತಿಯಲ್ಲಿ ದಾಖಲಿಸಲಾಗಿದೆ. ತದನಂತರ, ಹಲವಾರು ಬಾರಿ ಸೂಚನಾ ಪತ್ರಗಳನ್ನು ಹೊರಡಿಸಲಾಗಿದ್ದು, ಆಪಾದಿತ ಪೊಲೀಸ್ ಅಧಿಕಾರಿಯವರು ಸ್ವಂತ ಊರಿನಲ್ಲೂ ಇಲ್ಲದೆ, ವಿಳಾಸವನ್ನು ಕೊಡದೆ ತಲೆಮರೆಸಿಕೊಂಡಿದ್ದಾರೆ. ಈ ಬಗ್ಗೆ ಖಚಿತ ಪಡಿಸಿಕೊಂಡ ನಂತರ ವಿಚಾರಣಾಧಿಕಾರಿಯವರು ಇಲಾಖಾ ವಿಚಾರಣೆಯಲ್ಲಿ ಒಟ್ಟು 20 ಜನ ಅಭಿಯೋಗ ಸಾಕ್ಷಿದಾರರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ದಾಖಲಿಸಿರುತ್ತಾರೆ. ಹಾಗೆಯೇ ಅಭಿಯೋಗದ ಪರವಾಗಿ 15 ಪ್ರದರ್ಶಿಕೆಗಳನ್ನು ಪ್ರದರ್ಶಿಸಿ ಪರಿಶೀಲಿಸಿ, ಅನಿವಾರ್ಯವಾಗಿ ಏಕಪಕ್ಷೀಯವಾಗಿ ಇಲಾಖಾ ವಿಚಾರಣೆಯನ್ನು ನಡೆಸಿದ್ದು, ಎಲ್ಲಾ ಅಂಶಗಳನ್ನು ಪರಿಶೀಲಿಸಿದ ನಂತರ ಆಪಾದಿತ ಪೊಲೀಸ್ ಅಧಿಕಾರಿಯವರ ಮೇಲೆ ಹೊರಿಸಲಾದ ಆಪಾದನೆಗಳು ಯಾವುದೇ ಪೂರ್ವಾನುಮಾನವಿಲ್ಲದೆ ಸಾಬೀತಾಗುತ್ತದೆಂದು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿರುತ್ತಾರೆ.

ವಿಚಾರಣಾಧಿಕಾರಿಗಳು ಸಲ್ಲಿಸಿರುವ ಉಲ್ಲೇಖ (5)ರ ವಿಚಾರಣಾ ವರದಿಯನ್ನು ಮುಂದಿನ ಕ್ರಮವಾಗಿ ಕಮಾಂಡೆಂಟ್, 1ನೇ ಪಡೆ ರವರು ಉಲ್ಲೇಖ (6)ರ ಪತ್ರದೊಂದಿಗೆ ಈ ಕಛೇರಿಗೆ ಕಳುಹಿಸಿರುತ್ತಾರೆ.

ವಿಚಾರಣಾಧಿಕಾರಿಯವರು ಸಲ್ಲಿಸಿರುವ ಇಲಾಖಾ ವಿಚಾರಣಾ ವರದಿಯನ್ನು, ಸಾಕ್ಷಿಗಳ ಹೇಳಿಕೆಗಳನ್ನು, ಸಂಗ್ರಹಿಸಿದ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ, ಆಪಾದಿತ ಪೊಲೀಸ್ ಅಧಿಕಾರಿಯವರ ವಿರುದ್ಧ ಹೊರಿಸಲಾದ ಆರೋಪಗಳು ಮೇಲ್ನೋಟಕ್ಕೆ ದೃಢಪಟ್ಟಿರುವುದು ಮನದಟ್ಟಾದ ನಂತರ **"ಸದರಿಯವರನ್ನು ಕೆ.ಪಿ.ಆಕ್ಟ್‌ನ ಸೆಕ್ಷನ್ 23 (ಬಿ) ಪ್ರಕಾರ ಸೇವೆಯಿಂದ ತೆಗೆದುಹಾಕುವ ಶಿಕ್ಷೆಯನ್ನು ವಿಧಿಸಲು"** ಪ್ರಸ್ತಾಪಿಸಿ ಉಲ್ಲೇಖ (7)ರಲ್ಲಿ ಕಾರಣ ಕೇಳುವ ಸೂಚನಾ ಪತ್ರವನ್ನು ಹೊರಡಿಸಿ ಕಮಾಂಡೆಂಟ್, 1ನೇ ಪಡೆ ರವರ ಮುಖಾಂತರ ಜಾರಿಗೊಳಿಸಲು ಕಳುಹಿಸಲಾಗಿತ್ತು.

ಕಮಾಂಡೆಂಟ್, 1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ಇವರು ಉಲ್ಲೇಖ (8)ರ ಪತ್ರದಲ್ಲಿ, ಆಪಾದಿತ ಪೊಲೀಸ್ ಅಧಿಕಾರಿಯು ವಾಸವಾಗಿದ್ದ 1ನೇ ಪಡೆ, ಕೆ.ಎಸ್.ಆರ್.ಪಿ. ಅಧೀನದ ಸರ್ಕಾರಿ ವಸತಿಗೃಹಕ್ಕೆ ತೆರಳಿ ನೋಡಿದಾಗ ಅವರು ಮನೆ

ಲಿ ವಾಸಿಸುವುದು ಕಂಡುಬಂದ ಕಾರಣ ಮತ್ತು ಅಲ್ಲಿ ಸದರಿ ಮುಖ್ಯ ಪೇದೆ ಇಲ್ಲದಿದ್ದರಿಂದ, ದಿನಾಂಕ: 21.2.2008 ದು ಅವರ ಸ್ವ-ಗ್ರಾಮವಾದ ಕುಣಿಗಲ್ ನಗರದ ದೊಡ್ಡಪೇಟೆ, ಶ್ರೀ ಶನಿದೇವರ ದೇವಾಲಯದ ಬೀದಿಯಲ್ಲಿರುವ ಮನೆ ಖ್ಯೆ: 95, ವಾರ್ಡ್ ಸಂಖ್ಯೆ-4ರಲ್ಲಿರುವ ಮನೆಗೆ ಸಿಬ್ಬಂದಿಯನ್ನು ಕಳಿಸಿದ್ದು, ಅಲ್ಲಿಯೂ ಸಹ ಆಪಾದಿತ ಪೊಲೀಸ್ ಧಿಕಾರಿಯವರು ಇಲ್ಲದಿದ್ದರಿಂದ, ಸದರಿಯವರ ತಾಯಿಯಾದ ಶ್ರೀಮತಿ ಚಿಕ್ಕಯಲ್ಲಮ್ಮ ನವರಿಗೆ ಕುಣಿಗಲ್ ಪೊಲೀಸ್ ಠಾಣೆಯ ಸಿಬ್ಬಂದಿಯ ಹಾಗೂ ಆ ಊರಿನ ಪಂಚರ ಸಮಕ್ಷಮ ಪಂಚನಾಮೆ ಮಾಡಿ, ಕಾರಣ ಕೇಳುವ ಸೂಚನಾ ಪತ್ರವನ್ನು ರಿ ಮಾಡಲಾಗಿದೆಯೆಂದು ತಿಳಿಸಿರುತ್ತಾರೆ.

ತದನಂತರ, ಉಲ್ಲೇಖ (9)ರ ಈ ಕಛೇರಿ ಪತ್ರದಲ್ಲಿ, ಸದರಿ ಕಾರಣ ಕೇಳುವ ಸೂಚನಾ ಪತ್ರವನ್ನು ರಾಜ್ಯ ಪತ್ರದಲ್ಲಿ ಕಟಿಸುವಂತೆ ಕೋರಿ ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು ಇವರನ್ನು ಕೋರಲಾಯಿತು. ಅದರಂತೆ ಲ್ಲೇಖ (10)ರಲ್ಲಿರುವ ಕರ್ನಾಟಕ ರಾಜ್ಯ ಪತ್ರದಲ್ಲಿ ಸದರಿ ಕಾರಣ ಕೇಳುವ ಸೂಚನಾ ಪತ್ರವನ್ನು ಪ್ರಕಟಿಸಲಾಗಿದೆ.

ಆಪಾದಿತ ಪೊಲೀಸ್ ಅಧಿಕಾರಿಯವರಿಗೆ ಸಾಕಷ್ಟು ಕಾಲಾವಕಾಶವನ್ನು ನೀಡಿದರೂ ಸಹ, ಅವರ ಇರುವಿಕೆಯ ಬಗ್ಗೆ ವರು ಯಾವುದೇ ಮಾಹಿತಿ ನೀಡಿರುವುದಿಲ್ಲ ಹಾಗೂ ಕಾರಣ ಕೇಳುವ ಸೂಚನಾ ಪತ್ರವನ್ನು ಆಪಾದಿತ ಪೊಲೀಸ್ ಧಿಕಾರಿಯವರ ಖಾಯಂ ವಿಳಾಸದಲ್ಲಿ ದಿನಾಂಕ: 21.2.2008 ರಂದು ಜಾರಿಗೊಳಿಸಿ ದಿನಾಂಕ: 28.8.2008 ರಂದು ರಾಜ್ಯ ತ್ರದಲ್ಲಿ ಪ್ರಕಟಿಸಿದ್ದಾಗ್ಯೂ ಇವರಿಗೆ, ಕಾರಣ ಕೇಳುವ ಸೂಚನಾ ಪತ್ರಕ್ಕೆ ಸಮಜಾಯಿಸಿ ಕೊಟ್ಟಿರುವುದಿಲ್ಲ. ಆದುದರಿಂದ, ಪಾದಿತ ಪೊಲೀಸ್ ಅಧಿಕಾರಿಯವರಲ್ಲಿ ಯಾವುದೇ ಸಮಜಾಯಿಷಿ ಇರುವುದಿಲ್ಲವೆಂದು ಪರಿಭಾವಿಸಿ ಶ್ರೀ ಕೆಂಪಯ್ಯ, ಪಿಎಸ್., ಶಿಸ್ತು ಪ್ರಾಧಿಕಾರಿ ಹಾಗೂ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕೆ.ಎಸ್.ಆರ್.ಪಿ., ಬೆಂಗಳೂರು ಆದ ನಾನು, ಪಾದಿತ ಪೊಲೀಸ್ ಅಧಿಕಾರಿಯ ವಿರುದ್ಧ ಈ ಕೆಳಕಂಡಂತೆ ಆದೇಶಿಸಿರುತ್ತೇನೆ.

**ಆದೇಶ ಸಂಖ್ಯೆ: ಡಿಇ/49/2007-08, ದಿನಾಂಕ: 11ನೇ ಡಿಸೆಂಬರ್ 2008**

ಶ್ರೀ ಕೆ.ಎಂ. ಪುಟ್ಟಸ್ವಾಮಿ, ಹೆಚ್‌ಸಿ-183, 1ನೇ ಪಡೆ, ಕೆ.ಎಸ್.ಆರ್.ಪಿ., ಬೆಂಗಳೂರು ಇವರನ್ನು ತಕ್ಷಣದಿಂದ ಜಾರಿಗೆ ರುವಂತೆ ಸರ್ಕಾರಿ ಸೇವೆಯಿಂದ ತೆಗೆದುಹಾಕಲಾಗಿದೆ. ಹಾಗೂ ಇವರನ್ನು ಅಮಾನತ್ತಿನಲ್ಲಿಟ್ಟ ದಿನಾಂಕ: 8.5.2006 ರಿಂದ ಈ ದೇಶ ಹೊರಡಿಸುವವರೆಗಿನ ಅವಧಿಯನ್ನು ಅಮಾನತ್ತೆಂದೇ ಪರಿಗಣಿಸಿದೆ.

**ಕೆಂಪಯ್ಯ**

.ಆರ್. 1409 ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ಕೆ.ಎಸ್.ಆರ್.ಪಿ., ಬೆಂಗಳೂರು.

## ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

**ನಂ: ಎಸ್‌ಡಿಕೆ/285/ಡಿಟಿಸಿಆರ್/2003-04, ದಿನಾಂಕ: 12ನೇ ಆಗಸ್ಟ್ 2008**

**ಉಪಸ್ಥಿತರು** ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

**ಫಿರ್ಯಾದುದಾರರು:**
ಅಬಕಾರಿ ಉಪ ನಿರೀಕ್ಷಕರು ಇಐಬಿ,
ಮಂಗಳೂರು ದ.ಕ.ಜಿಲ್ಲೆ

**ಆರೋಪಿಗಳು:**
1. ರಾಘವೇಂದ್ರ ಬಿನ್: ಪಿ.ರಾಮು, 3ನೇ ಅವೆನ್ಯೂ ಡೋರ್ ನಂ:7, ಎನ್.ಎಂ.ಪಿ.ಟಿ ಕಾಲೋನಿ, ಪಣಂಬೂರು (ಆಟೋರಿಕ್ಷಾ ಚಾಲಕ)
2. ಅಮಿತ್ ಕೆ.ನಾಯ್ಕ್ ಬಿನ್: ಕೆ.ಚಂದ್ರಕಾಂತ್ ನಾಯ್ಕ್, ಲಕ್ಷ್ಮಿದಾಮೋದರ ಮನೆ, ಕುಳಾಯಿ ಗ್ರಾಮ ಮತ್ತು ಅಂಚೆ, ಚಿತ್ರಾಪುರ, ಮಂಗಳೂರು.

**ಅರ್ಜಿದಾರರು**
1. ಶ್ರೀ ಗಣೇಶ್ ಎಸ್.ಭಟ್, ಬಿನ್: ವಾಸುದೇವ ಭಟ್, ಎಸ್.ವಿ.ಎಚ್. ಟೆಂಪಲ್ ಕಂಪೌಂಡ್, ಗುರುಪುರ.

**ಕರಣದ ಮುಖ್ಯಾಂಶಗಳು:**

ಅಬಕಾರಿ ಉಪ ನಿರೀಕ್ಷಕರು, ಇಐಬಿ, ದ.ಕ.ಜಿಲ್ಲೆ, ಮಂಗಳೂರುರವರು ದಿ:29.4.04 ರಂದು ರಾತ್ರಿ ಗಂಟೆ 10.15ಕ್ಕೆ ಂಗಳೂರು ತಾಲ್ಲೂಕು ಪಣಂಬೂರು ಮೀನಕಳಿಯದ ವೆಸ್ಟ್ ಕೋಸ್ಟ್ ಬ್ರೆವರೀಸ್ ಮುಂಭಾಗದಲ್ಲಿ ಆಟೋ ರಿಕ್ಷಾ ನೊಂದಣಿ ಂ:KA-19AC-3513 ಮತ್ತು ಕೆನೆಟಿಕ್ ಹೊಂಡಾ ಸ್ಕೂಟರ್ ಸಂ: KA-20H-6500 ರಲ್ಲಿ ಒಟ್ಟು 10 ರಟ್ಟಿನ ಪೆಟ್ಟಿಗೆಗಳಲ್ಲಿ 375 ಲಿಯ 240 ಬಾಟಲಿಗಳಲ್ಲಿ 90,000 ಲೀ ಅಕ್ರಮ ಮದ್ಯವನ್ನು ಹೊಂದಿ ಸಾಗಾಟ ಮಾಡುತ್ತಿದ್ದುದನ್ನು ಪತ್ತೆ ಹಚ್ಚಿ ರೋಪಿಗಳಾದ 1) ಶ್ರೀ ರಾಘವೇಂದ್ರ, ಬಿನ್: ಪಿ.ರಾಮು, 3ನೇ ಅವೆನ್ಯೂ ಡೋರ್ ನಂ:7, ಎನ್.ಎಂ.ಪಿ.ಟಿ ಕಾಲೋನಿ, ಣಂಬೂರು (ಆಟೋರಿಕ್ಷಾ ಚಾಲಕ) 2) ಆಟೋ ರಿಕ್ಷಾ ಮಾಲೀಕ-ಪತ್ತೆಹಚ್ಚಬೇಕಾಗಿದೆ. 3) ಶ್ರೀ ಅಮಿತ್ ಕೆ.ನಾಯ್ಕ್, ಬಿನ್: ಚಂದ್ರಕಾಂತ್ ನಾಯ್ಕ್, ಲಕ್ಷ್ಮೀ ದಾಮೋದರ ಮನೆ, ಕುಳಾಯಿ ಗ್ರಾಮ ಮತ್ತು ಅಂಚೆ, ಚಿತ್ರಾಪುರ, ಮಂಗಳೂರು 4) ಶ್ರೀ ಣೇಶ್ ಎಸ್.ಭಟ್, ಬಿನ್: ವಾಸುದೇವ ಭಟ್, ಎಸ್.ವಿ.ಎಚ್. ಟೆಂಪಲ್ ಕಂಪೌಂಡ್, ಗುರುಪುರ (ಕೆನೆಟಿಕ್ ಹೊಂಡಾ

ಮಾಲೀಕ) ಇವರುಗಳು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 11, 14(2)ರ ಪ್ರಕಾರ ಅಪರಾಧ ಮಾಡಿದ್ದು, ಕಲಂ 34, 38ಎರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ ಸದ್ರಿ ವಾಹನಗಳನ್ನು ಮತ್ತು 90.000 ಲೀ ಮದ್ಯವನ್ನು ಜಪ್ತಿಪಡಿಸಿಕೊಂಡು ಆರೋಪಿಗಳ ವಿರುದ್ಧ ಪ್ರಮಾ.ವ ಸಂಖ್ಯೆ 11/2003–04, ದಿನಾಂಕ: 29.04.04 ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ, ಮೊಕದ್ದಮೆಯ ಸೊತ್ತುಗಳನ್ನು ಹಾಗೂ ಕಡತಗಳನ್ನು ಅಬಕಾರಿ ಉಪ ನಿರೀಕ್ಷಕರು, ಕೂಳೂರು ಉಪ ವಲಯ ಇವರಿಗೆ ಹಸ್ತಾಂತರಿಸಲು ಅಂದಿನ ಪ್ರಾಧಿಕಾರದಿಂದ ಅನುಮತಿಯನ್ನು ನೀಡಲಾಗಿರುತ್ತದೆ. ಇಲಾಖೆಯ ಪುನರ್‌ರಚನೆಯ ತರುವಾಯ ತಾಲ್ಲೂಕು ಜಾರಿ ಮತ್ತು ತನಿಖಾ ಕಛೇರಿ ಆರಂಭಗೊಂಡಿರುವುದರಿಂದ ಮೊಕದ್ದಮೆಯ ಸೊತ್ತು ಹಾಗೂ ಕಡತವನ್ನು ಅಧಿಕಾರ ವ್ಯಾಪ್ತಿಯ ಅಬಕಾರಿ ಉಪ ನಿರೀಕ್ಷಕರು, ಮಂಗಳೂರು ಉತ್ತರ ಜಾರಿ ಮತ್ತು ತನಿಖೆರವರಿಗೆ ಮುಂದಿನ ತನಿಖೆಗಾಗಿ ಹಸ್ತಾಂತರಗೊಂಡಿರುತ್ತದೆ.

ಮೇಲ್ಕಂಡ ಮೊಕದ್ದಮೆಯಲ್ಲಿ ಜಪ್ತಾದ ವಾಹನಗಳ ಪೈಕಿ ನೊಂದಣಿ ಸಂ: KA-19AC-3513 ಆಟೋರಿಕ್ಷಾವನ್ನು ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ, ದ.ಕ.ಜಿಲ್ಲೆ, ಮಂಗಳೂರು ಇವರ ಪ್ರಾಧಿಕಾರದ ಆದೇಶ ಸಂ:ಎಸ್‌ಡಿಕೆ:285:ಡಿಟಿಸಿಆರ್:2003–04 ದಿ:13.2.2008 ರಂದು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗಿರುತ್ತದೆ.

ದಿನಾಂಕ:10.5.2004ರಂದು ಪ್ರಕರಣದಲ್ಲಿ ಜಪ್ತಿಪಡಿಸಿರುವ ವಾಹನಗಳ ಪೈಕಿ ಕೆನೈಟಿಕ್ ಹೊಂಡಾ ಸ್ಕೂಟರ್ ಸಂ: KA-20H-6500 ಇದರ ಆರ್.ಸಿ. ಮಾಲೀಕರೆಂದು ಹೇಳಿಕೊಂಡ ಶ್ರೀ ಗಣೇಶ್ ಎಸ್.ಭಟ್, ಬಿನ್: ವಾಸುದೇವ ಭಟ್, ಜಿ–3 ಆಶ್ರಯ ಎಪಾರ್ಟ್‌ಮೆಂಟ್, ಮಹಾಮ್ಮಾಯಿ ದೇವಸ್ಥಾನ ರಸ್ತೆ, ಕಾರ್‌ಸ್ಟ್ರೀಟ್, ಮಂಗಳೂರು ಇವರು ತಮ್ಮ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ಅರ್ಜಿಯೊಂದನ್ನು ಸಲ್ಲಿಸಿ ವಾಹನದ ಮಧ್ಯಂತರ ಬಿಡುಗಡೆಗೆ ಕೋರಿದ್ದು, ಈ ಪ್ರಾಧಿಕಾರವು ಅರ್ಜಿದಾರರ ಮಧ್ಯಂತರ ಬಿಡುಗಡೆಯ ಅರ್ಜಿಯನ್ನು ಪುರಸ್ಕರಿಸಿ ದಿ:9.8.2004ರ ಆದೇಶದಲ್ಲಿ ರೂ.7,000/- ಬ್ಯಾಂಕ್ ಗ್ಯಾರಂಟಿ ಭದ್ರತೆಯಾಗಿ ಪ್ರಾಧಿಕಾರಕ್ಕೆ ಒದಗಿಸುವ ಷರತ್ತಿಗೆ ಅನುಗುಣವಾಗಿ ವಾಹನವನ್ನು ವಾಹನದ ಆರ್.ಸಿ. ಮಾಲೀಕರ ಮಧ್ಯಂತರ ಸುಪರ್ಧಿಗೆ ಬಿಡುಗಡೆ ಮಾಡಿ ಆದೇಶ ನೀಡಿರುತ್ತದೆ.

ಈ ಪ್ರಕರಣದಲ್ಲಿ ಜಪ್ತು ಪಡಿಸಲಾಗಿದ್ದ ಮದ್ಯದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದ್ದು, ಮದ್ಯದ ಮದ್ಯಸಾರದ ಪ್ರಮಾಣ 43.0% ಇರುವುದೆಂದು ದೃಢೀಕೃತವಾಗಿದ್ದು ಹಾಗೂ ಮದ್ಯದ ಬಣ್ಣ ಮಾಸಿ ಹೋಗಿ, ಮಾನವನ ಸೇವನೆಗೆ ಅನುಕೂಲಕರವಾಗಿಲ್ಲವಾದ ಕಾರಣ ಜಪ್ತುಪಡಿಸಲಾದ 90.000 ಲೀ ಮದ್ಯವನ್ನು (ಮಾದರಿ ಹೊರತುಪಡಿಸಿ) ಈ ಪ್ರಾಧಿಕಾರದ ದಿ:13.2.2008ರ ಆದೇಶದಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಳ್ಳಲಾದ ಮದ್ಯವನ್ನು ನಾಶಪಡಿಸಲು ಆದೇಶಿಸಲಾಗಿರುತ್ತದೆ.

ಈ ಪ್ರಕರಣದಲ್ಲಿ ಜಪ್ತಾದ ಕೆನೈಟಿಕ್ ಹೊಂಡಾ ಸ್ಕೂಟರ್ ಸಂ: KA-20H-6500 ರ ವಾಹನದ ಮಾಲೀಕರಿಗೆ ಈ ಪ್ರಾಧಿಕಾರವು ದಿ:14.9.2004 ರಂದು ಕಾರಣ ಕೇಳಿ ನೋಟೀಸನ್ನು ನೀಡಲಾಗಿದ್ದು, ಸದ್ರಿ ನೋಟಿಸು ವಾಹನದ ಮಾಲೀಕರಿಗೆ ದಿ:21.9.04 ರಂದು ಜಾರಿಯಾಗಿದ್ದು, ಸದ್ರಿ ನೋಟಿಸಿಗೆ ವಾಹನದ ಮಾಲೀಕರು ದಿ:23.9.04ರಂದು ಪ್ರಾಧಿಕಾರಕ್ಕೆ ಉತ್ತರ ಸಲ್ಲಿಸಿ ತನ್ನ ವಾಹನವನ್ನು ಮನೆಯ ಶೆಡ್ಡಿನಲ್ಲಿ ಇಟ್ಟು ತಾನು ಮದುವೆಯ ನಿಮಿತ್ತ ಶಿವಮೊಗ್ಗಕ್ಕೆ ಹೋಗಿರುವ ಸಂದರ್ಭದಲ್ಲಿ ಸದ್ರಿ ವಾಹನವನ್ನು ಯಾರೋ ಕಳವು ಮಾಡಿ ಅಕ್ರಮದಲ್ಲಿ ತೊಡಗಿಸಿಕೊಂಡಿದ್ದು, ಈ ಅಕ್ರಮಕ್ಕೂ ತನಗೂ ಯಾವುದೇ ಸಂಬಂಧವಿಲ್ಲವೆಂದು ವಿವರಣೆ ನೀಡಿರುತ್ತಾರೆ. ಸದ್ರಿಯವರ ಹೇಳಿಕೆಯ ಸತ್ಯಾಸತ್ಯತೆಯನ್ನು ಪರಾಂಭರಿಸಲು ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡವಳಿಯನ್ನು ನಡೆಸಲು ತೀರ್ಮಾನಿಸಲಾಯಿತು.

ನಂತರ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಸರ್ಕಾರದ ಪರ ಇಬ್ಬರು ಸಾಕ್ಷಿದಾರರನ್ನು ವಿಚಾರಣೆ ಮಾಡಿರುತ್ತಾರೆ. ಅಭಿಯೋಗದ ಪರ ಸಾಕ್ಷಿ ನೀಡಿದ ಶ್ರೀ ಯು.ಪ್ರಭಾಕರ, ಅಬಕಾರಿ ನಿರೀಕ್ಷಕರು, ಗುಪ್ತವಾರ್ತಾದಳ, ಮಂಗಳೂರು ಪ್ರಾ.ಸಾ–1: ಇವರು ತಾನು 1994 ರಿಂದ ಅಬಕಾರಿ ಗುಪ್ತ ವಾರ್ತದಳ ಮಂಗಳೂರು ಇಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದು, ದಿ:29.4.2004ರಂದು ರಾತ್ರಿ ಸಮಯ ಸಿಬ್ಬಂದಿಯವರೊಂದಿಗೆ ಮಂಗಳೂರು ತಾಲ್ಲೂಕು ಪಣಂಬೂರು ಬೀಚ್ ಪಕ್ಕದಲ್ಲಿ ಅಕ್ರಮ ಮದ್ಯ ಮಾರಾಟ ಹಾಗೂ ಸಾಗಾಟವನ್ನು ಪತ್ತೆ ಹಚ್ಚಲು ಗಸ್ತು ಕರ್ತವ್ಯದಲ್ಲಿದ್ದೆವು. ಆ ಸಮಯದಲ್ಲಿ ವೆಸ್ಟ್ ಪೋಸ್ಟ್‌ಬ್ರೆವರೇಜ್ ನ ಎದುರು ಭಾಗದ ಅಡ್ಡ ರಸ್ತೆಯ ಪಕ್ಕದಲ್ಲಿ ಒಂದು ಆಟೋರಿಕ್ಷಾ ಮತ್ತು ಸ್ಕೂಟರ್ ನಿಂತಿದ್ದು, ಅದರಲ್ಲಿ ಇಬ್ಬರು ವ್ಯಕ್ತಿಗಳು ಇದ್ದು, ಒಬ್ಬಾತ ಆಟೋರಿಕ್ಷಾದಿಂದ ಸ್ಕೂಟರ್‌ಗೆ ಒಂದು ರಟ್ಟಿನ ಪೆಟ್ಟಿಗೆಯನ್ನು ಹಸ್ತಾಂತರಿಸುವುದನ್ನು ಕಂಡು ಅನುಮಾನಗೊಂಡು ಪಕ್ಕದಲ್ಲಿ ಹೋಗಿ ನೋಡಲಾಗಿ ಸ್ಕೂಟರಲ್ಲಿ ಹಾಗೂ ರಿಕ್ಷಾದಲ್ಲಿ ರಟ್ಟಿನ ಪೆಟ್ಟಿಗೆಗಳು ಇರುವುದನ್ನು ನೋಡಿದೆವು ಎಂದೂ, ರಟ್ಟಿನ ಪೆಟ್ಟಿಗೆಗಳಲ್ಲಿ ಏನಿದೆ ಎಂದು ಕೇಳಲಾಗಿ ಸದ್ರಿ ವ್ಯಕ್ತಿಗಳು ಸಮರ್ಪಕವಾದ ಉತ್ತರವನ್ನು ನೀಡದೇ ಇದ್ದುದರಿಂದ ಕೂಡಲೇ ವಾಹನಗಳನ್ನು ತಪಾಸಣೆ ಮಾಡಬೇಕಾಗಿ ಬಂದುದ್ದರಿಂದ ಈ ಬಗ್ಗೆ ನ್ಯಾಯಾಲಯದಿಂದ ವಾರೆಂಟ್ ತರಲು ಕಾಲವಕಾಶವಿಲ್ಲದ ಕಾರಣ ಸರ್ಚ್‌ಮೆಮೋ ಒಂದನ್ನು ತಯಾರಿಸಿ ರಿಕ್ಷಾವನ್ನು ಶೋಧನೆ ಮಾಡಿದಾಗ ರಿಕ್ಷಾದಲ್ಲಿ ಪ್ರಯಾಣಿಕರು ಕೂರುವ ಸೀಟಿನ ಮೇಲೆ 8 ರಟ್ಟಿನ ಪೆಟ್ಟಿಗೆಗಳು ಇದ್ದವು ಎಂದೂ, ಅದನ್ನು ತೆರೆದು ನೋಡಿದಾಗ ಪ್ರತಿಯೊಂದು ರಟ್ಟಿನ ಪೆಟ್ಟಿಗೆಯಲ್ಲಿ ತಲಾ 2 ಬಾಟಲಿಗಳಂತೆ 375 ಎಂಎಲ್ ಗಾತ್ರದ ರಾಕೇಟ್ ವಿಸ್ಕಿ ಎಂಬ ಬ್ರಾಂಡಿನ ಬಾಟಲಿಗಳು ಇದ್ದವು ಎಂದೂ, ಸದ್ರಿ ಮದ್ಯ ತುಂಬಿದ ಪೆಟ್ಟಿಗೆಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ಮತ್ತು ಸಾಗಾಟ ಮಾಡಲು ಸದ್ರಿ ವ್ಯಕ್ತಿಗಳಲ್ಲಿ ಯಾವುದೇ ದಾಖಲೆಗಳು ಇರಲಿಲ್ಲವೆಂದು ಮಹಜರು ಸ್ಥಳಕ್ಕೆ ಸ್ಥಳೀಯರನ್ನು ಸಾಕ್ಷಿದಾರರನ್ನು ಕರೆದು ತರಲು ಪ್ರಯತ್ನಿಸಲಾದರೂ ಯಾರೂ ಸಿಕ್ಕಲಿಲ್ಲವೆಂದೂ ನಂತರ ಸ್ಥಳದಲ್ಲಿ ಸಿಬ್ಬಂದಿಯವರನೇ ಸಾಕ್ಷಿದಾರರನ್ನಾಗಿ ಇಟ್ಟುಕೊಂಡು ಎರಡು ವಾಹನಗಳಲ್ಲಿದ್ದ 10 ರಟ್ಟಿನ ಪೆಟ್ಟಿಗೆಗಳಲ್ಲಿದ್ದ ತಲಾ 1 ರಂತೆ 10

ಬಾಟಲಿಗಳನ್ನು ಮಾದರಿಯಾಗಿ ಪ್ರತ್ಯೇಕಿಸಿ ಬಾಟಲಿಗಳ ಬಾಯಿಗೆ ಬಟ್ಟೆದಾರ ಕಟ್ಟಿ ಇಲಾಖಾ ಸೀಲು ಮಾಡಿ ಮುದ್ರಿಸಿದೆವು ಎಂದು, ಸ್ಥಳದಲ್ಲಿ ಮಾದರಿ ಸೀಲನ್ನು ತಯಾರಿಸಿ ಮಾದರಿ ಸೀಸೆಗಳಿಗೆ ಆರೋಪಿತರ ಹೆಸರು ವಿಳಾಸವಿರುವ ಗುರುತಿನ ಚೀಟಿಗಳನ್ನು ಅಂಟಿಸಲಾಯಿತ್ತೆಂದು, ಸ್ಥಳದಲ್ಲಿದ್ದ 2 ವಾಹನ ನೊಂದಣಿ ಸಂಖ್ಯೆಗಳನ್ನು ಮಹಜರಿನಲ್ಲಿ ನಮೂದಿಸಿ ಕೊಳ್ಳಲಾಯಿತ್ತು, ರಿಕ್ಷಾದ ಎದುರು ಭಾಗದಲ್ಲಿ ಗ್ಲಾಸಿನ ಕೆಳಗಡೆ ಹಳದಿ ಬಣ್ಣ ಬಳಿದು ದುರ್ಗಾಂಭ ಎಂದು ಆಂಗ್ಲ ಭಾಷೆಯಲ್ಲಿ ಬರೆಯಲಾಗಿದ್ದು, ಅದರ ಕೆಳಭಾಗದಲ್ಲಿ ಶ್ರೀ ನಂದನೇಶ್ವರ ಎಂದು ಗ್ಲಾಸಿನ ಮೇಲ್ಭಾಗದಲ್ಲಿ ಜೈ ಮಾರುತಿ ಎಂದು ಬರೆಯಲಾಗಿತ್ತೆಂದೂ, ಸ್ಥಳದಲ್ಲಿ ಮಹಜರನ್ನು ತಯಾರಿಸಲಾಗಿತ್ತೆಂದೂ, ರಿಕ್ಷಾಕ್ಕೆ ಸಂಬಂಧಿಸಿದ ಆರ್.ಸಿ. ಪುಸ್ತಕ ಅಲ್ಲಿ ಇರಲಿಲ್ಲ, ಸ್ಕೂಟರಿಗೆ ಸಂಬಂಧಿಸಿದ ಆರ್.ಸಿ. ಪುಸ್ತಕ ಮತ್ತು ಟ್ಯಾಕ್ಸ್ ಕಾರ್ಡು ಇತ್ತೆಂದು ಅವುಗಳನ್ನು ವಶಕ್ಕೆ ತೆಗೆದುಕೊಂಡು, ಸ್ಥಳದಲ್ಲಿದ್ದ 2 ವಾಹನವನ್ನು ಮತ್ತು ಮದ್ಯ ತುಂಬಿದ ರಟ್ಟಿನ ಪೆಟ್ಟಿಗೆಗಳನ್ನು ಜಪ್ತುಪಡಿಸಿಕೊಂಡು 2 ಜನ ಆರೋಪಿತರನ್ನು ವಶಕ್ಕೆ ತೆಗೆದುಕೊಂಡು ಸೊತ್ತು ಸಮೇತ ಕಛೇರಿಗೆ ಬಂದೆವು, ಅಲ್ಲಿ ಪ್ರ.ಮಾ. ವರದಿ ಸಂ: 11/2003-04ರ ಪ್ರಕಾರ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಪ್ರತಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ, ಶ್ರೀ ಎಂ.ಆರ್. ರಾಮದಾಸ್ ಇವರ ಮುಖಾಂತರ ದಿ:22.5.2004ರಂದು ಮಾದರಿ ಸೀಸೆಗಳನ್ನು ರಾಸಾಯನಿಕ ತಜ್ಞರ ಪರೀಕ್ಷೆಗೆ ಕಳುಹಿಸಿರುತ್ತೇನೆ. ದಿ:8.10.2004 ರಂದು ತಜ್ಞರು ಪರೀಕ್ಷಿಸಿದ ಮಾದರಿ ಸೀಸೆಗಳನ್ನು ಮತ್ತು ವರದಿಯನ್ನು ಸ್ವೀಕರಿಸಿರುತ್ತೇನೆ. ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದ.ಕ.ಜಿಲ್ಲೆ, ಮಂಗಳೂರು ಇವರಿಗೆ ದಿ:6.5.2004 ರಂದು ಒಂದು ವರದಿಯನ್ನು ಸಲ್ಲಿಸಿ, ವಶಪಡಿಸಿಕೊಂಡಿರುವ ಸೊತ್ತುಗಳನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಳ್ಳಲು ಅನುಮತಿ ಕೋರಿ ಹಾಗೂ ದಿ:22.2.2005 ರಂದು ಇನ್ನೊಂದು ವರದಿಯನ್ನು ಸಲ್ಲಿಸಿ ಮದ್ಯದ ಬಾಟಲಿಗಳನ್ನು ವಿಲೇವಾರಿ ಮಾಡಲು ಅನುಮತಿ ಕೋರಿರುತ್ತೇನೆ. ಸಾಕ್ಷಿ ವಿಚಾರಣೆ ವೇಳೆಯಲ್ಲಿ ಪ್ರಾ.ಸಾ-1ರವರು ಪ್ರಾಧಿಕಾರದ ಮುಂದೆ ಸಾಕ್ಷ್ಯ ನೀಡುತ್ತಾ, ಅಧಿಕೃತ ಅಧಿಕಾರಿಗಳಿಗೆ ಬರೆದ ವರದಿಯನ್ನು ನಿಶಾನೆ ಪಿ-1 ಎಂದೂ, ಮಹಜರು ಪ್ರತಿಯನ್ನು ನಿಶಾನೆ ಪಿ-2 ಎಂದೂ, ಪ್ರ.ವ.ವರದಿಯನ್ನು ನಿಶಾನೆ ಪಿ-3 ಎಂದೂ, ರಾಸಾಯನಿಕ ತಜ್ಞರು ನೀಡಿದ ವಿಶ್ಲೇಷಣಾ ವರದಿಯನ್ನು ನಿಶಾನೆ ಪಿ-4 ಎಂದೂ, ಮಾದರಿ ಸೀಲನ್ನು ನಿಶಾನೆ ಪಿ-5 ಎಂದೂ, ಸಾಕ್ಷಿ ವಿಚಾರಣೆ ವೇಳೆಯಲ್ಲಿ ಪಿಡಬ್ಲ್ಯೂ-1 ರವರು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿದಾರರು ವಾಹನ KA-20H-6500 ಇದರ ಮಾಲೀಕರ ಪರ ವಕೀಲರ ಪಾಟಿ ಸವಾಲಿಗೆ ಉತ್ತರಿಸುತ್ತಾ ಮಹಜರನ್ನು ತಯಾರಿಸುವ ಸಮಯದಲ್ಲಿ ಸ್ಥಳದ ಚೆಕ್ ಬಂದಿಯನ್ನು ಮಹಜರಿನಲ್ಲಿ ಬರೆದಿರುವುದಿಲ್ಲ. ಮಹಜರು ಸಮಯದಲ್ಲಿ ಹಾಜರಿದ್ದ ನಮ್ಮ ಸಿಬ್ಬಂದಿಗಳ ಸಂಪೂರ್ಣ ವಿವರವನ್ನು ಮಹಜರಿನಲ್ಲಿ ನಾನು ಬರೆದಿರುವುದಿಲ್ಲ, ತಕ್ಷೀರು ಸ್ಥಳಕ್ಕೆ ಹೋಗುವ ಮುನ್ನ ತಕ್ಷೀರಿನ ಬಗ್ಗೆ ಯಾವುದೇ ಪೂರ್ವ ಮಾಹಿತಿ ಇರಲಿಲ್ಲ, ತಕ್ಷೀರು ಸ್ಥಳಕ್ಕೆ ಇಲಾಖಾ ಜೀಪಿನಲ್ಲಿ ಹೋಗಿರುತ್ತೇವೆ, ಇಲಾಖಾ ಜೀಪಿನಲ್ಲಿ ಹೋದ ವಿಷಯವನ್ನು ಮಹಜರಿನಲ್ಲಿ ನಮೂದಿಸಿಲ್ಲವೆಂದರೆ ಸರಿ, ನಾವು ಒಟ್ಟು 5 ಜನ ಸಿಬ್ಬಂದಿಗಳು ಇದ್ದೆವು. ಅದರಲ್ಲಿ ಇಬ್ಬರ ಹೆಸರು ನೆನಪಿಲ್ಲ. ಇಲಾಖಾ ಜೀಪಿನ ಚಾಲಕ ಹೆಸರು ಈಗ ನೆನಪಿಲ್ಲ. ಇಲಾಖಾ ಜೀಪಿನಲ್ಲಿ ನಾವು ಹೊರಡುವಾಗ ರಾತ್ರಿ 8-00 ಗಂಟೆಯಾಗಿತ್ತು. ತಕ್ಷೀರು ಸ್ಥಳಕ್ಕೆ ತಲುಪುವಾಗ ಸಾಧಾರಣ 10-15 ಕಿ.ಮಿ ದೂರ ಬೇರೆ ಕಡೆ ಕ್ರಮಿಸಿದ್ದೇವೆ. ಆ ದಿನ ಈ ಪ್ರಕರಣಕ್ಕೆ ಸಂಬಂಧಿಸಿದ ವಾಹನ ಮತ್ತು ಸ್ಕೂಟರನ್ನು ಹೊರತುಪಡಿಸಿ, ಬೇರೆ ಯಾವುದೇ ಅಕ್ರಮ ವಶಪಡಿಸಿಕೊಂಡಿಲ್ಲ. ಆ ದಿನ ನಾವು ದಕ್ಷಿಣದಿಂದ ಉತ್ತರಕ್ಕೆ ರಸ್ತೆಯಲ್ಲಿ ಹೋಗುತ್ತಿದ್ದೇವು. ಸದ್ರಿ ರಸ್ತೆಯ ಹೆಸರು ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದ ವಾಹನ ಹಾಗೂ ಆರೋಪಿತರು ಪಶ್ಚಿಮ ರಸ್ತೆಯಲ್ಲಿ ನಿಂತಿದ್ದರು. ಆಜಾಗವು ಪಕ್ಕದ ಮಣ್ಣಿನ ರಸ್ತೆಯ ಮೇಲಿತ್ತು. 2 ವಾಹನಗಳು ಪಶ್ಚಿಮಕ್ಕೆ ಮುಖ ಮಾಡಿ ನಿಂತಿದ್ದವು. ಮೀನಕಳಿಯ ಎಂಬಲ್ಲಿ ಎಷ್ಟು ರಸ್ತೆಗಳಿವೆ ಎಂಬುದು ಗೊತ್ತಿಲ್ಲ. ಮೀನಕಳಿಯ ಎಂಬುವುದು ಒಂದು ಸ್ಥಳದ ಹೆಸರು, ಸದ್ರಿ ರಸ್ತೆಯು ಎಷ್ಟನೇ ಅಡ್ಡರಸ್ತೆ ಎಂಬುವುದು ಗೊತ್ತಿಲ್ಲ. ತಕ್ಷೀರು ಸ್ಥಳದ ಸ್ವಲ್ಪ ದೂರದಲ್ಲಿ ಮನೆಗಳು ಇದ್ದವು. ಆ ಸಮಯದಲ್ಲಿ ಕೇಂದ್ರ ಸರ್ಕಾರದ ಸಿ.ಐ.ಎಸ್ ಪಡೆಗಳ ಕಛೇರಿಗಳು ಇರಲಿಲ್ಲ. ತಕ್ಷೀರು ಸ್ಥಳದಿಂದ 2 ಕಿ.ಮೀ. ದೂರದಲ್ಲಿ ಪೊಲೀಸ್ ಠಾಣೆ ಇರುತ್ತದೆ. ಸ್ಥಳದಲ್ಲಿ 2-3 ಗಜ ಅಂತರದಲ್ಲಿ ಇರುವ ಒಂದು ದಾರಿ ದೀಪದ ಅಡಿಯಲ್ಲಿ ನಿಂತು ಮಹಜರು ಬರೆದಿರುತ್ತೇನೆ. ಸ್ವತಂತ್ರ ಸಾಕ್ಷಿದಾರರು ಯಾರು ಬರಲಿಲ್ಲ, ಹೆಸರು ವಿಳಾಸವನ್ನು ಸಹಾ ಬರೆದುಕೊಂಡಿಲ್ಲ. ವೆಸ್ಟ್ ಕೋಸ್ಟ್ ಬ್ರೆವರೇಜ್ ಅದು ಒಂದು ಡಿಸ್ಟಿಲರಿ ಎಂದರೆ ನಿಜ, 2004ರಲ್ಲಿ ಸದ್ರಿ ಡಿಸ್ಟಿಲರಿಯಲ್ಲಿ ಸಾಕಷ್ಟು ಸಿಬ್ಬಂದಿಗಳು ಇದ್ದರು ಎನ್ನುವುದು ಸರಿಯಲ್ಲ ಅದನ್ನು ಆ ಸಮಯದಲ್ಲಿ ಮುಚ್ಚಲಾಗಿತ್ತು. ಸದ್ರಿ ಡಿಸ್ಟಿಲರಿ ಒಂದು ವಿಶಾಲವಾದ ಸ್ಥಳವಿದ್ದು, ಅಲ್ಲಿ ಒಂದು ಎಕ್ಸೈಜ್ ಗೋಡೌನ್ ಇರಬಹುದು ಆದರೆ ನಾನು ಅಲ್ಲಿಗೆ ಹೋಗಲಿಲ್ಲ. ಸಾಮಾನ್ಯವಾಗಿ ಎಕ್ಸೈಜ್ ಗೋಡೌನ್‌ನಲ್ಲಿ ಅಬಕಾರಿ ವಸ್ತುಗಳು ಇರುತ್ತದೆ ಎಂದರೆ ಸರಿ, ವಶಪಡಿಸಿಕೊಂಡ ರಟ್ಟಿನ ಪೆಟ್ಟಿಗೆಗಳಲ್ಲಿ ಕ್ರಮ ಸಂಖ್ಯೆ ಮತ್ತು ಮೊಕದ್ದಮೆ ಸಂಖ್ಯೆ ನಮೂದಿಸಿರುತ್ತೇನೆ, ಮಾದರಿ ಸೀಸೆಗಳಿಗೆ ಕ್ರಮ ಸಂಖ್ಯೆ ಮತ್ತು ಮೊಕದ್ದಮೆ ಸಂಖ್ಯೆ ನಮೂದಿಸಿರುತ್ತೇನೆ. ಕ್ರಮ ಸಂಖ್ಯೆ ಮತ್ತು ಮೊಕದ್ದಮೆ ಸಂಖ್ಯೆ ಯಾದಾಸ್ತಿನಲ್ಲಿ ನಮೂದಿಸಿರುವುದಿಲ್ಲ. ವಶಪಡಿಸಿಕೊಂಡ ವಾಹನಗಳ ನೊಂದಣಿ ಮಾಲೀಕರು ಯಾರು ಎಂಬುವುದು ನಂತರ ಗೊತ್ತಾಯಿತು. ಪ್ರಕರಣದಲ್ಲಿ ಅವರನ್ನು ಕರೆಯಿಸಿ ವಿಚಾರಣೆ ಮಾಡಿಲ್ಲ. ಸ್ಕೂಟರಿನ ನೊಂದಣಿ ಮಾಲೀಕರನ್ನು ಆರೋಪಿಯೆಂದು ನೋಂದಣಿ ಮಾಲೀಕರಾದ ಕಾರಣ ನಮೂದಿಸಿರುತ್ತೇನೆ. ಗಣೇಶ್ ಭಟ್ ಎಂಬುವರ ವಿರುದ್ಧ ವಾಹನಕ್ಕೆ ಸಂಬಂಧಿಸಿದ ಆರ್.ಸಿ. ಪುಸ್ತಕ ಹೊರತುಪಡಿಸಿ, ಬೇರೆ ಯಾವುದೇ ಸಾಕ್ಷ್ಯಾಧಾರ ಲಭ್ಯವಿಲ್ಲವೆಂದರೆ ಸರಿ. ನಾನು ಆ ದಿವಸ ಮೀನಕಳಿಯ ಎಂಬ ಸ್ಥಳಕ್ಕೆ ಹೋದದ್ದೆ ಇಲ್ಲ ಎನ್ನುವುದು ಸರಿಯಲ್ಲ. ತಕ್ಷೀರು ಸ್ಥಳದಲ್ಲಿ ಯಾವುದೇ ಮಹಜರು ಮಾಡಿಲ್ಲ ಎನ್ನುವುದು ಸರಿಯಲ್ಲ, ಮಹಜರನ್ನು ನಮ್ಮ ಕಛೇರಿಯಲ್ಲಿ ತಯಾರಿಸಿರುತ್ತೇನೆ ಎನ್ನುವುದು ಸರಿಯಲ್ಲ, ಆದಿನ ವಾಹನಗಳಿಂದ ಯಾವುದೇ ಮದ್ಯದ ಬಾಟಲಿಗಳನ್ನು ವಶಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ, ವಾಹನಗಳ ವಿರುದ್ಧ ಸುಳ್ಳು ಮೊಕದ್ದಮೆ ದಾಖಲಿಸಿರುತ್ತೇನೆ

ಎನ್ನುವುದು ಸರಿಯಲ್ಲ. ನಾವು ವಶಪಡಿಸಿಕೊಂಡ ಮದ್ಯದ ಬಾಟಲಿಗಳನ್ನು ನಮ್ಮ ಕಛೇರಿಯಲ್ಲಿ ಇಟ್ಟಿರುತ್ತೇನೆ ಎಂದರೆ ಸರಿ, ಬೇರೆ ಪ್ರಕರಣಗಳಲ್ಲಿ ವಶಪಡಿಸಿಕೊಂಡ ಮದ್ಯದ ಬಾಟಲಿಗಳನ್ನು ಈ ಪ್ರಕರಣಕ್ಕೆ ಅಳವಡಿಸಿ ಸುಳ್ಳು ಪ್ರಕರಣವನ್ನು ಸೃಷ್ಟಿ ಮಾಡಿರುತ್ತೇನೆ ಎನ್ನುವುದು ಸರಿಯಲ್ಲ.

ಅಭಿಯೋಗದ ಪರ ಸಾಕ್ಷಿ ನೀಡಿದ ಶ್ರೀ ಎಂ.ಆರ್. ರಾಮದಾಸ್, ಅಬಕಾರಿ ಮುಖ್ಯ ರಕ್ಷಕ, ಗುಪ್ತ ವಾರ್ತಾದಳ, ಮಂಗಳೂರು ಪ್ರಾ.ಸಾ–2: ಇವರು ಸಾಕ್ಷಿ ನೀಡುತ್ತಾ ನಾನು ಮಂಗಳೂರು ಗುಪ್ತ ವಾರ್ತಾದಳದಲ್ಲಿ ಅಬಕಾರಿ ಮುಖ್ಯ ರಕ್ಷಕನಾಗಿ ಈಗ ಕೆಲಸ ನಿರ್ವಹಿಸುತ್ತಿದ್ದೇನೆ ಎಂದೂ, ದಿ:22.5.2004 ರಂದು 10 ಕೆಮಿಕಲ್ ಬಾಟಲಿ 375 ಮಾದರಿ ಸೀಸೆಗಳನ್ನು ಅಬಕಾರಿ ನಿರೀಕ್ಷಕರಿಂದ ಪಡೆದುಕೊಂಡು ಅದೇ ದಿನ ಮಂಗಳೂರು ರಾಸಾಯನಿಕ ವಿಶ್ಲೇಷಕರ ಕಛೇರಿಗೆ ತಲುಪಿಸಿರುತ್ತೇನೆ. ದಿನಾಂಕ 8.10.2004 ರಂದು ರಾಸಾಯನಿಕ ತಜ್ಞರು ಪರೀಕ್ಷಿಸಿದ ಸದ್ರಿ ಮಾದರಿ ಸೀಸೆಗಳನ್ನು ಮತ್ತು ವರದಿಯನ್ನು ತಮ್ಮ ಕಛೇರಿಗೆ ತಲುಪಿಸಿರುತ್ತೇನೆ. ಪ್ರಕರಣದಲ್ಲಿ ಪಾಟೀಸವಾಲಿಗೆ ಉತ್ತರಿಸುತ್ತಾ ಮಾದರಿ ಸೀಸೆಗಳನ್ನು ಪಡೆಯುವ ಸಮಯ ಸದ್ರಿ ಮಾದರಿ ಸೀಸೆಗಳನ್ನು ಯಾವ ತಕ್ಷೀರಿಗೆ ಸಂಬಂಧಿಸಿದ್ದು ಎಂಬುವುದು ನನಗೆ ಮೊದಲೇ ತಿಳಿದಿತ್ತು. ತಕ್ಷೀರಿನ ಸ್ಥಳಕ್ಕೆ ನಾನು ಹೋಗಿದ್ದೆ, ಈ ಪ್ರಕರಣಕ್ಕೆ ಸಂಬಂಧಿಸಿದ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಪ್ರಕರಣಕ್ಕೆ ಸಂಬಂಧಿಸಿದ ಮಾದರಿ ಸೀಸೆಗಳನ್ನು ನಾನು ಕೊಂಡೊಯ್ದಿಲ್ಲ ಎನ್ನುವುದು ಸರಿಯಲ್ಲ. ಮಹಜರಿಗೆ ನಾನು ಕಛೇರಿಯಲ್ಲಿ ಸಹಿ ಮಾಡಿರುತ್ತೇನೆ ಎನ್ನುವುದು ಸರಿಯಲ್ಲ ಎಂದು ಪ್ರಾ.ಸಾ–2 ರವರು ಪ್ರಾಧಿಕಾರದ ಮುಂದೆ ನುಡಿದಿರುತ್ತಾರೆ.

ಅಭಿಯೋಗದ ಪರ ಸಾಕ್ಷಿ ವಿಚಾರಣೆಯನ್ನು ದಿ: 21.4.2005 ರಂದು ಕೊನೆಗೊಳಿಸಿ ನಂತರದಲ್ಲಿ ಪ್ರತಿ ರಕ್ಷೆ ಸಾಕ್ಷಿ ವಿಚಾರಣೆಯನ್ನು ದಿ:30.07.2008 ರಂದು ನಡೆಸಲಾಗಿ KA-20H-6500 ಕೆನೆಟಿಕ್ ಹೊಂಡಾ ಇದರ ಮಾಲೀಕರಾದ ಶ್ರೀ ಗಣೇಶ್ ಭಟ್ ಇವರನ್ನು ವಿಚಾರಣೆ ನಡೆಸಲಾಗಿ ಸದ್ರಿಯವರು ಸಾಕ್ಷಿ ನೀಡುತ್ತಾ ನಾನು ಗೌಡ ಸ್ವರಸ್ವತ ಬ್ರಾಹ್ಮಣನಾಗಿದ್ದು, ಪೌರೋತ್ಯ ಕೆಲಸ ಮಾಡುತ್ತಿರುತ್ತೇನೆ. ನಾನು ಕೈನೆಟಿಕ್ ಹೊಂಡಾ ಸ್ಕೂಟರ್ ಸಂ: KA-20H-6500 ಇದರ ಮಾಲೀಕರನಾಗಿರುತ್ತೇನೆ. ನಾನು ಸದ್ರಿ ಸ್ಕೂಟರನ್ನು ಪೂಜೆ ಸಮಾರಂಭಗಳಿಗೆ ಹೋಗಲು ಮತ್ತು ಸಾಮಾನು ಕೊಂಡು ಹೋಗಲು ಅಗತ್ಯಕ್ಕಾಗಿ ಖರೀದಿಸಿಕೊಂಡಿರುತ್ತೇನೆ. ನನ್ನ ಮನೆಯ ಎದುರಿನ ಶೆಡ್ಡಿನಲ್ಲಿ ಆ ಸ್ಕೂಟರನ್ನು ಯಾವಾಗಲೂ ಇರಿಸುತ್ತಿದ್ದೆ. ಶೆಡ್ಡನ್ನು ಸ್ಕೂಟರ್ ನಿಲ್ಲಿಸುವ ಸಲುವಾಗಿಯೇ ರಚಿಸಲಾಗಿರುತ್ತದೆ. ನಾನುದೂರದ ಸ್ಥಳಗಳಲ್ಲಿಯೂ ಪೌರೋತ್ಯ ಕೆಲಸಕ್ಕಾಗಿ ಹೋಗುತ್ತಿದ್ದೆ. ನಾನು ದಿ:27.04.2004ರಂದು ಶಿವಮೊಗ್ಗಕ್ಕೆ ಶ್ರೀಗೋಪಾಲಕೃಷ್ಣ ಭಟ್ ಎಂಬುವರ ಮನೆಗೆ ಮದುವೆ ಕಾರ್ಯಕ್ಕೆ ಸದ್ರಿ ಸ್ಕೂಟರನ್ನು ಮನೆಯಲ್ಲಿಯೇ (ಶೆಡ್ಡಿನಲ್ಲಿ) ಇರಿಸಿ ಹೋಗಿರುತ್ತೇನೆ. ನಾನು ದಿ:1.5.2004ರಂದು ಶಿವಮೊಗ್ಗದಿಂದ ವಾಪಾಸ್ಸು ಮಹಾಮಾಹಿ ದೇವಸ್ಥಾನದ ಬಳಿಯಿರುವ ಆಶ್ರಯ ಎಪಾರ್ಟ್‌ಮೆಂಟ್‌ನಲ್ಲಿರುವ ನನ್ನ ಮನೆಗೆ ಬಂದಿರುತ್ತೇನೆ. ನಾನು ವಾಪಾಸ್ಸು ಬಂದು ನೋಡಲಾಗಿ ನಾನು ನಿಲ್ಲಿಸಿ ಹೋದ ಸ್ಥಳದಲ್ಲಿ ನನ್ನ ಸ್ಕೂಟರ್ ಇರಲಿಲ್ಲ. ನಾನು ಬಂದು ಸ್ಕೂಟರಿನ ಬಗ್ಗೆ ಅಕ್ಕಪಕ್ಕದವರನ್ನು ವಿಚಾರಿಸಿದಾಗ ನನ್ನ ಸ್ಕೂಟರ್ ಅಬಕಾರಿ ಮೊಕದ್ದಮೆಗೆ ಸಂಬಂಧಿಸಿ ವಾಹನವನ್ನು ಜಪ್ತುಪಡಿಸಲಾಗಿದೆಯೆಂದು ದಿನಪತ್ರಿಕೆಯ ಸುದ್ದಿಯ ಮೂಲಕ ತಿಳಿದಿದ್ದೇವೆ ಎಂದು ತಿಳಿಸಿದರು. ನಂತರ ನಾನು ದಿ: 10.05.2004ರಂದು ವಾಹನದ ಮಧ್ಯಂತರ ಬಿಡುಗಡೆಗಾಗಿ ವಕೀಲರ ಮೂಲಕ ಅರ್ಜಿ ಸಲ್ಲಿಸಿರುತ್ತೇನೆ. ಸದ್ರಿ ಸ್ಕೂಟರ್ ಕೊಂಡು ಹೋಗಿರುವವರ ಪರಿಚಯ ನನಗೆ ಇರುವುದಿಲ್ಲ. ಸದ್ರಿ ಸ್ಕೂಟರಿನಲ್ಲಿ ಸಾಗಾಟ ಮಾಡಿರುವ ಮದ್ಯದ ಬಗ್ಗೆ ನನಗೆ ಯಾವುದೇ ಸಂಬಂಧ ಇರುವುದಿಲ್ಲ. ಸದ್ರಿ ಮೊಕದ್ದಮೆಗೆ ಸಂಬಂಧಿಸಿದ ಅಪರಾಧಕ್ಕೆ ನಾನು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ನನ್ನ ಸಂಬಂಧ ಇರುವುದಿಲ್ಲ. ನಾನು ಯಾವುದೇ ಅಪರಾಧವೆಸಗಿರುವುದಿಲ್ಲ ಹಾಗೂ ನನ್ನ ವಾಹನವನ್ನು ಸದ್ರಿ ಅಪರಾಧಕ್ಕೆ ಉಪಯೋಗಿಸಲು ಕಾರಣ ಕರ್ತನಾಗಿರುವುದಿಲ್ಲ. ಕಾರಣ ಮಧ್ಯಂತರ ಬಿಡುಗಡೆಗೊಳಿಸಿರುವ ನನ್ನ ವಾಹನವನ್ನು ಖಾಯಂಗೊಳಿಸಿ ಬಿಡುಗಡೆಗೊಳಿಸಬೇಕಾಗಿ ಈ ಪ್ರಾಧಿಕಾರದ ಮುಂದೆ ವಿನಂತಿಸಿಕೊಳ್ಳುತ್ತೇನೆ.

**ಪಾಟೀ ಸವಾಲು:** ನಾನು ಸದ್ರಿ ವಾಹನವನ್ನು ಈ ಪ್ರಕರಣ ಸಂಭವಿಸುವ ಸುಮಾರು 6 ತಿಂಗಳು ಹಿಂದಿನಿಂದ ಹೊಂದಿರುತ್ತೇನೆ. ನಾನು ದಿ:27.4.2004 ರಂದು ಶಿವಮೊಗ್ಗಕ್ಕೆ ತೆರಳಿದಾಗ ನನ್ನ ವಾಹನವನ್ನು ನಾನು ವಾಸವಾಗಿರುವ ಪ್ಲಾಟಿನ ನೆಲಅಂತಸ್ತಿನಲ್ಲಿರುವ ಕಾರು ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆ ಮಾಡಿ ಹೋಗಿರುತ್ತೇನೆ. ನಾನು ಹೋಗುವಾಗ ವಾಹನಕ್ಕೆ ಸ್ಟೇರಿಂಗ್ ಬೀಗ ಹಾಕಿ ಹೋಗಿದ್ದೆ. ನಾನು ಹೊರಗಡೆ ಹೋಗುವಾಗ ವಾಹನದ ಉಸ್ತುವಾರಿ ನೋಡಿಕೊಳ್ಳಲು ಯಾರನ್ನು ನೇಮಿಸಿರುವುದಿಲ್ಲ. ನಾನುನಿಲ್ಲಿಸಿದ ವಾಹನದ ಸ್ಥಳ ನನ್ನ ಪ್ಲಾಟಿನ ಕಾಂಪೌಂಡಿನ ಹೊರಗಡೆಯಿಂದ ಸಾಗುವ ಜನರಿಗೆ ಕಾಣುವಂತಾಗಿರುತ್ತದೆ. ನಾನು ದಿ:1.5.2004ರಂದು ಊರಿಗೆ ಹಿಂತಿರುಗಿ ಬಂದಾಗ ನನ್ನ ಸ್ಕೂಟರ್ ಮಾಯವಾಗಿರುವುದನ್ನು ತಿಳಿದಿರುತ್ತೇನೆ. ಆದರೆ ನನ್ನ ಸ್ಕೂಟರ್ ಕಳೆದು ಹೋಗಿದೆ ಎಂದು ಪೊಲೀಸ್ ಸ್ಟೇಷನ್ ಹೋಗಿ ದೂರು ನೀಡಿರುವುದಿಲ್ಲ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧಗಳಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನು ಬದ್ಧವಾಗಿದೆಯೆಂದು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 43ಎ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಪ್ರಾಧಿಕಾರದಲ್ಲಿ ಲಭ್ಯವಿರುವ ದಾಖಲಾತಿಗಳ ಪ್ರಕಾರ ದಿನಾಂಕ: 29.4.2004 ರಂದು ಅಕ್ರಮವಾಗಿ ವಾಹನದ ಸಂ: KA-20H-6500 ಕೈನೆಟಿಕ್ ಹೊಂಡಾ ಇದರಲ್ಲಿ ಮದ್ಯ ಸಾಗಾಟ ಮಾಡುವುದನ್ನು ಪತ್ತೆಹಚ್ಚಿ, ಮದ್ಯ ಮತ್ತು ಮದ್ಯಸಾರ ಸಾಗಾಟಕ್ಕೆ ಬಳಸಿದ ವಾಹನಗಳನ್ನು ಜಪ್ತಿಪಡಿಸಿಕೊಂಡು, ಅಬಕಾರಿ ಉಪ ನಿರೀಕ್ಷಕರು (3) ಗುಪ್ತವಾರ್ತದಳ, ಮಂಗಳೂರು ವಿಭಾಗ, ಮಂಗಳೂರು ಇವರು ಮೊಕದ್ದಮೆ ದಾಖಲಿಸಿರುವುದು ಕಂಡುಬರುತ್ತದೆ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನಾ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳಿಂದ ಈ ಕೆಳಗಿನ ವಿವಾದಾಂಶಗಳನ್ನು ನಿರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1) ದಿನಾಂಕ: 29.4.2004 ರಂದು ವಾಹನ ಸಂ: KA-20H-6500 ಕೈನೆಟಿಕ್ ಹೊಂಡಾದಲ್ಲಿ ಅಕ್ರಮವಾಗಿ ಮದ್ಯವನ್ನು ಸಾಗಣೆ ಮಾಡಲಾಗಿತ್ತೇ?

2) ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು ತನಗೆ ತಿಳಿಯದೆ ಅಕ್ರಮ ಮದ್ಯ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?

3) ಜಪ್ತುಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಈ ಮೇಲಿನ ಪರಿಶೀಲನಾಂಶಗಳನ್ನು ಲಭ್ಯವಿರುವ ಸಾಕ್ಷ್ಯಾಧಾರಗಳ ಮೇಲೆ ಈ ಕೆಳಗಿನಂತೆ ಉತ್ತರಿಸಿರುತ್ತೇನೆ.

ಒಂದನೇ ಅಂಶವನ್ನು ಗುಣಾತ್ಮಕವಾಗಿ. ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾಧಿಕಾರದಲ್ಲಿ ಮುಟ್ಟುಗೋಲು ನಡವಳಿಗಳ ಸಾಕ್ಷಿ ವಿಚಾರಣೆಯನ್ನು ನಡೆಸಲಾಗಿ ಅಭಿಯೋಗದ ಪರ ಸಹಾಯಕ ಅಭಿಯೋಗ ನಿರ್ದೇಶಕರು ಇಬ್ಬರು ಸಾಕ್ಷಿದಾರರನ್ನು ವಿಚಾರಣೆ ಮಾಡಿದ್ದು ದಿ:29.4.2004ರಂದು ವಾಹನ ನೊಂದಣಿ ಸಂ: KA-20H-6500 ಕೈನೆಟಿಕ್ ಹೊಂಡಾದಲ್ಲಿ ಅಕ್ರಮವಾಗಿ ಮದ್ಯ ಸಾಗಾಟವನ್ನು ಪತ್ತೆಹಚ್ಚಿ ದಾಖಲಿಸಲಾದ ಮೊಕದ್ದಮೆಯ ದಾಖಲೆಗಳು ಇದಕ್ಕೆ ಪೂರಕವಾಗಿ ಪ್ರಾಧಿಕಾರದ ಮುಂದೆ ಮೊಕದ್ದಮೆಯನ್ನು ದಾಖಲಿಸಿ ಅಭಿಯೋಗದ ಪರ ಸಾಕ್ಷಿದಾರರು ಸಾಕ್ಷಿಯಲ್ಲಿ ದಿನಾಂಕ: 29.4.2004ರಂದು ವಾಹನ ನೋಂದಣಿ ಸಂಖ್ಯೆ KA-20H-6500 (ಕೈನೆಟಿಕ್ ಹೊಂಡಾ) ಇದರಲ್ಲಿ ಅಕ್ರಮವಾಗಿ ಮದ್ಯವನ್ನು ಸಾಗಾಣಿಕೆ ಮಾಡುವಾಗ ಪತ್ತೆಹಚ್ಚಿ ಮೊಕದ್ದಮೆ ದಾಖಲಿಸಿ, ತನಿಖೆ ಕೈಗೊಂಡು, ಮೊಕದ್ದಮೆಯಲ್ಲಿ ಜಪ್ತಾದ ಮದ್ಯದ ಮಾದರಿಗಳನ್ನು ರಾಸಾಯನಿಕ ವಿಶ್ಲೇಷಕರಲ್ಲಿಗೆ ಕಳುಹಿಸಿದ ಬಗ್ಗೆ ಮತ್ತು ವಿಶ್ಲೇಷಣಾ ವರದಿಯನ್ನು ಪಡೆದಿರುವ ಬಗ್ಗೆ ಪ್ರಾಧಿಕಾರದ ಮುಂದೆ ಪ್ರಾ.ಸಾ1 ಮತ್ತು ಪ್ರಾ.ಸಾ-2 ರವರು ನೀಡಿದ ಸಾಕ್ಷ್ಯ ಹಾಗೂ ಮಂಡಿಸಿದ ದಾಖಲೆಗಳನ್ನು (ನಿಶಾನೆ ಪಿ-1 ರಿಂದ ನಿಶಾನೆ ಪಿ-5) ನಿರೂಪಿಸಿರುವ ಕ್ರಮ ಹಾಗೂ ಮಂಡಿಸಲಾದ ದಾಖಲಾತಿಗಳಿಂದ ವಾಹನದಲ್ಲಿ ಅಕ್ರಮ ಮದ್ಯ ಸಾಗಾಟವಾಗಿರುವುದು ಸ್ಪಷ್ಟವಾಗಿರುತ್ತದೆ. ಸದ್ರಿ ಸಾಕ್ಷಿದಾರರ ಪಾಟೀ ಸವಾಲಿನಲ್ಲಿ ರಕ್ಷಣಾ ವಕೀಲರು ಅಕ್ರಮ ಸಾಗಾಣಿಕೆಯಲ್ಲಿ ವಾಹನ ಬಳಕೆ ಆದ ಕುರಿತು ಸಂಶಯಕ್ಕೆ ಎಡೆಮಾಡುವಂತಹ ಯಾವುದೇ ಅಂಶಗಳನ್ನು ನಿರೂಪಿಸಲು ರಕ್ಷಣಾ ವಕೀಲರು ಪ್ರಯತ್ನಪಟ್ಟಿರುವುದಿಲ್ಲ ಮತ್ತು ಕೈನೆಟಿಕ್ ಹೊಂಡಾ ಸಾಗಾಟ ಮಾಡುತ್ತಿದ್ದ ವಸ್ತು ಮದ್ಯ ಆಗಿರುವುದು ಮಾದರಿಗಳ ರಾಸಾಯನಿಕ ಪರೀಕ್ಷಾ ಫಲಿತಾಂಶದ ವರದಿಯ ಪ್ರಕಾರ ಸಾಭೀತಾಗಿರುತ್ತದೆ. ಈ ಅಂಶಗಳನ್ನು ಅಲ್ಲಗಳೆಯಲು ರಕ್ಷಣಾ ವಕೀಲರು ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ. ಹಾಗೂ ಪುರಾವೆಗಳನ್ನು ನೀಡಿರುವುದಿಲ್ಲ. ಪ್ರಾಧಿಕಾರದ ಮುಂದೆ ರಕ್ಷಣಾ ಸಾಕ್ಷಿಯಾದ ವಾಹನದ ಮಾಲೀಕರು ತನ್ನ ನಿರಪರಾಧಿತ್ವವನ್ನು ಸಾಭೀತು ಪಡಿಸುವಲ್ಲಿ ವಿಫಲರಾಗಿದ್ದು, ವಾಹನ ನೊಂದಣಿ ಸಂಖ್ಯೆ: KA-20H-6500 ಕೈನೆಟಿಕ್ ಹೊಂಡಾ ಇದರಲ್ಲಿ ಅಕ್ರಮವಾಗಿ ಮದ್ಯ ಸಾಗಾಣೆ ಆಗಿರುವುದು ಸಾಭೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43ಬಿ ಅಡಿಯಲ್ಲಿ ವಾಹನದ ಮಾಲೀಕರು ತಮ್ಮ ವಾಹನ ಅಕ್ರಮ ಮದ್ಯ ಸಾಗಾಣಿಕೆಗೆ ಉಪಯೋಗಿಸಿರುವುದಿಲ್ಲ ಎಂಬುದನ್ನು ಮತ್ತು ವಾಹನದ ದುರ್ಬಳಕೆಯ ವಿರುದ್ಧ ಸಾಕಷ್ಟು ಮುನ್ನೆಚ್ಚರಿಕೆ ವಹಿಸಿರುವುದನ್ನು ಪ್ರಾಧಿಕಾರದ ಮುಂದೆ ನಿರೂಪಿಸುವುದು ವಾಹನದ ಮಾಲೀಕರ ಜವಾಬ್ದಾರಿಯಾಗಿರುತ್ತದೆ. ಆದರೆ ವಾಹನದ ಮಾಲೀಕರು ತನ್ನ ಜವಾಬ್ದಾರಿಯನ್ನು ಪ್ರಾಧಿಕಾರದ ಮುಂದೆ ನಿರೂಪಿಸುವಲ್ಲಿ ವಿಫಲರಾಗಿರುತ್ತಾರೆ. ವಾಹನದ ಮಾಲೀಕರಿಗೆ ಕಲಂ 43ಬಿ ಅಡಿಯಲ್ಲಿ ವಾಹನವನ್ನು ಸರ್ಕಾರಕ್ಕೆ ಯಾಕೆ ಮುಟ್ಟುಗೋಲು ಹಾಕಿಕೊಳ್ಳಬಾರದು ಎಂಬುದಕ್ಕೆ ಪ್ರಾಧಿಕಾರದಿಂದ ಕಾರಣ ಕೇಳುವ ನೋಟೀಸನ್ನು ನೀಡಲಾಗಿದ್ದು, ಸದ್ರಿ ಕಾರಣ ಕೇಳುವ ನೋಟೀಸಿಗೆ ಉತ್ತರ ನೀಡಿ ತನ್ನ ವಾಹನವನ್ನು ಮನೆಯ ಶೆಡ್ಡಿನಲ್ಲಿ ಇಟ್ಟು ತಾನು ಮದುವೆಯ ನಿಮಿತ್ತ ಶಿವಮೊಗ್ಗಕ್ಕೆ ಹೋಗಿರುವ ಸಂದರ್ಭದಲ್ಲಿ ಸದ್ರಿ ವಾಹನವನ್ನು ಯಾರೋ ಕಳವು ಮಾಡಿ ಅಕ್ರಮದಲ್ಲಿ ತೊಡಗಿಸಿಕೊಂಡಿದ್ದು ಈ ಅಕ್ರಮಕ್ಕೂ ತನಗೂ ಯಾವುದೇ ಸಂಬಂಧವಿಲ್ಲವೆಂದು ವಿವರಣೆ ನೀಡಿರುತ್ತಾರೆ. ವಾಹನದ ಮಾಲೀಕರು ಖುದ್ದಾಗಿ ರಕ್ಷಣಾ ಸಾಕ್ಷಿಯನ್ನು ನೀಡುವ ಸಂದರ್ಭದಲ್ಲಿಯೂ ತನ್ನ ನಿರಪರಾಧಿತ್ವವನ್ನು ಸಾಭೀತುಪಡಿಸುವಲ್ಲಿ ವಿಫಲರಾಗಿರುತ್ತಾರೆ. ವಾಹನವನ್ನು ಕಳವು ಮಾಡಿ ಈ ಅಕ್ರಮದಲ್ಲಿ ಬಳಸಿಕೊಳ್ಳಲಾಗಿತ್ತೆಂದು ಸಾಕ್ಷ್ಯ ನೀಡಿರುವ ವಾಹನದ ಮಾಲೀಕರು ವಾಹನ ಕಳುವು ಆದ ಬಗ್ಗೆ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿರುವ ಬಗ್ಗೆ ಯಾವುದೇ ಮಾಹಿತಿ ನೀಡಲು ಹಾಗೂ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿರುವುದನ್ನು ಗಮನಿಸಿದಾಗ ವಾಹನದ ಮಾಲೀಕರು ತನ್ನ ತಿಳುವಳಿಕೆಯಿಂದಲೇ ಅಕ್ರಮ ಮದ್ಯ ಸಾಗಾಣಿಕೆಗೆ ವಾಹನವನ್ನು ತೊಡಗಿಸಿರುವುದು ನಿಸ್ಸಂದೇಹವಾಗಿ ಸಾಭೀತಾಗಿರುತ್ತದೆ. ಕಾರಣ ಎರಡನೇ ಅಂಶವನ್ನು ನಕರಾತ್ಮಕವಾಗಿ ಪರಿಗಣಿಸಿದೆ.

ಸದ್ರಿ ಮೊಕದ್ದಮೆಗೆ ಒಳಪಟ್ಟು ವಶಪಡಿಸಿಕೊಳ್ಳಲಾಗಿರುವ 90.000 ಲೀಟರು ಅಕ್ರಮ ಮದ್ಯ ಹಾಗೂ ಅಪರಾಧ ಸ್ಥಳದಲ್ಲಿ, ವಶಪಡಿಸಿಕೊಳ್ಳಲಾಗಿರುವ ಇನ್ನೊಂದು ವಾಹನ ಆಟೋರಿಕ್ಷಾ ಸಂ: KA-19AC-3513 ನ್ನು ಈ ಪ್ರಾಧಿಕಾರದ ಮುಟ್ಟುಗೋಲು ಆದೇಶ ದಿ:13.2.2008 ರಂತೆ ಮುಟ್ಟುಗೋಲು ಹಾಕಿಕೊಳ್ಳಲಾಗಿದ್ದು, ವಿಚಾರಣೆಗೆ ಒಳಪಟ್ಟಿರುವ ಈ ವಾಹನವನ್ನು ಸಹಾ ಅದೇ ಅಪರಾಧ ಸ್ಥಳದಿಂದ ಅಕ್ರಮ ಮದ್ಯ ಸಾಗಾಣಿಕೆಗೆ ಸಂಬಂಧಿಸಿ ವಶಪಡಿಸಲಾಗಿದ್ದು, ವಾಹನವನ್ನು ಸದ್ರಿ ಅಪರಾಧಕ್ಕೆ ಉಪಯೋಗಿಸಲಾಗಿರುವುದರಲ್ಲಿ ಯಾವುದೇ ಸಂಶಯಕ್ಕೆ ಆಸ್ಪದವಿರುವುದಿಲ್ಲ. ವಾಹನವನ್ನು ಅಕ್ರಮ ಮದ್ಯ

ಸಾಗಾಣಿಕೆಯಲ್ಲಿ ಬಳಸಲಾಗಿರುವುದರಿಂದ ಹಾಗೂ ಸದ್ರಿ ವಾಹನವನ್ನು ಜಪ್ತುಪಡಿಸಿರುವ ಸಂದರ್ಭದಲ್ಲಿ ವಾಹನದಲ್ಲಿ ಇರಿಸಲಾಗಿದ್ದ ಮದ್ಯದ ಮಾದರಿಗಳ ರಸಾಯನಿಕ ವಿಶ್ಲೇಷಣೆಯಿಂದ ಇದು ಅಕ್ರಮ ಮದ್ಯವೆಂದು ಸಾಭೀತಾಗಿದ್ದು, ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡಲಾಗಿರುವುದರಿಂದ 3ನೇ ಅಂಶ ಹೌದು ಎಂದಾಗುತ್ತದೆ.

ಈ ಮೇಲಿನ ಕಾರಣಗಳಿಂದ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ವಾಹನ ಕೈನೆಟಿಕ್ ಹೊಂಡಾವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದೇ ಸೂಕ್ತವೆಂದು ಪ್ರಾಧಿಕಾರವು ತೀರ್ಮಾನಿಸಿ ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ವಾಹನ ಸಂ: KA-20H-6500 ಕೆನ್ಯೆಟಿಕ್ ಹೊಂಡಾವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

**ಆದೇಶ ಸಂಖ್ಯೆ: ಎಸ್‌ಡಿಕೆ:285:ಡಿಟಿಸಿಆರ್:2003–04, ದಿನಾಂಕ: 12ನೇ ಆಗಸ್ಟ್ 2008**

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ.ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಅಧಿನಿಯಮ 1965 ಕಲಂ 43(ಎ)ರಲ್ಲಿ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿದ ನಂತರ ಅಬಕಾರಿ ಉಪ ನಿರೀಕ್ಷಕರು, ಗುಪ್ತ ವಾರ್ತಾದಳ, ಮಂಗಳೂರು ವಿಭಾಗ, ಮಂಗಳೂರು ಇವರ ಪ್ರ.ಮಾ.ವ ನಂಬ್ರ :11/2003–04, ದಿನಾಂಕ:29.4.2004 ರಲ್ಲಿ ವಶಪಡಿಸಿಕೊಂಡಿರುವ ಕೈನೆಟಿಕ್ ಹೊಂಡಾ ಸಂ: KA-20H-6500 ನ್ನು ನಿಯಮ 43ಎ(2) ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ. ಮತ್ತು ಈ ಪ್ರಾಧಿಕಾರದ ಆದೇಶ ಸಂಖ್ಯೆ ಎಸ್‌ಡಿಕೆ/285/ಡಿಟಿಸಿಆರ್/2003–04, ದಿ:9.8.2004ರಲ್ಲಿ ವಾಹನವನ್ನು ಮಧ್ಯಂತರ ಬಿಡುಗಡೆಗೆ ನೀಡಿದ ಆದೇಶವನ್ನು ಈ ಮೂಲಕ ರದ್ದುಗೊಳಿಸಿ, ಸದ್ರಿ ವಾಹನವನ್ನು ತಕ್ಷಣ ಪ್ರಾಧಿಕಾರದ ವಶಕ್ಕೆ ಒಪ್ಪಿಸಲು ಆದೇಶಿಸಿದೆ. ಆರ್.ಸಿ. ಮಾಲೀಕರು ಸದ್ರಿ ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನ ಕೆನ್ಯೆಟಿಕ್ ಹೊಂಡಾ ಸಂ: KA-20H-6500 ನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ 30 ದಿವಸಗಳು ದಿ:11.9.2008ರ ಒಳಗೆ ವಾಹನವನ್ನು ಪ್ರಾಧಿಕಾರಕ್ಕೆ ಒಪ್ಪಿಸದಿದ್ದಲ್ಲಿ ವಾಹನದ ಭದ್ರತೆಯಾಗಿ ಈ ಪ್ರಾಧಿಕಾರಕ್ಕೆ ಒಪ್ಪಿಸಿರುವ ಬ್ಯಾಂಕ್ ಗ್ಯಾರೆಂಟಿ ಪತ್ರವನ್ನು ಇನ್‌ವೋಕ್ ಮಾಡಿ ಮೌಲ್ಯವನ್ನು ಸರ್ಕಾರಕ್ಕೆ ಪಡೆಯಲು ಆದೇಶಿಸಿದೆ.

ಈ ಆದೇಶವನ್ನು ಇಂದು ಅಂದರೆ ದಿನಾಂಕ: 12.8.2008 ರಂದು ಶೀಘ್ರಲಿಪಿಗಾರರಿಗೆ ಉತ್ತಲೇಖನ ಕೊಟ್ಟು ಬೆರಳಚ್ಚು ಮಾಡಿಸಿ ಕಂಪ್ಯೂಟರಿನಲ್ಲಿ ಮುದ್ರಿಸಿ ಪ್ರತಿಯನ್ನು ತಿದ್ದಿ ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜ್ಯಾರಿಯಲ್ಲಿ ಬರುತ್ತದೆ.

**ನೂರ್ ಮಹಮ್ಮದ್ ಹುಸೇನ್**

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

**ಅನುಬಂಧ–1**

**ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:–**

1) ಪ್ರಾ.ಸಾ–1:ಶ್ರೀ.ಯು.ಪ್ರಭಾಕರ ಅಬಕಾರಿ ಉಪ ನಿರೀಕ್ಷಕರು, ಗುಪ್ತವಾರ್ತಾದಳ ಮಂಗಳೂರು ವಿಭಾಗ
2) ಪ್ರಾ.ಸಾ–2:ಶ್ರೀ.ಎಂ.ಆರ್. ರಾಮದಾಸ್, ಅಬಕಾರಿ ಮುಖ್ಯರಕ್ಷಕ, ಗುಪ್ತವಾರ್ತಾದಳ ಮಂಗಳೂರು ವಿಭಾಗ

**ಅನುಬಂಧ–2**

**ಪ್ರತಿ ವಾದಿಗಳ ಪರ ಸಾಕ್ಷಿದಾರರು**

1) ಗಣೇಶ್ ಭಟ್, ಬಿನ್: ವಾಸುದೇವ ಭಟ್, ಆಶ್ರಯ ಎಪಾರ್ಟ್‌ಮೆಂಟ್, ಮಹಾಮಾಹಿ ದೇವಸ್ಥಾನ, ಕಾರ್‌ಸ್ಟ್ರೀಟ್, ಮಂಗಳೂರು.

**ಅನುಬಂಧ–3**

**ಅಭಿಯೋಗದ ಪರ ಮಂಡಿಸಲಾದ ದಾಖಲಾತಿಗಳು**

1) ನಿಶಾನೆ ಪಿ–1 : ಅಧಿಕೃತ ಅಧಿಕಾರಿಗಳಿಗೆ ಸಲ್ಲಿಸಿದ ವರದಿ
2) ನಿಶಾನೆ ಪಿ–2 : ಮಹಜರು ಪ್ರತಿ
3) ನಿಶಾನೆ ಪಿ–3 : ಪ್ರಥಮ ವರ್ತಮಾನ ವರದಿಯ ಪ್ರತಿ
4) ನಿಶಾನೆ ಪಿ–4 : ರಾಸಾಯನಿಕ ತಜ್ಞರ ವರದಿಯ ಪ್ರತಿ
5) ನಿಶಾನೆ ಪಿ–5 : ಮಾದರೀ ಸೀಲು

**ಅನುಬಂಧ–4**

**ಪ್ರತಿ ವಾದಿಗಳ ಪರ ಮಂಡಿಸಲಾದ ದಾಖಲಾತಿಗಳು**

–ಯಾವುದು ಇಲ್ಲ–

**ನೂರ್ ಮಹಮ್ಮದ್ ಹುಸೇನ್**

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್. 1054

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ: ಎಸ್‌ಡಿಕೆ/66/ಡಿಟಿಸಿಆರ್/2007–08, ದಿನಾಂಕ: 24ನೇ ನವೆಂಬರ್ 2008

**ಉಪಸ್ಥಿತರು** ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

**ಫಿರ್ಯಾದುದಾರರು:**
ಅಬಕಾರಿ ಉಪ ನಿರೀಕ್ಷಕರು (1) ಜಾರಿ ಮತ್ತು ತನಿಖೆ,
ಬೆಳ್ತಂಗಡಿ

**ಆರೋಪಿ:**
ಪರಾರಿಯಾಗಿರುತ್ತಾರೆ.

**ವಾಹನದ ಮಾಲೀಕರು**
ಶ್ರೀ ರಂಜನ್ ಬಿನ್: ಪರಮೇಶ್ವರ್, ಪ್ಲಾಟ್ ನಂ:103–ಬಿ,
ಶಿವದರ್ಶನ್ ಅಪಾರ್ಟ್‌ಮೆಂಟ್, ಕದ್ರಿ ದೇವಸ್ಥಾನದ ಬಳಿ,
ಮಂಗಳೂರು ತಾಲ್ಲೂಕು.

**ಪ್ರಕರಣದ ಮುಖ್ಯಾಂಶಗಳು:**

ಅಬಕಾರಿ ಉಪ ನಿರೀಕ್ಷಕರು (1), ಜ್ಯಾರಿ ಮತ್ತು ತನಿಖೆ ಬೆಳ್ತಂಗಡಿ ತಾಲ್ಲೂಕು ಇವರು ದಿನಾಂಕ: 20.08.2007ರಂದು ಸಾಯಂಕಾಲ 6:30 ಗಂಟೆಯ ಸಮಯದಲ್ಲಿ ಬೆಳ್ತಂಗಡಿ ತಾಲ್ಲೂಕು ಪಾರೆಂಕಿ ಗ್ರಾಮದ ಪಾರೆಂಕಿ–ಪಾಂಡವರ ಕಲ್ಲು ರಸ್ತೆಯ ಮೂಲಕ ಸಾರಾಯಿ ಸ್ಯಾಚೆಟ್‌ಗಳು ಸಾಗಾಟವಾಗುತ್ತಿದೆ ಎಂದು ದೊರೆತ ಖಚಿತ ಮಾಹಿತಿ ಮೇರೆಗೆ, ಸದ್ರಿ ಸ್ಥಳದಲ್ಲಿ ಕೈಗಾವಲು ನಡೆಸುತ್ತಿದ್ದ ಸಂದರ್ಭದಲ್ಲಿ ಪಾರೆಂಕಿ ಕಡೆಯಿಂದ ಬರುತ್ತಿದ್ದ ಬಜಾಜ್ ಚೇತಕ್ ಸ್ಕೂಟರನ್ನು ತಪಾಸಣೆಗೆಂದು ನಿಲ್ಲಿಸಲು ಸೂಚನೆ ನೀಡಿದಾಗ, ಸಮವಸ್ತ್ರದಲ್ಲಿದ್ದ ಸಿಬ್ಬಂದಿಯವರನ್ನು ಕಂಡು ಸ್ಕೂಟರ್‌ನ್ನು ಸುಮಾರು 35 ಮೀಟರ್ ಅಂತರದಲ್ಲಿ ನಿಲ್ಲಿಸಿ, ಸಮೀಪದ ಗೇರುತೋಪಿನ ಒಳಗೆ ಓಡಿ ತಲೆಮರೆಸಿಕೊಂಡಿರುತ್ತಾನೆ. ಇದರಿಂದ ಸಂಶಯಗೊಂಡು ಸ್ಕೂಟರನ್ನು ಪರಿಶೀಲಿಸುವ ಸಲುವಾಗಿ ಮಾನ್ಯ ಘನ ನ್ಯಾಯಾಲಯದಿಂದ ಶೋಧನೆ ಸಮುಚಿತ ಪತ್ರ ಪಡೆಯಲು ಕಾಲಾವಕಾಶವಿಲ್ಲದ ಕಾರಣ ಸ್ಥಳದಲ್ಲಿಯೇ ಸರ್ಚ್‌ಮೆಮೋವನ್ನು ತಯಾರಿಸಿ ಸದ್ರಿ ಸ್ಕೂಟರನ್ನು ಪರಿಶೀಲಿಸಿದಾಗ ಸ್ಕೂಟರಿನ ನೋಂದಣಿ ಸಂಖ್ಯೆ KA-19-H-4795 (ಚಾಸಿಸ್ ನಂಬ್ರ 06f95b93327, ಇಂಜಿನ್ ನಂಬ್ರ 06M95B67489) ಆಗಿದ್ದು, ಸ್ಕೂಟರ್‌ನ ಕಾಲು ಇಡುವ ಜಾಗದಲ್ಲಿ ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ 100 ಎಂಎಲ್‌ನ 90 ಸಾರಾಯಿ ಸ್ಯಾಚೆಟ್‌ಗಳು– 9.000 ಲೀಟರ್ ಸಾರಾಯಿ ಅಕ್ರಮವಾಗಿ ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆಹಚ್ಚಿ, ಇದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 11,14,15ರಂತೆ ಅಪರಾಧವಾಗಿದ್ದು, ಕಲಂ 32, 34, 38 (ಎ) ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸದ್ರಿ ಸ್ಕೂಟರನ್ನು ಹಾಗೂ ಸಾರಾಯಿಯನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ತಯಾರಿಸಿ, ಪರಾರಿಯಾದ ಆರೋಪಿಯ ವಿರುದ್ಧ ಪ್ರಥಮ ಮಾಹಿತಿ ವರದಿ ಸಂಖ್ಯೆ 3/2007–08, ದಿನಾಂಕ: 20.08.2007ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ ನಕಲನ್ನು, ಸೊತ್ತು ಪಟ್ಟಿಯೊಂದಿಗೆ ಪ್ರಾಧಿಕಾರಕ್ಕೆ ಸಲ್ಲಿಸಿ, ವಶಪಡಿಸಿಕೊಂಡ ಸೊತ್ತುಗಳನ್ನು ಹಾಗೂ ವಾಹನವನ್ನು ಮುಂದಿನ ತನಿಖೆ ಮುಗಿಯುವವರೆಗೆ ತಮ್ಮ ವಶದಲ್ಲಿಯೇ ಇಟ್ಟುಕೊಳ್ಳಲು ಅನುಮತಿಯನ್ನು ಕೋರಿರುತ್ತಾರೆ. ಅದರಂತೆ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ, ದ.ಕ.ಜಿಲ್ಲೆ ಮಂಗಳೂರು ಇವರು ಸದ್ರಿ ಸೊತ್ತುಗಳನ್ನು ಕರ್ನಾಟಕ ಅಬಕಾರಿ ಕಾಯ್ದೆ 1965ರ ಸೆಕ್ಷನ್ ..ಎ ಪ್ರಕಾರ ತಮ್ಮ ವಶದಲ್ಲಿಯೇ ಇಟ್ಟುಕೊಳ್ಳಲು ಅನುಮತಿಯನ್ನು ನೀಡಿರುತ್ತಾರೆ.

ತನಿಖೆಯನ್ನು ಕೈಗೊಂಡ ಅಬಕಾರಿ ಉಪ ನಿರೀಕ್ಷಕರು(ನಂ.1), ಬೆಳ್ತಂಗಡಿ ವಲಯ ಇವರ ತನಿಖಾ ವರದಿ ಸಂಖ್ಯೆ: ಆರ್‌ಎಂ/8/2007–08 ದಿ:27.5.2008ರ ವರದಿಯಲ್ಲಿ ವಶಪಡಿಸಿಕೊಂಡ ವಾಹನ ಬಜಾಜ್ ಚೇತಕ್ ಸ್ಕೂಟರ್ ಸಂ: KA-..H-4795ರ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯಲ್ಲಿ ವಾಹನದ ನೋಂದಣಿ ಮಾಲೀಕ ಶ್ರೀ ರಂಜನ್, ಬಿನ್:ಪರಮೇಶ್ವರ್, ಪ್ಲಾಟ್ ನಂ:103–ಬಿ, ಶಿವದರ್ಶನ್ ಅಪಾರ್ಟ್‌ಮೆಂಟ್, ಕದ್ರಿ ದೇವಸ್ಥಾನದ ಬಳಿ, ಮಂಗಳೂರು ತಾಲ್ಲೂಕು ಎಂದು ದೃಢೀಕರಿಸಿದ್ದು, ಸದ್ರಿ ವ್ಯಕ್ತಿಯೇ ಪ್ರಕರಣದ ಮುಖ್ಯ ಆರೋಪಿಯಾಗಿರುತ್ತಾರೆ ಎಂದು ವರದಿಯಲ್ಲಿ ತಿಳಿಸಿರುತ್ತಾರೆ. ಮತ್ತು ಸ್ಯಾಂಪಲ್‌ಗಾಗಿ ತೆಗೆದ ಸಾರಾಯಿ ಸ್ಯಾಚೇಟುಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದ್ದು, ಕರ್ನಾಟಕ ಸರ್ಕಾರ ರಾಸಾಯನಿಕ ವಿಶ್ಲೇಷಕರು ಇವರ ವರದಿ ಸಂ:ಇ–289–10, ..6.10.07ರ ವರದಿಯಲ್ಲಿ ಸಾರಾಯಿಯ ಮದ್ಯಸಾರ ಪ್ರಮಾಣ 28.0% ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ..ಗೂ ವಶಪಡಿಸಿಕೊಂಡ ಸಾರಾಯಿ ಸ್ಯಾಚೇಟುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ..27.5.2008ರ ತನಿಖಾ ವರದಿಯಲ್ಲಿ ಶಿಫಾರಸ್ಸು ಮಾಡಿರುವ ಮೇರೆಗೆ ಈ ಪ್ರಾಧಿಕಾರದ ಆದೇಶ ಸಮ ಸಂಖ್ಯೆ ದಿನಾಂಕ: ..7.2008 ರಂದು ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನದ ಮುಟ್ಟುಗೋಲು ನಡವಳಿ ಪ್ರಕಿಯೆಯನ್ನು ಕಾಯ್ದಿರಿಸಿ, ಸಾರಾಯಿ

ಸ್ಯಾಚೇಟುಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಎ ಅಡಿಯಲ್ಲಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಕಲಂ 43ಎ (3)ರನ್ವಯ ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರ ಸಮಕ್ಷಮ ನಾಶಪಡಿಸಲಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಚೇತಕ್ ಸ್ಕೂಟರಿನ ಮೌಲ್ಯವನ್ನು ಪಡೆದುಕೊಳ್ಳುವ ಬಗ್ಗೆ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ.ಜಿಲ್ಲೆ, ಮಂಗಳೂರು ಇವರು ವಾಹನದ ಈಗಿನ ಮಾರುಕಟ್ಟೆ ಮೌಲ್ಯ ರೂ.3,000/- ಗಳಾಗಬಹುದೆಂದು ಅಂದಾಜಿಸಿ ದಿ:8.7.2008ರಂದು ದೃಢೀಕರಣ ಪತ್ರ ನೀಡಿರುತ್ತಾರೆ.

ವಾಹನ ಮಾಲೀಕರಿಗೆ ಕರ್ನಾಟಕ ಅಬಕಾರಿ ಕಾಯಿದೆ 1965ರ ಸೆಕ್ಷನ್ 43ಬಿ ಪ್ರಕಾರ ಕಾರಣ ಕೇಳಿ ನೋಟಿಸನ್ನು ಈ ಪ್ರಾಧಿಕಾರದಿಂದ ದಿ:27.6.2008ರಂದು ನೋಂದಾಣಿ ಅಂಚೆ ಮೂಲಕ ನೀಡಲಾಗಿರುತ್ತದೆ. ಸದ್ರಿ ನೋಟಿಸು ದಿನಾಂಕ 18.7.2008 ರಂದು ಸ್ವೀಕೃತಿಯಾಗದೇ ವಾಪಾಸ್ಸು ಈ ಕಚೇರಿಗೆ ಬಂದಿರುತ್ತದೆ. ಆದರೆ ಇದುವರೆಗೂ ವಾಹನ ಮಾಲೀಕರಾಗಲೀ ಅಥವಾ ಅವರ ಪರ ವಕೀಲರಾಗಲೀ ಉತ್ತರವನ್ನು ನೀಡಿರುವುದಿಲ್ಲ.

ನಂತರ ವಿಚಾರಣೆಯನ್ನು ಪ್ರಾರಂಭಿಸಿ ಸರ್ಕಾರದ ಪರ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಿ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಪ್ರತಿರಕ್ಷಾ ಸಾಕ್ಷಿಗಳು ಹಾಜರಾಗವೇ ಇದುದ್ದರಿಂದ ಪ್ರತಿ ರಕ್ಷಾ ಸಾಕ್ಷಿಗಳ ಹೇಳಿಕೆಯನ್ನು ಪಡೆಯಲಾಗಿರುವುದಿಲ್ಲ.

ಈ ಪ್ರಕರಣದಲ್ಲಿ ಸರ್ಕಾರದ ಅಭಿಯೋಜನ ಪರ ಸಲ್ಲಿಸಿರುವ ಸಾಕ್ಷಾಧ್ಯಾರಗಳಿಂದ ಈ ಕೆಳಗಿನ ವಿವಿಧಾಂಶಗಳನ್ನು ತೀರ್ಮಾನಿಸುವುದು ಅಗತ್ಯವಾಗಿದ್ದು ಪರಿಶೀಲನಾಂಶಗಳು ಈ ಕೆಳಗಿನಂತಿರುತ್ತದೆ.

1. ದಿನಾಂಕ:20.08.2007ರಂದು ಬಜಾಜ್ ಚೇತಕ್ ಸ್ಕೂಟರ್ ಸಂ: KA-19H-4795 ರಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಸಾರಾಯಿ ಸಾಗಾಣಿಕೆ ಮಾಡಲಾಗಿದೆಯೇ?
2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು ತನಗೆ ತಿಳಿಯದೇ ಅಕ್ರಮ ಸಾರಾಯಿ ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುವನ್ನು ವಾಹನ ಮಾಲೀಕರು ಸಾಬೀತುಪಡಿಸಿದಾರೆಯೇ?
3. ಜಪ್ತಿಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

**ಪ್ರಾ.ಸ-1:**

ಶ್ರೀ ಕೆ.ಟಿ. ಧರ್ಮಪ್ಪ, ಅಬಕಾರಿ ಉಪ ನಿರೀಕ್ಷಕರು(1) ಜಾರಿ ಮತ್ತು ತನಿಖೆ ಬೆಳ್ತಂಗಡಿ ಇವರು ದಿ:5.11.2008ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಇವರು ಪ್ರಕರಣದ ಫಿರ್ಯಾದುದಾರರಾಗಿದ್ದು, ತಮ್ಮ ಸಾಕ್ಷಿಯನ್ನು ನೀಡಿರುತ್ತಾರೆ. ತಾನು ದಿನಾಂಕ: 12.6.2006ರಿಂದ ಬೆಳ್ತಂಗಡಿ ಜಾರಿ ಮತ್ತು ತನಿಖೆ ಕಛೇರಿಯಲ್ಲಿ ಅಬಕಾರಿ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ:20.8.2007ರಂದು ನನಗೆ ದೊರೆತ ಖಚಿತ ವರ್ತಮಾನದಂತೆ ನಾನು ನನ್ನ ಸಿಬ್ಬಂದಿಯವರೊಂದಿಗೆ ಇಲಾಖಾ ವಾಹನದಲ್ಲಿ ರಸ್ತೆ ಗಸ್ತನ್ನು ಮಾಡುತ್ತಿದ್ದಾಗ ಪಾರಂಕಿ, ಪಾಂಡವರ ಕಲ್ಲು ರಸ್ತೆಯಲ್ಲಿ ಸಂಜೆ 6-30 ಗಂಟೆಗೆ ಪಾರಂಕಿ ಕಡೆಯಿಂದ ಬಜಾಜ್ ಚೇತಕ್ ಸ್ಕೂಟರ್ ವಾಹನ ಬರುತ್ತಿತ್ತು. ಅದನ್ನು ನಿಲ್ಲಿಸಬೇಕೆನ್ನುವಷ್ಟರಲ್ಲಿ ಆ ವಾಹನದಲ್ಲಿದ್ದ ವ್ಯಕ್ತಿಯು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ವಾಹನ ಬಿಟ್ಟು ಗೇರು ತೋಪಿನ ಒಳಗಡೆ ಓಡಲು ಪ್ರಾರಂಭಿಸಿದ. ಅವನನ್ನು ನನ್ನ ಸಿಬ್ಬಂದಿಗಳು ಬೆನ್ನಟ್ಟಿದಾಗ ಸಿಗಲಿಲ್ಲ. ಸದ್ರಿ ವ್ಯಕ್ತಿ ಬಿಟ್ಟು ಹೋದ ಸ್ಕೂಟರಿನ ಬಳಿ ಬಂದಾಗ ಒಂದು ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ 100 ಎಂಎಲ್‌ನ 90 ಸಾರಾಯಿ ಸ್ಯಾಚೇಟುಗಳು ಇರುವುದು ಕಂಡು ಬಂತು. ಅವುಗಳ ಮೇಲೆ ಗೌರಿಬಿದನೂರು ಗೌರಿ ಇಂಡಸ್ಟ್ರೀಸ್, ಕರ್ನಾಟಕ ಸರ್ಕಾರ ಎಂದು ಇತ್ತು. ಸ್ಕೂಟರನ್ನು ಪರಿಶೀಲಿಸಲಾಗಿ ಅದರ ನೊಂದಾಣಿ ಸಂ: ಕೆಎ-19 ಹೆಚ್-4795 ಆಗಿತ್ತು. ಸದ್ರಿ ವ್ಯಕ್ತಿಯು ಸಾರಾಯಿ ಸ್ಯಾಚೇಟುಗಳನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿದ್ದುದು ಖಚಿತವಾದ ಮೇರೆಗೆ ವಾಹನ ಸಮೇತ ಸಾರಾಯಿ ಸ್ಯಾಚೆಟುಗಳನ್ನು ಸ್ಥಳದಲ್ಲಿಯೇ ಅಮಾನತ್ತುಪಡಿಸಿ ವಶಪಡಿಸಿಕೊಳ್ಳಲಾಯಿತು. ಮತ್ತು 10 ಸಾರಾಯಿ ಸ್ಯಾಚೇಟುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಬಟ್ಟೆಯಿಂದ ಸುತ್ತಿ ನೂಲಿನಿಂದ ಕಟ್ಟಿ ಅರಗು ಹಾಕಿ ಇಲಾಖಾ ಮೊಹರು ಹಾಕಿ ಸೀಲು ಮಾಡಲಾಯಿತು. ಮತ್ತು ಸ್ಥಳದಲ್ಲಿಯೇ ಮಾದರಿ ಸೀಲನ್ನು ತಯಾರಿಸಲಾಯಿತು., ತಯಾರಿಸಿದ ಮಹಜರನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ-1 ಎಂದು ಸಾಕ್ಷಿಯ ಸಹಿಯನ್ನು, ಪಿ-1(ಎ) ಎಂದು ಗುರುತಿಸಲಾಯಿತು ಮಾದರಿ ಸೀಲನ್ನು ನಿಶಾನೆ ಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-2(ಎ) ಎಂದು ಗುರುತಿಸಲಾಯಿತು. ನಂತರ ಅಮಾನತುಪಡಿಸಿಕೊಂಡ ವಸ್ತುಗಳೊಂದಿಗೆ ಕಛೇರಿಗೆ ಬಂದು ಪ್ರಥಮ ಮಾಹಿತಿ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿ ಕೊಟ್ಟಿರುತ್ತೇನೆ ಪ್ರ.ಮಾ.ವರದಿಯನ್ನು ನಿಶಾನೆ ಪಿ-3 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ-3(ಎ) ಎಂದು ಗುರುತಿಸಲಾಯಿತು. ವಾಹನದ ಮಾಲೀಕತ್ವದ ಬಗ್ಗೆ ಮಂಗಳೂರಿನ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಬಿ ರಿಜಿಸ್ಟ್ರಾರ್ ವರದಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ನೋಡುತ್ತಿದ್ದು ನಿಶಾನೆ ಪಿ-4 ಎಂದು ಗುರುತಿಸಲಾಯಿತು. ವಾಹನ ಮಾಲೀಕರಾದ ಎಂ.ಆರ್. ರಂಜನ್ ಎನ್ನುವವರಿಗೆ ಕಾರಣ ಕೇಳಿ ನೋಟೀಸ್‌ನ್ನು ಕೊಟ್ಟಿರುತ್ತೇನೆ

ಿಯುವರು ಯಾವುದೇ ಉತ್ತರವನ್ನು ಸಲ್ಲಿಸಿರುವುದಿಲ್ಲ. ಸದ್ರಿಯವರು ನಿಶಾನೆ ಪಿ–4ರಲ್ಲಿ ಕಾಣಿಸಿದ ವಿಳಾಸದಲ್ಲಿರಲಿಲ್ಲ. ಮಾನತುಪಡಿಸಿಕೊಂಡ ಮಾದರಿ ಸಾರಾಯಿ ತೊಟ್ಟೆಗಳನ್ನು ರಾಸಾಯನಿಕ ವಿಶ್ಲೇಷಕರಲ್ಲಿ ಕಳುಹಿಸಿ, ಅವರಿಂದ ವರದಿಯನ್ನು ಡೆದುಕೊಂಡಿರುತ್ತೇನೆ. ಸದ್ರಿ ವರದಿಯನ್ನು ನಿಶಾನೆ ಪಿ–5 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–5(ಎ) ಎಂದು ುರುತಿಸಲಾಯಿತು. ಪರೀಕ್ಷಿಸಿದ ಸಾರಾಯಿ ಸ್ಯಾಚೆಟ್‌ಗಳಲ್ಲಿ ಶೇ.28 ರಷ್ಟು ಮದ್ಯಸಾರ ಇರುವುದಾಗಿ ನಿಶಾನೆ ಪಿ–5ರಲ್ಲಿ ಾಣಿಸಲಾಗಿದೆ. ಈ ಪ್ರಕರಣದಲ್ಲಿ ಬಜಾಜ್ ಚೇತಕ್ ದ್ವಿಚಕ್ರ ವಾಹನವನ್ನು ಅಕ್ರಮ ಸಾರಾಯಿ ಸ್ಯಾಚೇಟುಗಳನ್ನು ಸಾಗಾಣಿಕೆಗೆ ಳಸಿರುವುದು ಖಚಿತವಾದ ಮೇರೆಗೆ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆಗೆ ಒಳಪಡಿಸಲು ಾನ್ಯ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದ.ಕ. ಜಿಲ್ಲೆ ಮಂಗಳೂರು ಇವರಿಗೆ ದಿ:27.5.2008 ರಂದು ವರದಿಯನ್ನು ಲ್ಲಿಸಿರುತ್ತೇನೆ. ಸದ್ರಿ ವರದಿಯನ್ನು ನೋಡಲಾಗಿ ಅದನ್ನು ನಿಶಾನೆ ಪಿ–6 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–6(ಎ) ಂದು ಗುರುತಿಸಲಾಯಿತು ಎಂದು ಸಾಕ್ಷಿ ನೀಡಿರುತ್ತಾರೆ.

ವಾಹನದ ಮಾಲೀಕರಾದ ಶ್ರೀ ರಂಜನ್ ರವರಿಗೆ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 43 ರಡಿ ವಾಹನದ ುಟ್ಟುಗೋಲು ಸಂಬಂಧ ನೀಡಿದ ನೋಟೀಸು ವಾಪಸ್ಸು ಬಂದಿದ್ದು, ಸದ್ರಿಯವರು ನೋಟಿಸನ್ನು ಪಡೆದಿರುವುದಿಲ್ಲ. ಆದ ಾರಣ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಗಿದೆ.

1965ನೇ ಕರ್ನಾಟಕ ಅಬಕಾರಿ ಕಾಯ್ದೆ ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ತ್ತೆಯಾಗದಿದ್ದಲ್ಲಿ, ಅಥವಾ ಪತ್ತೆಯಾಗುವ ಸಾಧ್ಯತೆ ಇಲ್ಲದಿದ್ದಲ್ಲಿ ಪ್ರಕರಣವನ್ನು ಪತ್ತೆಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನು ದ್ಧವಾಗಿದೆಯೆಂದು ಸಾಕ್ಷ್ಯಾಧಾರಗಳೊಂದಿಗೆ ಸಾಭೀತುಪಡಿಸದೇ ಇದ್ದಲ್ಲಿ, ಸದ್ರಿ ಸೊತ್ತುಗಳು, ಅಬಕಾರಿ ಕಾಯ್ದೆ ಕಲಂ 43ರ ಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ ಅಂತಹ ಸೊತ್ತುಗಳನ್ನು ಕಲಂ 3ಎ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಈ ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷಾಧಾರದ ಮೇಲೆ ಹಾಗೂ ಲಭ್ಯವಿರುವ ಾಖಲಾತಿಗಳಿಂದ ದಿ:20.08.2007ರಂದು ಜಪ್ತುಪಡಿಸಿರುವ ಬಜಾಜ್ ಚೇತಕ್ ಸ್ಕೂಟರ್ ಸಂ: KA-19H-4795 ರಲ್ಲಿ ಕ್ರಮವಾಗಿ ಸಾರಾಯಿ ಸಾಗಾಣಿಕೆಯಾಗಿರುವುದು ಸಾಭೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ರಿಗಣಿಸಲಾಗಿದೆ.

ಇಂತಹ ಅಕ್ರಮ ಸಾರಾಯಿಯು ತನ್ನ ತಿಳುವಳಿಕೆಗೆ ಬಾರದೇ ನಡೆದಿದೆ ಎಂಬುದನ್ನು ಸಾಕ್ಷದಾರಗಳೊಂದಿಗೆ ಾಭೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಆದರೆ ಈ ಪ್ರಕರಣದ ವಾಹನದ ಮಾಲೀಕರಿಗೆ ಾರಣ ಕೇಳಿ ನೋಟೀಸು ನೋಂದಾಯಿತ ಅಂಚೆ ಮೂಲಕ ನೀಡಲಾಗಿದ್ದರೂ, ಸದ್ರಿ ನೋಟೀಸು ವಾಹನದ ಮಾಲೀಕರಿಗೆ ್ಯಾರಿಯಾಗದೇ ಅಂಚೆ ಷರಾದೊಂದಿಗೆ ವಾಪಸ್ಸು ಪ್ರಾಧಿಕಾರಕ್ಕೆ ಬಂದಿರುತ್ತದೆ. ಪ್ರಕರಣ ದಾಖಲಾಗಿ ಈಗಾಗಲೇ ಒಂದು ವರ್ಷ ರಡು ತಿಂಗಳು ಕಳೆದಿದ್ದರೂ ವಾಹನದ ಮಾಲೀಕರು ತನ್ನ ವಾಹನವನ್ನು ಪಡೆದುಕೊಳ್ಳುವ ಬಗ್ಗೆ ಕಾನೂನು ರೀತ್ಯಾ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಹಾಗೂ ವಾಹನದ ಮಾಲೀಕರು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಾಕ್ಷ್ಯಾಧಾರಗಳೊಂದಿಗೆ ವಾಹನವನ್ನು ತನ್ನ ತಿಳುವಳಿಕೆಗೆ ಬಾರದೇ ಅಕ್ರಮ ಸಾರಾಯಿ ಸಾಗಾಣಿಕೆ ಉಪಯೋಗಿಸಲಾಗಿದೆ ಂದು ರುಜುವಾತು ಪಡಿಸಲು ವಿಫಲರಾಗಿರುವುದನ್ನು ಪರಿಗಣಿಸಿದಾಗ, ವಾಹನದ ಮಾಲೀಕರು ತನ್ನ ವಾಹನದಲ್ಲಿ ಕ್ರಮವಾಗಿ ಸಾರಾಯಿ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಹಾಗೂ ಈ ಪ್ರಾಧಿಕಾರದ ಮುಂದೆ ಾಜರಾಗದೇ ಇರುವುದನ್ನು ಗಮನಿಸಿದಾಗ ವಾಹನ ಮಾಲೀಕರು ತನ್ನ ತಿಳುವಳಿಕೆಯಿಂದಲೇ ವಾಹನವನ್ನು ಅಕ್ರಮ ಸಾರಾಯಿ ಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಭೀತಾಗಿರುತ್ತದೆ. ಈ ಮೇಲಿನ ಕಾರಣಗಳಿಂದ ಎರಡನೇ ಅಂಶವನ್ನು ಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತಿಪಡಿಸಲಾಗಿರುವ ಜಾಜ್ ಚೇತಕ್ ಸ್ಕೂಟರನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದೇ ಸೂಕ್ತವೆಂದು ಪ್ರಾಧಿಕಾರವು ತೀರ್ಮಾನಿಸಿ ಈ ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಬಜಾಜ್ ಚೇತಕ್ ಸ್ಕೂಟರ್ ಸಂ: KA-19H-4795 ನ್ನು ಸರ್ಕಾರಕ್ಕೆ ಮುಟ್ಟುಗೋಲು ಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

**ಆದೇಶ**

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965ನೇ ಕಾಲಂ 43 (ಎ) ಅಡಿಯಲ್ಲಿ ದತ್ತವಾದ ಧಿಕಾರವನ್ನು ಚಲಾಯಿಸಿ ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ, ಅಬಕಾರಿ ಉಪ ನಿರೀಕ್ಷಕರು 1) ಜಾರಿ ಮತ್ತು ತನಿಖೆ, ಬೆಳ್ತಂಗಡಿ ಇವರ ತಕ್ಷೀರು ಸಂಖ್ಯೆ: 3/2007–08 ದಿ: 20–8–2007 ರಲ್ಲಿ ಜಪ್ತಿಪಡಿಸಿಕೊಂಡಿರುವ

ಬಜಾಜ್ ಚೇತಕ್ ಸ್ಕೂಟರ್ ಸಂ: KA-19H-4795 (ಚಾಸೀಸ್ ನಂ: 06F95B93327 ಇಂಜಿನ್ ನಂ: 06M95B67489)ನ್ನು ನಿಯಮ 43ಎ(2) ರನ್ವಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:24.11.2008 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತದೆ.

**ನೂರ್ ಮಹಮ್ಮದ್ ಹುಸೇನ್**
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

**ಅನುಬಂಧ–I**

**ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ:–**

ಪ್ರಾಸಾ–I: ಶ್ರೀ ಧರ್ಮಪ್ಪ ಕೆ.ಟಿ, ಅಬಕಾರಿ ಉಪ ನಿರೀಕ್ಷಕರು (1) ಬೆಳ್ತಂಗಡಿ ವಲಯ

**ಅನುಬಂಧ–II**

**ಫಿರ್ಯಾದುದಾರರ ಪರ ಮಂಡಿಸಲಾದ ದಾಖಲೆಗಳು–**

| | | |
|---|---|---|
| ನಿಶಾನೆ ಪಿ–I | : | ಮಹಜರು ಪ್ರತಿ |
| ನಿಶಾನೆ ಪಿ–1 ಎ | : | ಫಿರ್ಯಾದುದಾರರು ಹಾಕಿದ ಮಹಜರಿನ ಸಹಿ. |
| ನಿಶಾನೆ ಪಿ–2 | : | ಮಾದರಿ ಸೀಲು |
| ನಿಶಾನೆ ಪಿ2–ಎ | : | ಮಾದರಿ ಸೀಲಿನಲ್ಲಿ ಸಾಕ್ಷಿಯ ಸಹಿ |
| ನಿಶಾನೆ ಪಿ–3 | : | ಪ್ರಥಮ ಮಾಹಿತಿ ವರದಿ. |
| ನಿಶಾನೆ ಪಿ–3 ಎ | : | ಸಾಕ್ಷಿಯ ಸಹಿ |
| ನಿಶಾನೆ ಪಿ–4 | : | ವಾಹನದ ಬಿ ಎಕ್ಸ್‌ಟ್ರಾಕ್ಟ್ ವರದಿ |
| ನಿಶಾನೆ ಪಿ–5 | : | ರಾಸಾಯನಿಕ ಕೆಮಿಕಲ್ ವರದಿ |
| ನಿಶಾನೆ ಪಿ–5 ಎ | : | ಸಾಕ್ಷಿಯ ಸಹಿ |
| ನಿಶಾನೆ ಪಿ–6 | : | ತನಿಖಾ ವರದಿ |
| ನಿಶಾನೆ ಪಿ–6 ಎ | : | ಸಾಕ್ಷಿಯ ಸಹಿ |

**ಅನುಬಂಧ–III**

**ವಾಹನ ಮಾಲೀಕರ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿದಾರರು:–**

**ಅರ್ಜಿದಾರರ ಹೇಳಿಕೆ:–** ಯಾವುದು ಇಲ್ಲ–

**ಅನುಬಂಧ–IV**

**ವಾಹನ ಮಾಲೀಕರ ಪರವಾಗಿ ಗುರುತಿಸಲಾದ ದಾಖಲೆಗಳು:–** ಯಾವುದು ಇಲ್ಲ–

**ನೂರ್ ಮಹಮ್ಮದ್ ಹುಸೇನ್**
ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್. 1348

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ಉಪವಿಭಾಗ–1, ಮಂಡ್ಯ, ಇವರ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆ:ಕಾಅಮಂ–1/ಕಾನಪಕಾ/ಮರಣ/ವಿವ–05/2009**

**ಅರ್ಜಿದಾರರು**

ಶ್ರೀ ಶಂಕರ್ ಸಹು ಬಿನ್ ಬರೂನ್,
ಅಮರಪಳ್ಳಿ ಗ್ರಾಮ, ಬಹಲಪದರ್
(ಗ್ರಾಮ ಪಂಚಾಯಿತಿ), ಬಿರುಮಹರಾಜ್ ಪುರ್ ತಾ:
ಸೋನಾಪುರ ಜಿಲ್ಲೆ, ಓರಿಸ್ಸಾ ರಾಜ್ಯ,
ಹಾಲಿ ವಾಸ: ಕೇರಾಫ್: ಹೆಚ್.ಸಿ. ಸುರೇಶ್, ಹುಸ್ಕೂರ್
ಗ್ರಾಮ, ಕಸಬಾ ಹೋಬಳಿ, ಮಳವಳ್ಳಿ ತಾ: ಮಂಡ್ಯ ಜಿಲ್ಲೆ.

**ಪ್ರತಿವಾದಿಗಳು**

1. ಶ್ರೀ ಜಿ.ಬಿ. ರಾಜು ಬಿನ್ ಬೋರಯ್ಯ, ಹೌಸ್ ನಂ:303, ಗೆಜ್ಜಲಗೆರೆ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.
2. ಬ್ರಾಂಚ್ ಮ್ಯಾನೇಜರ್, ಯುನೈಟೆಡ್ ಇಂಡಿಯ ಇನ್ಸೂರೆನ್ಸ್ ಕಂ.ಲಿ., ನಂ.442/3/4, 2ನೇ ಮಹಡಿ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತದ ಹತ್ತಿರ, ಮೈಸೂರು.

**ಪ್ರಕಟಣೆ**

ಅರ್ಜಿದಾರರಾದ ಶ್ರೀಮತಿ ಶಂಕರ್ ಸಹು ಇವರು ತಾವು ಶ್ರೀ ಪಂಕಜ್ ಇವರ ತಂದೆ ಎಂದು ಅವರ ಮರಣದಿಂದ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಶ್ರೀ ಪಂಕಜ್ ರವರು ಒಂದನೇ ಪ್ರತಿವಾದಿಗಳಾದ ಶ್ರೀ ಜಿ.ಬಿ. ರಾಜು ಇವರ ವಾಹನ ಸಂಖ್ಯೆ ಕೆ.ಎ.09/9713 ರಲ್ಲಿ ಲೋಡರ್ ಅಂಡ್ ಅನ್ ಲೋಡರ್ ಆಗಿ ಕೆಲಸ

ನಿರ್ವಹಿಸುತ್ತಿದ್ದಾಗ ದಿನಾಂಕ:09.03.2009 ರಂದು ಸಂಭವಿಸಿದ ಅಪಘಾತದಲ್ಲಿ ಮರಣಹೊಂದಿದರೆಂದು ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಕಾನೂನು ಬದ್ಧ ಆಶ್ರಿತರೆಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೆ, ಅಂತಹವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ನೋಟೀಸ್ ಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಆಕ್ಷೇಪಣೆಗಳನ್ನಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಎ.ಸಿ. ತಮ್ಮಣ್ಣ
ಕಾರ್ಮಿಕ ಅಧಿಕಾರಿ ಹಾಗೂ ಆಯುಕ್ತರು,
ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ ಅಡಿ, ಉಪವಿಭಾಗ–1, ಮಂಡ್ಯ.

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ಉಪವಿಭಾಗ–1, ಮಂಡ್ಯ, ಇವರ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆ:ಕಾಅಮಂ–1/ಕಾನಪಕಾ/ಮರಣ/ವಿವ–06/2009**

**ಅರ್ಜಿದಾರರು**

1. ಜಗದಾನಂದ ಸಹು ಬಿನ್ ಬಿರ್ ಸಹು
2. ಕೈಂಟಾ ಸಹು ಕೋಂ: ಜದಾನಂದ ಸಹು, ಅಮರಪಳ್ಳಿ ಗ್ರಾಮ, ಬಹಲಪದರ್ (ಗ್ರಾಮ ಪಂಚಾಯಿತಿ), ಬಿರುಮಹರಾಜ್ ಪುರ್ ತಾ: ಸೋನಾಪುರ ಜಿಲ್ಲೆ, ಓರಿಸ್ಸಾ ರಾಜ್ಯ, ಹಾಲಿ ವಾಸ: ಕೇರಾಫ್: ಹೆಚ್.ಸಿ. ಸುರೇಶ್, ಹುಸ್ಕೂರ್ ಗ್ರಾಮ, ಕಸಬಾ ಹೋಬಳಿ ಮಳವಳ್ಳಿ ತಾ: ಮಂಡ್ಯ ಜಿಲ್ಲೆ.

**ಪ್ರತಿವಾದಿಗಳು**

1. ಶ್ರೀ ಜಿ.ಬಿ. ರಾಜು ಬಿನ್ ಬೋರಯ್ಯ, ಹೌಸ್ ನಂ:303, ಗೆಜ್ಜಲಗೆರೆ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.
2. ಬ್ರಾಂಚ್ ಮ್ಯಾನೇಜರ್, ಯುನೈಟೆಡ್ ಇಂಡಿಯ ಇನ್ಸೂರೆನ್ಸ್ ಕಂ.ಲಿ., ನಂ.442/3/4, 2ನೇ ಮಹಡಿ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತದ ಹತ್ತಿರ, ಮೈಸೂರು.

**ಪ್ರಕಟಣೆ**

ಅರ್ಜಿದಾರರಾದ ಶ್ರೀಮತಿ ಜಗದಾನಂದ ಸಹು ಇವರು ತಾವು ಶ್ರೀ ಸುಗದೀಪ್ ಇವರ ತಂದೆ ಎಂದು ಅವರ ಮರಣದಿಂದ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಶ್ರೀ ಸುಗದೀಪ್ ರವರು ಒಂದನೇ ಪ್ರತಿವಾದಿಗಳಾದ ಶ್ರೀ ಜಿ.ಬಿ. ರಾಜು ಇವರ ವಾಹನ ಸಂಖ್ಯೆ ಕೆ.ಎ.09/9713 ರಲ್ಲಿ ಲೋಡರ್ ಅಂಡ್ ಅನ್ ಲೋಡರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ದಿನಾಂಕ:09.03.2009 ರಂದು ಸಂಭವಿಸಿದ ಅಪಘಾತದಲ್ಲಿ ಮರಣಹೊಂದಿದರೆಂದು ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲೀ ಅಥವಾ ಬೇರೆ ಯಾರಾದರೂ ಮೃತರ ಕಾನೂನು ಬದ್ಧ ಆಶ್ರಿತರೆಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೆ, ಅಂತಹವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ನೋಟೀಸ್ ಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಆಕ್ಷೇಪಣೆಗಳನ್ನಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಎ.ಸಿ. ತಮ್ಮಣ್ಣ
ಕಾರ್ಮಿಕ ಅಧಿಕಾರಿ ಹಾಗೂ ಆಯುಕ್ತರು,
ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ ಅಡಿ, ಉಪವಿಭಾಗ–1, ಮಂಡ್ಯ.

ಆರ್. 380

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ–1, ಚಿಕ್ಕಮಗಳೂರು**

**ಸಂಖ್ಯೆ:ಕಾಪಕಾ/ಎಫ್–13:2008, ದಿನಾಂಕ: 23ನೇ ಮಾರ್ಚ್ 2009**

**ಅರ್ಜಿದಾರರು:**

1. ಶ್ರೀಮತಿ ಕುಸುಮ ಕೋಂ:ಲೇ ಜವರಯ್ಯ, ಮುತ್ತಿನಮ್ಮ ಟೆಂಪಲ್ ರಸ್ತೆ, ಹಿರೇಮಗಳೂರು, ಜ್ಯೋತಿನಗರ ಅಂಚೆ, ಚಿಕ್ಕಮಗಳೂರು.
2. ಹೆಚ್.ಜಿ. ಪ್ರದೀಪ್ ಬಿನ್ ಲೇ: ಜವರಯ್ಯ, ಮುತ್ತಿನಮ್ಮ ಟೆಂಪಲ್ ರಸ್ತೆ, ಹಿರೇಮಗಳೂರು. ಜ್ಯೋತಿನಗರ ಅಂಚೆ, ಚಿಕ್ಕಮಗಳೂರು.

**ಪ್ರತಿವಾದಿಗಳು:**

1. ಶ್ರೀ ಹೆಚ್.ಎಂ. ಮಲ್ಲೇಶಪ್ಪ ಬಿನ್:ಲೇ ಮಲ್ಲೇಗೌಡ ಅಗ್ರಿಕಲ್ಚರಿಸ್ಟ್ ಅಂಡ್ ಸಿಮೆಂಟ್ ವೆಂಡರ್, ಹಳೇಬೀಡು, ಟೌನ್ ಅಂಡ್ ಅಂಚೆ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

ಶ್ರೀ ಜವರಯ್ಯ ಎಂಬುವರು ಪ್ರತಿವಾದಿಯಲ್ಲಿ ಕೆಲಸದ ಮೇಲಿದ್ದಾಗ ದಿ: 26.08.2007 ರಂದು ಅಪಘಾತ ಉಂಟಾಗಿ ಮೃತಪಟ್ಟಿರುವ ಬಗ್ಗೆ ಪರಿಹಾರ ಕೋರಿ ಮೇಲ್ಕಂಡ ಅರ್ಜಿದಾರರು ಅರ್ಜಿಯನ್ನು ಈ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಆಕ್ಷೇಪಣೆ ಅಥವಾ ಅರ್ಜಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಬಾರದೆ ಇದ್ದಲ್ಲಿ ಅರ್ಜಿದಾರರನ್ನು ಹೊರತುಪಡಿಸಿ ಮೃತನ ಅವಲಂಬಿತರು ಯಾರೂ ಇಲ್ಲ ಎಂದು ಪರಿಗಣಿಸಿ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

**ಕೆ.ಜಿ. ಜಾನ್ಸನ್**
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಉಪವಿಭಾಗ–1, ಚಿಕ್ಕಮಗಳೂರು.

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಉಪವಿಭಾಗ–1, ಚಿಕ್ಕಮಗಳೂರು**
**ಸಂಖ್ಯೆ:ಕಾಪಕಾ/ಎಫ್–18:2007, ದಿನಾಂಕ: 23ನೇ ಮಾರ್ಚ್ 2009**

**ಅರ್ಜಿದಾರರು:**

1. ಶ್ರೀಮತಿ ಜಾನಕಿ ಕೋಂ: ಚಂದ್ರಶೇಖರ ನಾಯ್ಡು,
2. ಕು:ನವೀನಾ ಬಿನ್: ಚಂದ್ರಶೇಖರ್ ನಾಯ್ಡು,
   ವಾಸ: ಕೆಳಗೂರು ಗ್ರಾಮ, ಕಬ್ಬಿಣ ಸೇತುವೆ ಅಂಚೆ,
   ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ.
3. ಶ್ರೀ ಚಂದ್ರಶೇಖರ್ ನಾಯ್ಡು, ಬಿನ್: ವೀರಸ್ವಾಮಿ ನಾಯ್ಡು,
   ವಾಸ: ಮಲ್ಲೇನಹಳ್ಳಿ ಗ್ರಾಮ, ಮತ್ತು ಅಂಚೆ, ಚಿಕ್ಕಮಗಳೂರು ತಾಲ್ಲೂಕು.

**ಪ್ರತಿವಾದಿಗಳು:**

1. ಶ್ರೀ ಮೊಹಮ್ಮದ್ ಇಬ್ರಾಹಿಂ ಬಿನ್ ದಿ:ಪಕ್ಕಿಬ್ಯಾರಿ, ವಿಜಯಪುರ ಬಡಾವಣೆ,
   ವಾಸ: ವಿಜಯಪುರ ಮುಖ್ಯರಸ್ತೆ, ಚಿಕ್ಕಮಗಳೂರು.
2. ಶ್ರೀ ಅಣ್ಣಪ್ಪ ಬಿನ್:ರಂಗಪ್ಪ, ಲಾರಿ ನಂ–ಕೆಎ–19:3615 ಮಾಲೀಕರು
   ವಾಸ:ಅರವಿಂದ ನಗರ, ಬಸವನಹಳ್ಳಿ, ಚಿಕ್ಕಮಗಳೂರು.
3. ದಿ ಬ್ರಾಂಚ್ ಮ್ಯಾನೇಜರ್ ಮೆ:ಯುನೈಟೆಡ್ ಇಂಡಿಯಾ, ಇನ್ಸೂರೆನ್ಸ್ ಕಂ.ಲಿ., ಚಿಕ್ಕಮಗಳೂರು.

ಶ್ರೀ ಹರೀಶ್ ಎಂಬುವರು ಪ್ರತಿವಾದಿಯಲ್ಲಿ ಕೆಲಸದ ಮೇಲಿದ್ದಾಗ ದಿ: 03.04.2004 ರಂದು ಅಪಘಾತ ಉಂಟಾಗಿ ಮೃತಪಟ್ಟಿರುವ ಬಗ್ಗೆ ಪರಿಹಾರ ಕೋರಿ ಮೇಲ್ಕಂಡ ಅರ್ಜಿದಾರರು ಅರ್ಜಿಯನ್ನು ಈ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತರ ನಿಜವಾದ ಅವಲಂಬಿತರು ಎಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗಾಗಿ ತಮ್ಮ ಆಕ್ಷೇಪಣೆ ಅಥವಾ ಅರ್ಜಿ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೇಗಳಾಗಲೀ ಅಥವಾ ಅರ್ಜಿಗಳಾಗಲೀ ಬಾರದೆ ಇದ್ದಲ್ಲಿ ಅರ್ಜಿದಾರರನ್ನು ಹೊರತುಪಡಿಸಿ ಮೃತನ ಅವಲಂಬಿತರು ಯಾರೂ ಇಲ್ಲ ಎಂದು ಪರಿಗಣಿಸಿ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

**ಕೆ.ಜಿ. ಜಾನ್ಸನ್**
ಪಿ.ಆರ್. 381
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಉಪವಿಭಾಗ–1, ಚಿಕ್ಕಮಗಳೂರು.

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದ.ಕ. ಉಪ ವಿಭಾಗ–2,**
**ಬೆಂದೂರ್ ವೆಲ್ ವೃತ್ತ, ಕಂಕನಾಡಿ, ಮಂಗಳೂರು–2 ಇವರ ನ್ಯಾಯಾಲಯದಲ್ಲಿ**
**ಸಂಖ್ಯೆ:ಡಬ್ಲ್ಯೂಸಿಎ:ಎಸ್ಆರ್–10/09 ಎಫ್ ದಿನಾಂಕ: 23ನೇ ಏಪ್ರಿಲ್ 2009**

**ಅರ್ಜಿದಾರರು**
ರೇವತಿ ಮೃತ ಚಂದ್ರಶೇಖರ ರವರ ಮಡದಿ
'ಅನಿಲ ಮನೆ' ಸಿರಿಬಾಗಿಲು ವಿಲೇಜ್ ಗುಂಡ್ಯಾ
ಪುತ್ತೂರು ತಾಲ್ಲೂಕು.

**ಪ್ರತಿವಾದಿಗಳು**

1. ಶ್ರೀ ಶರ ಪ್ರಸಾದ, ದಯನಂದ ಗೌಡರ ಮಗ ಕುದೋಳ ಹೌಸ್ ಅಲೆಟ್ಟಿ ವಿಲೇಜ್ ಮತ್ತು ಅಂಚೆ ಸುಳ್ಯ ತಾಲ್ಲೂಕು.
2. ಶ್ರೀಮತಿ ದಾಸ ಮರ್ಸಸೆ ಬೊ.ಸಲಿನ ಪ್ರಾನ್ಸಿಸೊ ವಿ.ಡಿ. ಬೋ.ರವರ ಮಡದಿ ನಂ.3–23/1 ಕಾಸಬೊನೆಟಾ, ರೆಡಬಿಲ್ಡಿಂಗ್, ಟೌನ್, ಸೌತ್ ಮಂಗಳೂರು. ಮಂಗಳೂರು ದ.ಕ.

3. ಬ್ರಾಂಚ್ ಮ್ಯಾನೇಜರ್,
ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್ ಕಂ.ಲಿ.,
ಪೋಪ್ಯುಲರ್ ಬಿಲ್ಡಿಂಗ್ ಎದುರು ಕೆ.ಎಸ್. ರಾವ್
ರೋಡ್ ಮಂಗಳೂರು–1.

**ಅಧಿಸೂಚನೆ**

ಅರ್ಜಿದಾರರಾದ ಶ್ರೀಮತಿ ರೇವತಿ ಇವರು ತಮ್ಮ ಮಗನಾದ ಶ್ರೀ ನಾಗರಾಜ್ ಇವರು 1ನೇ ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ: 08.07.2008 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ತಿಳಿಸಿ, ಅವಲಂಬಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ, ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಲ್ಲಿ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ: ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದು ಈ ಮೂಲಕ ತಿಳಿಸಲಾಗಿದೆ.

**ಹೆಚ್. ಗೋಪಾಲಗೌಡ**
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ದ.ಕ. ಉಪ ವಿಭಾಗ–2, ಮಂಗಳೂರು.

**ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದ.ಕ. ಉಪ ವಿಭಾಗ–2, ಬೆಂದೂರ್ ವೆಲ್ ವೃತ್ತ, ಕಂಕನಾಡಿ, ಮಂಗಳೂರು–2 ಇವರ ನ್ಯಾಯಾಲಯ**

**ಸಂಖ್ಯೆ:ಡಬ್ಲ್ಯೂಸಿಎ:ಎಸ್ಆರ್–11/2009 ಎಫ್ ದಿನಾಂಕ: 23ನೇ ಏಪ್ರಿಲ್ 2009**

**ಅರ್ಜಿದಾರರು**

1. ಮಂಜವ್ವ ಮೃತ ದರ್ಮಣ್ಣರವರ ಮಡದಿ
2. ಕುಟನಕೇರಿ ಹನುಮವ್ವ, ಮೃತ ಹನುಮಂತರವರ ಮಡದಿ 699/Z ಮೂಡಲಗೇರಿ ಮೂಡಲಗೇರಿ ವಿಲೇಜ್ ಮತ್ತು ಅಂಚೆ, ಬಾದಾಮಿ ತಾಲ್ಲೂಕು, ಬಾಗಲಕೋಟೆ ಡಿಸ್ಟ್ರಿಕ್ಟ್

**ಪ್ರತಿವಾದಿಗಳು**

1. ಶ್ರೀ ಮೋಹನ ಕುಮಾರ ಶೆಟ್ಟಿ ಮಹಾಬಲ ಶೆಟ್ಟಿಯವರ ಮಗ ಸೊರ್ನಾಡ ಹೌಸ್ ಸೊರ್ನಡ ವಿಲೇಜ್ ಮತ್ತು ಅಂಚೆ ಬಂಟ್ವಾಳ ತಾಲ್ಲೂಕು. ದ.ಕ.
2. ದಿ ಬ್ರಾಂಚ್ ಮ್ಯಾನೇಜರ್,
ನ್ಯಾಷನಲ್ ಇನ್ಸೂರೆನ್ಸ್ ಕಂಪನಿ. ಲಿ.,
3ನೇ ಮಹಡಿ ಗಣೇಶ್ ಬಿಲ್ಡಿಂಗ್ ಬಿ.ಸಿ.ರೋಡ್,
ಬಂಟ್ವಾಳ ತಾಲ್ಲೂಕು

**ಅಧಿಸೂಚನೆ**

ಅರ್ಜಿದಾರರಾದ ಶ್ರೀಮತಿ ಮಂಜವ್ವ ಇವರು ತಮ್ಮ ಗಂಡನಾದ ಶ್ರೀ ದರ್ಮಣ್ಣ ಇವರು 1ನೇ ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ: 3.3.2009 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ತಿಳಿಸಿ, ಅವಲಂಬಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ, ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆಯು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಲ್ಲಿ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ: ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದು ಈ ಮೂಲಕ ತಿಳಿಸಲಾಗಿದೆ.

**ಹೆಚ್. ಗೋಪಾಲಗೌಡ**
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ದ.ಕ. ಉಪ ವಿಭಾಗ–2, ಮಂಗಳೂರು.

ಪಿ.ಆರ್. 382

## ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆಯಡಿ ಆಯುಕ್ತರು, ಗದಗ ಜಿಲ್ಲೆ, ಗದಗ ಇವರ ನ್ಯಾಯಾಲಯದಲ್ಲಿ

**ಸಂಖ್ಯೆ:ಕಾಅಗ/ಕಾನಪ/ಎಫ್-24/09/71, ದಿನಾಂಕ: 28ನೇ ಏಪ್ರಿಲ್ 2009**

**ಅರ್ಜಿದಾರರು**

1. ಶ್ರೀಮತಿ ದೇವಕ್ಕ ದುರ್ಗಪ್ಪ ಹರಿಜನ,
2. ನಿಂಗಪ್ಪ ದುರ್ಗಪ್ಪ ಹರಿಜನ,
3. ಮೈಲಾರಪ್ಪ ದುರ್ಗಪ್ಪ ಹರಿಜನ
4. ಶ್ರೀಮತಿ ಮರದವ್ವ D/o ಗಾಳೆಪ್ಪ ಹರಿಜನ

ವಾಸ: ಗೋಜನೂರು, ತಾ: ಶಿರಹಟ್ಟಿ, ಜಿ॥ ಗದಗ.

**ಪ್ರತಿವಾದಿಗಳು**

1. ಮಹಾದೇವಪ್ಪ ದೊಡ್ಡ ನಿಂಗಪ್ಪ ಬಟ್ಟೂರ, ವಾಸ: ಮುಳಗುಂದ, ತಾ:ಜಿ: ಗದಗ.
2. ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂ.ಲಿ., ಡಿವಿಜನಲ್ ಮ್ಯಾನೇಜರ್, 1ನೇ ಮಹಡಿ, ಎನ್ಕೆ ಕಾಂಪ್ಲೆಕ್ಸ್, ಕೇಶ್ವಾಪುರ, ಹುಬ್ಬಳ್ಳಿ.

**ಪ್ರಕಟಣೆ**

ಅರ್ಜಿದಾರರಾದ ಶ್ರೀಮತಿ ದೇವಕ್ಕ ದುರ್ಗಪ್ಪ ಹರಿಜನ, 2) ನಿಂಗಪ್ಪ ದುರ್ಗಪ್ಪ, ಹರಿಜನ, 3) ಮೈಲಾರಪ್ಪ ದುರ್ಗಪ್ಪ ಹರಿಜನ, 4) ಶ್ರೀಮತಿ ಮರದವ್ವ D/o ಗಾಳೆಪ್ಪ ಹರಿಜನ ವಾಸ: ಗೋಜನೂರು, ತಾ॥ ಶಿರಹಟ್ಟಿ, ಜಿ॥ಗದಗ ಇವರು, ತಾವು ಮೃತ ದುರ್ಗಪ್ಪ S/o ಮರದವ್ವ ಹರಿಜನ ಇವರ ಹೆಂಡತಿ, ಮಕ್ಕಳು ಮತ್ತು ತಾಯಿ ಎಂದೂ, ಅವರ ಮರಣದಿಂದ ನಷ್ಟಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ದುರ್ಗಪ್ಪ S/o ಮರದವ್ವ ಹರಿಜನ ಇವರು ಒಂದನೇ ಪ್ರತಿವಾದಿಗಳಾದ ಮಹಾದೇವಪ್ಪ ದೊಡ್ಡ ನಿಂಗಪ್ಪ ಬಿಟ್ಟೂರ, ವಾಸಾ ಮುಳಗುಂದ, ಜಿ॥ ಗದಗ ಇವರಲ್ಲಿ ಹಮಾಲ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದು ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲಿ ಅಥವಾ ಬೇರೆ ಯಾರಾದರೂ ಮೃತರ ಕಾನೂನುಬದ್ಧ ಆಶ್ರಿತರೆಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೆ, ಅಂತಹವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಆಕ್ಷೇಪಣೆಗಳನ್ನಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ ಗದಗ ಜಿಲ್ಲೆ ಗದಗ ಹಾಗೂ ಕಾರ್ಮಿಕ ನಷ್ಟ ಪರಿಹಾರ
ಕಾನೂನು ಅಡಿ ಆಯುಕ್ತರು.

## ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆಯಡಿ ಆಯುಕ್ತರು, ಗದಗ ಜಿಲ್ಲೆ, ಗದಗ ಇವರ ನ್ಯಾಯಾಲಯದಲ್ಲಿ

**ಸಂಖ್ಯೆ:ಕಾಅಗ/ಕಾನಪ/ಎಫ್-25/09/74, ದಿನಾಂಕ: 28ನೇ ಏಪ್ರಿಲ್ 2009**

**ಅರ್ಜಿದಾರರು**

1. ಶ್ರೀಮತಿ ರಹ ಮತಬೀ ಕೋಂ ಪೀರಸಾಬ ಬೂದಿಹಾಳ
2. ಹುಸೇನಸಾಬ ತಂದೆ: ಪೀರಸಾಬಬೂದಿಹಾಳ ವಾಸ: ಬೂದಿಹಾಳ, ತಾ॥ ಗದಗ.

**ಪ್ರತಿವಾದಿಗಳು**

1. ಶ್ರೀ ಮಹಾದೇವಪ್ಪ ತಂದೆ: ದೊಡ್ಡನಿಂಗಪ್ಪ ಬಟ್ಟೂರ, PWD ಗುತ್ತಿಗೆದಾರರು, ವಾಸ: ಮುಳಗುಂದ ತಾ॥ ಗದಗ.
2. ದ ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂ.ಲಿ., 1ನೇ ಮಹಡಿ ಎನ್ಕೆ ಕಾಂಪ್ಲೆಕ್ಸ್, ಕೇಶ್ವಾಪುರ, ಹುಬ್ಬಳ್ಳಿ.

**ಪ್ರಕಟಣೆ**

